ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 32-33 ರೂ. 2.00 13 ಜುಲೈ 1995



ಬೆಂಗಳೂರಿನಲ್ಲಿ, ಕೊಜೆಂಟ್ರಿಕ್ಸ್ ಯೋಜನೆಯ ದೇಶ-ವಿರೋಧಿ, ಜನ-ವಿರೋಧಿ ಸ್ವರೂಪವನ್ನು ಬಯಲಿಗೆಳೆಯಲು ಜುಲೈ ೨೭ರಂದು ಬೆಂಗಳೂರಿನಲ್ಲಿ ಕೊಜೆಂಟ್ರಿಕ್ಸ್ ಭೂತದಹನ ಸಾಂಕೇತಿಕ ಪ್ರತಿಭಟನೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆಯಿತು.

ಆಗಸ್ಟ್ 14ರಂದು ರಾಜ್ಯಾದ್ಯಂತ ಪಿಕೆಟಿಂಗ್: ಸಿಪಿಐ(ಎಂ) ಕರೆ

ಕೊಜೆಂಟ್ರಿಕ್ಸ್ ಯೋಜನೆ ರದ್ದಾಗಲೇಬೇಕು

ಕೊನೆಗೂ ಮಹಾರಾಷ್ಟ್ರದ ಎನ್ರೋನ್ ಯೋಜನೆ ರದ್ದಾಗಿದೆ. ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯ ಭಾಗವಾದ ವಿದ್ಯುತ್ ನೀತಿಗೆ ಒಂದು ದೊಡ್ಡ ಸೋಲುಂಟಾಗಿದೆ. ಹಲವು ತಿಂಗಳಿಂದ ಮಹಾರಾಷ್ಟ್ರದ ಜನತೆ, ಮುಖ್ಯವಾಗಿ ಎಡ-ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಬೀದಿಗಿಳಿದ ದುಡಿಯುವ ಜನರ ನಿರಂತರ ಹೋರಾಟಕ್ಕೆ, ದೇಶಾದ್ಯಂತ ವ್ಯಕ್ತವಾದ ಸಾರ್ವಜನಿಕ ಅಭಿಪ್ರಾಯಕ್ಕೆ ಒಂದು ಮಹತ್ವಪೂರ್ಣ ವಿಜಯ ದೊರೆತಿದೆ.

ಈ ಸಂಪೂರ್ಣ ವಿದೇಶೀ ಒಡೆತನದ ವಿದ್ಯುತ್ ಯೋಜನೆಗೆ ಬಲವಾದ ವಿರೋಧ ಬರಲು ಕಾರಣ ಅದು ಮಹಾರಾಷ್ಟ್ರದ ಹಾಗೂ ಅಲ್ಲಿಯ ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾದ ಯೋಜನೆ. ಜನಸಾಮಾನ್ಯರು ವಿದ್ಯುತ್ತಿಗೆ ವಿಪರೀತ ಬೆಲೆ ತೆರಬೇಕಾಗಿ ಬರುವ, ರಾಜ್ಯದ ಖಜಾನೆಯನ್ನು ಸೂರೆ ಮಾಡಲು ಆ ವಿದೇಶೀ ಕಂಪೆನಿಗೆ ಅವಕಾಶ ನೀಡಿದ ಯೋಜನೆ.

ಕರ್ನಾಟಕದಲ್ಲಿ ಬರಬೇಕೆಂದಿರುವ ಕೊಜೆಂಟ್ರಿಕ್ಸ್ ಯೋಜನೆ ಕೂಡಾ ಇದೇ ಎನ್ರೋನ್ ಮಾದರಿಯ ವಿಳು "ಅತಿ ವೇಗ"ದ ವಿದ್ಯುತ್ ಯೋಜನೆಗಳಲ್ಲಿ ಒಂದು. ವಿದ್ಯುತ್ ಯೋಜನೆಗಳಲ್ಲಿ ಕಾಂಗ್ರೆಸ್(ಐ) ಕೇಂದ್ರ ಸರಕಾರದ "ಉದಾರೀಕರಣ-ಜಾಗತೀಕರಣ"ದ ನೀತಿಯ ಫಲ ಇದು. ಆದ್ದರಿಂದ ವಿದೇಶೀ ಕಂಪೆನಿಗಳಿಗೆ ಅನಗತ್ಯವಾಗಿ ಶೇ. 16 ಲಾಭದ ಗ್ಯಾರಂಟಿ ಮತ್ತು ಇತರ ಅಸಮರ್ಥನೀಯ ಸೌಲಭ್ಯಗಳನ್ನು ಒದಗಿಸುವ ಈ ಎಲ್ಲಾ ವಿಳು ಯೋಜನೆಗಳನ್ನು ರದ್ದು ಮಾಡಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕೂಡಾ ರಾಜ್ಯದ ಕೊಜೆಂಟ್ರಿಕ್ಸ್ ಯೋಜನೆಯ ವಿರುದ್ಧ ಆರಂಭಿಸಿರುವ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಆಗಸ್ಟ್ 4-5 ರಂದು ಸಭೆ ಸೇರಿದ ರಾಜ್ಯ ಸಮಿತಿ ಆಗಸ್ಟ್ 14ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲೂಕು ಕೇಂದ್ರಗಳಲ್ಲಿ ಸರಕಾರಿ ಕಛೇರಿಗಳೆದುರು ಪಿಕೆಟಿಂಗ್ ನಡೆಸಬೇಕೆಂದು ಕರೆ ನೀಡಿದೆ. ರಾಜ್ಯಾದ್ಯಂತ ಸುಮಾರು 20 ಸಾವಿರ ಮಂದಿ ಹೋರಾಟದ ಈ ಹಂತದಲ್ಲಿ ಭಾಗವಹಿಸಲಿದ್ದಾರೆ. ನಂತರ ಈ ಹೋರಾಟವನ್ನು ಎಲ್ಲಾ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಸೇರಿಕೊಂಡು ಮುಂದಿನ ಹಂತಕ್ಕೆ ಒಯ್ಯಲಾಗುವುದು.

ಮಹಾರಾಷ್ಟ್ರದಲ್ಲಿ ಸಿಪಿಐ(ಎಂ), ಸಿಪಿಐ., ಜನತಾದಳ ಮತ್ತಿತರ ಪಕ್ಷಗಳು ಹಾಗೂ ದೇಶದ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳು ಎನ್ರೋನ್ ಯೋಜನೆಯ ದುಷ್ಟ ಸ್ವರೂಪವನ್ನು ಬಯಲಿಗೆಳೆದು ಅದರ ವಿರುದ್ಧ ಹೋರಾಟಕ್ಕಿಳಿದಾಗ, ಅದಕ್ಕೆ ಜನಬೆಂಬಲ ದೊರೆಯಲಾರಂಭಿಸಿದಾಗ ಅಲ್ಲಿಯ ವಿಧಾನಸಭೆ ಚುನಾವಣೆಗಳ ಮೇಲೆ ಕಣ್ಣಿಟ್ಟಿದ್ದ ಶಿವಸೇನೆ-ಬಿಜೆಪಿ ಕೂಟವೂ ಎನ್ರೋನ್ ವಿರುದ್ಧ ಮಾತನಾಡಲಾರಂಭಿಸಿತು. ಆದರೂ ಅಲ್ಲಿ ಸರಕಾರ ರಚಿಸಿದ ಮೇಲೆ ಈ ನಿರ್ಣಯವನ್ನು ಪ್ರಕಟಿಸಲು ಅದಕ್ಕೆ ನಾಲ್ಕು ತಿಂಗಳು ಬೇಕಾಯಿತು. ಕೊನೆಗೂ ಅವರು ಜನಾಭಿಪ್ರಾಯಕ್ಕೆ ಮಣಿಯಲೇ ಬೇಕಾಯಿತು.

ಇಲ್ಲಿ ಕರ್ನಾಟಕದಲ್ಲೂ ಇದುವರೆಗೆ ಕೊಜೆಂಟ್ರಿಕ್ಸ್ ಬಗ್ಗೆ ಯೋಚಿಸಿರದ ಬಿಜೆಪಿ ಮಹಾರಾಷ್ಟ್ರದಲ್ಲಿ ತನ್ನ ಸರಕಾರ ಬಂದ ಮೇಲೆ ಈಗ ಪ್ರತಿದಿನ ಮಾತಿನ ಟೊಳ್ಳು ಗದ್ದಲ ಎಬ್ಬಿಸುತ್ತಿದೆ. ಆದರೆ ನಿರ್ದಿಷ್ಟವಾಗಿ ಏನೂ ಮಾಡುತ್ತಿಲ್ಲ. ಮೂಲಭೂತವಾಗಿ ನರಸಿಂಹರಾಯರ ಹೊಸ ಆರ್ಥಿಕ ನೀತಿಗಳನ್ನು ಬೆಂಬಲಿಸಿ, ನಂತರ ಅದಕ್ಕೆ ಜನಸಾಮಾನ್ಯರ ವಿರೋಧ ಕ್ರೋಢೀಕರಣಗೊಳ್ಳುವುದನ್ನು ಕಂಡ ಬಿ.ಜೆ.ಪಿ. ಅದೇ

ಪುಟ 8 ನೋಡಿ

ತ್ರಿಪುರಾ ಗುಡ್ಡಗಾಡು ಮಂಡಳಿ ಚುನಾವಣೆ

ಎಡರಂಗಕ್ಕೆ ಭರ್ಜರಿ ಜಯ

ತ್ರಿಪುರಾ ಬುಡಕಟ್ಟು ಪ್ರದೇಶ ಸ್ವಾಯತ್ತ ಜಿಲ್ಲಾ ಮಂಡಳಿಗೆ (ಟಿಟಿಎಡಿಸಿ) ನಡೆದ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಭಾರೀ ಜಯಗಳಿಸಿದೆ. ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಮೈತ್ರಿಕೂಟದ ವಶದಲ್ಲಿದ್ದ ಮಂಡಳಿ ಈಗ ಎಡರಂಗದ ಪಾಲಾಗಿದೆ.

ಜುಲೈ 26 ಮತ್ತು 29ರಂದು ಚುನಾವಣೆ ನಡೆದಿತ್ತು. ಮಂಡಳಿಯಲ್ಲಿ ಒಟ್ಟು 28 ಸ್ಥಾನಗಳಿದ್ದು 24 ಸ್ಥಾನಗಳಲ್ಲಿ ಮಾತ್ರ ಮತದಾನ ನಡೆದಿತ್ತು. ಉಳಿದ 4 ಸ್ಥಾನಗಳ ಚುನಾವಣೆಗೆ ಗುವಾಹಟಿ ಹೈಕೋರ್ಟಿನ ಅಗರ್ತಲಾ ಪೀಠ ತಡೆಯಾಜ್ಞೆ ನೀಡಿದೆ.

ಚುನಾವಣೆ ನಡೆದ 24 ಸ್ಥಾನಗಳಲ್ಲಿ ಎಲ್ಲಾ ಫಲಿತಾಂಶ ಪ್ರಕಟವಾಗಿದ್ದು ೨೩ ಸ್ಥಾನಗಳಲ್ಲಿ ಎಡರಂಗ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ಇದರಲ್ಲಿ ಸಿಪಿಐ(ಎಂ) ಗೆದ್ದ ಸ್ಥಾನಗಳೇ 18.

ಅಧ್ಯಕ್ಷರ ಭಾರೀ ಸೋಲು

ಮಂಡಳಿಯ ಇದುವರೆಗಿನ ಅಧ್ಯಕ್ಷ ಹಾಗೂ ಟಿ.ಯು.ಜೆ.ಎಸ್. ಅಭ್ಯರ್ಥಿ ಜಗದೀಶ್ ದೇಬ್‌ವರ್ಮಾ ಸಿಪಿಐ(ಎಂ) ಅಭ್ಯರ್ಥಿ ರಾಧಾ ಚರಣ ದೇಬ್‌ವರ್ಮಾ ಅವರ ಕೈಯಲ್ಲಿ ಭಾರೀ ಸೋಲನ್ನು ಉಂಡಿದ್ದಾರೆ.

ಈ ಅತ್ಯುತ್ಕೃಷ್ಟ ವಿಜಯ ಸಾಧಿಸಿದ ತ್ರಿಪುರಾದ ಎಡರಂಗವನ್ನು ಹಾಗೂ ಸಿಪಿಐ(ಎಂ)ನ ತ್ರಿಪುರಾ ಘಟಕವನ್ನು ಅಭಿನಂದಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಇದು ಬುಡಕಟ್ಟು ಸಿಪಿಐ(ಎಂ) ಮತ್ತು ಎಡಶಕ್ತಿಗಳಿಗಿರುವ ಬಲವಾದ ಬೆಂಬಲವನ್ನು ಹಾಗೂ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ಜನತೆಯ ಕಲ್ಯಾಣಕ್ಕೆ ಬಳಸುವಲ್ಲಿ ಸಿಪಿಐ(ಎಂ) ಸಾಮರ್ಥ್ಯದ ಬಗ್ಗೆ ಬುಡಕಟ್ಟು ಜನಗಳಲ್ಲೂ, ಇತರ ಜನಗಳಲ್ಲೂ ಇರುವ ವಿಶ್ವಾಸವನ್ನು ಎತ್ತಿ ತೋರುತ್ತದೆ ಎಂದಿದೆ.

ಹೇಗಾದರೂ ಚುನಾವಣೆಗಳೇ ನಡೆಯದಂತೆ ಮಾಡಲು ಹತಾಶ ಪ್ರಯತ್ನ ನಡೆಸಿದ್ದ ಕಾಂಗ್ರೆ-ಟಿ.ಯು.ಜೆ.ಎಸ್. ಕೂಟ ನಂತರ ಚುನಾವಣೆಯನ್ನು ಅಸ್ತವ್ಯಸ್ತಗೊಳಿಸಲು ಬುಡಕಟ್ಟು ಉಗ್ರಗಾಮಿಗಳೊಂದಿಗೆ ಕೈಜೋಡಿಸಿ ಸಂಚು ನಡೆಸಿದ್ದರು. ಚುನಾವಣೆಗೆ ಮುಂಚೆ ಭಾರೀ ಹಿಂಸಾಚಾರ ನಡೆದಿತ್ತು. ಸಿಪಿಐ(ಎಂ)ನ ಹಲವು ಕಾರ್ಯಕರ್ತರು ಗುಂಡಿಗೆ ಬಲಿಯಾಗಿದ್ದರು. ಇದನ್ನೆಲ್ಲಾ ಎದುರಿಸಿ ಎಡರಂಗ ಈ ಅಭೂತಪೂರ್ವ ವಿಜಯ ಸಾಧಿಸಿದೆ. ಜನಗಳೂ ಚುನಾವಣೆಗಳನ್ನು ಅಸ್ತವ್ಯಸ್ಥಗೊಳಿಸಬೇಕೆನ್ನುವ ಉಗ್ರಗಾಮಿಗಳ ಹಲ್ಲೆಗಳನ್ನು ಐಕ್ಯತೆಯಿಂದ ವಿಫಲಗೊಳಿಸಿದ್ದಾರೆ ಎಂದು ಪಿ.ಬಿ. ಹೇಳಿದೆ.

ಕಳೆದ ಐದು ವರ್ಷಗಳಲ್ಲಿ ಟಿ.ಯು.ಜೆ.ಎಸ್. ನೇತೃತ್ವದ ಮಂಡಳಿ ತನ್ನ ದುರಾಡಳಿತ ಮತ್ತು ಭ್ರಷ್ಟಾಚಾರದಿಂದ ಸ್ವಾಯತ್ತ ಜಿಲ್ಲಾ ಮಂಡಳಿಯ ಕೆಲಸವನ್ನ ಹಾಳುಗೆಡವಿತ್ತು. ಈ ಮಂಡಳಿ ಮತ್ತೆ ಸರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವ, ಇದರ ಸ್ವಾಯತ್ತ ವ್ಯವಸ್ಥೆ ನಿರ್ದಿಷ್ಟವಾಗಿ ಆದಿವಾಸಿ ಜನಗಳ ಹಕ್ಕುಗಳನ್ನು ರಕ್ಷಿಸುವ ಹಾಗೂ ಒಟ್ಟಾರೆಯಾಗಿ ಜನಸಾಮಾನ್ಯರ ಕಲ್ಯಾಣ ಸಾಧಿಸುವ ಒಂದು ಪರಿಣಾಮಕಾರಿಯಾದ ಸಾಧನವಾಗುವಂತೆ ಮಾಡುವ ದೊಡ್ಡ ಕರ್ತವ್ಯ ಈಗ ಸಿಪಿಐ(ಎಂ) ಹಾಗೂ ಎಡರಂಗದ ಮೇಲಿದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಕಾಂಗ್ರೆಸ್(ಐ), ಬಿಜೆಪಿಗಳನ್ನು ಸೋಲಿಸಲು ಸಿಪಿಐ(ಎಂ) ಶ್ರಮಿಸುತ್ತದೆ

ಕೇಂದ್ರ ಸಮಿತಿ ಪುನರುಚ್ಚಾರ

ಸಿ.ಪಿ.ಐ(ಎಂ)ನ ಹದಿನೈದನೇ ಮಹಾಧಿವೇಶನದಲ್ಲಿ ಆರಿಸಲ್ಪಟ್ಟ ಹೊಸ ಕೇಂದ್ರ ಸಮಿತಿಯ ಮೊದಲ ಪೂರ್ಣ ಪ್ರಮಾಣದ ಸಭೆ ನವದೆಹಲಿಯಲ್ಲಿ ಜುಲೈ 16 ರಿಂದ 18ರ ವರೆಗೆ ನಡೆದು ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಸೋಲಿಸಬೇಕೆಂಬ ಹದಿನೈದನೇ ಮಹಾಧಿವೇಶನದ ನಿರ್ಧಾರವನ್ನು ಪುನರುಚ್ಚರಿಸಿತು; ಈ ಗುರಿಸಾಧನೆಗೆ ಎಲ್ಲಾ ಎಡ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಕೇಂದ್ರ ಸಮಿತಿಯ ಈ ಸಭೆಯ ಕಲಾಪಗಳ ಬಗ್ಗೆ ಪಕ್ಷದ ಕೇಂದ್ರ ಕಛೇರಿಯಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಸಾಮೂಹಿಕ ಹೋರಾಟವನ್ನು ಹರಿಯಬಿಟ್ಟು ಎಡಶಕ್ತಿಗಳನ್ನು ಬಲಪಡಿಸುವುದಕ್ಕೆ ಎಡ ಐಕ್ಯತೆಯನ್ನು ಹೆಚ್ಚಿಸುವುದಕ್ಕೆ ಬಹಳ ಮಹತ್ವವಿದೆಯಾದರೂ ಕೇವಲ ಎಡಶಕ್ತಿಗಳಿಂದ ಮಾತ್ರವೇ ಕಾಂಗ್ರೆಸ್(ಐ) ಮತ್ತು ಬಿಜೆಪಿಯನ್ನು ಸೋಲಿಸುವ ಗುರಿ ಸಾಧನೆ ಸಾಧ್ಯವಿಲ್ಲ, ಇದಕ್ಕಾಗಿ ರಾಷ್ಟ್ರೀಯ ರಂಗ ಮಾತ್ರವಲ್ಲ ಅದರ ಹೊರಗಿನ ಜಾತ್ಯಾತೀತ ಶಕ್ತಿಗಳನ್ನು ಒಟ್ಟು ತರುವುದು ಅಗತ್ಯ ಎಂದರು. ಈ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಮುಲಾಯಂ ಸಿಂಗ್ ಯಾದವ್ ರ ಸಮಾಜವಾದೀ ಪಕ್ಷದ ಹೆಸರು ಪ್ರಸ್ತಾಪಿಸುತ್ತಾ "ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಸೋಲಿಸಬೇಕೆಂದಿದ್ದರೆ ಮುಲಾಯಂರನ್ನು ಬಿಟ್ಟು ಬಿಡಲು ಸಾಧ್ಯವಿಲ್ಲ"ಎಂದರು.

ಚುನಾವಣಾ ಪರ್ಯಾಯ: ಹಲವು ಅಡೆ-ತಡೆಗಳನ್ನು ದಾಟಬೇಕಾಗಿದೆ

ಚುನಾವಣೆಗೆ ಜಾತ್ಯಾತೀತ ವಿರೋಧ ಪಕ್ಷಗಳು ಒಂದು 'ಸರ್ವ ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವನ್ನು ರೂಪಿಸುವವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಇಂತಹ ಕಾರ್ಯಕ್ರಮಗಳ ಬಗ್ಗೆ ಇಷ್ಟು ಬೇಗನೇ ಮಾತನಾಡಲು ಸಾಧ್ಯವಿಲ್ಲ ಎಂದು ಸುರ್ಜಿತ್ ನುಡಿದರು. "ಮೊದಲು ವಸ್ತುಸ್ಥಿತಿ ಮೂಡಿ ಬರಲಿ, ಅವರು ಮೊದಲು ತಮ್ಮದೇ ಕಾರ್ಯಕ್ರಮಗಳನ್ನು ರೂಪಿಸಲಿ, ಒಂದು ಸರ್ವಸಾಮಾನ್ಯ ಕಾರ್ಯಕ್ರಮ ರೂಪಿಸುವ ತರಾತುರಿಯಲ್ಲಿ ನಾವೀಗ ಇಲ್ಲ" ಎಂದು ಅವರು ಹೇಳಿದರು. ಈ ಬಗ್ಗೆ ಮತ್ತೆ ಮತ್ತೆ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸುರ್ಜಿತ್ ಈಗ ಸಿಪಿಐ(ಎಂ)ನ ಪ್ರಥಮ ಕೆಲಸವೆಂದರೆ ಬಿಜೆಪಿ ಮತ್ತು ಕಾಂಗ್ರೆಸ್(ಐ)ನ್ನು ಸೋಲಿಸುವ ಅಗತ್ಯದ ಬಗ್ಗೆ ಎಲ್ಲಾ ಜಾತ್ಯಾತೀತ ಶಕ್ತಿಗಳಲ್ಲಿ ಒಂದು ಸಮಾನ ತಿಳುವಳಿಕೆ ಏರ್ಪಡುವಂತೆ ಮಾಡುವುದು ಎಂದರು.

ಹಲವು ಅಡೆ-ತಡೆಗಳನ್ನು ದಾಟಬೇಕಾಗಿದೆ, ಹಲವು ವಿವರಗಳನ್ನು ರೂಪಿಸಬೇಕಾಗಿದೆ. ಅವರೊಂದಿಗೆ ವಾದ ನಡೆಸಬೇಕಾಗಿದೆ. ಅವರಿಗೆ ಮನದಟ್ಟು ಮಾಡಿಸಬೇಕಾಗಿದೆ" ಎಂದ ಸುರ್ಜಿತ್‌ರವರು ಮುಂದುವರೆಯುತ್ತಾ ಈಗಿನ ಪ್ರಶ್ನೆ ಒಂದು ಸರ್ವಸಾಮಾನ್ಯ ಕನಿಷ್ಠ ಕಾರ್ಯವನ್ನು ರೂಪಿಸುವುದಲ್ಲ, ಈ ಎಲ್ಲಾ ಶಕ್ತಿಗಳನ್ನು ಒಂದು ಗೂಡಿಸುವುದು ಎಂದು ಸ್ಪಷ್ಟಪಡಿಸಿದರು. ಒಂದು ಚುನಾವಣಾ ಪರ್ಯಾಯ ರಚಿಸಲು ಇಷ್ಟು ಸಾಕೇ ಎಂದು ಪ್ರಶ್ನಿಸಿದಾಗ ಈ ಎರಡು ಶತ್ರುಗಳನ್ನು ಸೋಲಿಸುವುದೆಂದರೆ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆಯಿಡುವ ನೀತಿಗಳನ್ನು ಸೋಲಿಸುವುದು, ಜಾತ್ಯಾತೀತತೆಯನ್ನು ರಕ್ಷಿಸುವುದು ಎಂದೇ ಅರ್ಥ ಎಂದು ಸುರ್ಜಿತ್ ನುಡಿದರು.

ಕಾಂಗ್ರೆಸ್(ಐ) ನಿಂದ ಸಿಡಿದುಹೋದ ಗುಂಪಿನೊಂದಿಗೆ ಮಾತುಕತೆ ನಡೆಸಲು ಸಿಪಿಐ(ಎಂ) ನಿರ್ಧರಿಸಿದೆಯೇ ಎಂದು ಕೇಳಿದಾಗ ಸುರ್ಜಿತ್ "ಮೊದಲು ತಾವೆಲ್ಲಿ ನಿಂತಿದ್ದೇವೆ ಎಂದು ಅವರು ನಿರ್ಧರಿಸಿಕೊಳ್ಳಲಿ. ಅವರು ಎತ್ತಿದ ಪ್ರಶ್ನೆಗಳು- ಭ್ರಷ್ಟಾಚಾರ ಕುರಿತ, ಕೋಮುವಾದದ ವಿರುದ್ಧದ ಹಾಗೂ ಆರ್ಥಿಕ ನೀತಿಗಳ ವಿರುದ್ಧದ ಪ್ರಶ್ನೆಗಳು -ಸಕಾರಾತ್ಮಕ ಎಂದಷ್ಟೇ ನಾವು ಹೇಳಿದ್ದೇವೆ. ಆದರೆ ನಮ್ಮ ಮೊದಲ ಆಸಕ್ತಿ ಜಾತ್ಯಾತೀತ ಪ್ರತಿಪಕ್ಷಗಳನ್ನು ಒಟ್ಟಿಗೆ ತರುವುದು" ಎಂದು ಉತ್ತರಿಸಿದರು.

ತಮಿಳುನಾಡಿನಲ್ಲಿ ವಿ. ಗೋಪಾಲಸ್ವಾಮಿ ನೇತೃತ್ವದ ಎಂಡಿಎಂಕೆಗೆ ಸಿಪಿಐ(ಎಂ) ಬೆಂಬಲ ಕುರಿತಂತೆ ಹೇಳುತ್ತಾ ತಾನು ಅವರ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದು ಅಲ್ಲಿ ಅವರು ಕೇಂದ್ರದ ಹಾಗೂ ರಾಜ್ಯದ ಆರ್ಥಿಕ ನೀತಿಗಳ ವಿರುದ್ಧ, ಜಾತ್ಯಾತೀತೆಯ ರಕ್ಷಣೆ ಹಾಗೂ ಭ್ರಷ್ಟಾಚಾರದ ವಿರುದ್ಧ ನಿಲುವು ತಳೆದದ್ದರಿಂದ ಸಿಪಿಐ(ಎಂ) ಅವರೊಂದಿಗೆ ಕೆಲಸ ಮಾಡಲು ನಿರ್ಧರಿಸಿತು ಎಂದರು. ಆದರೆ ಅದೇ ವೇಳೆಗೆ ಶ್ರೀಲಂಕಾದ ಜನಾಂಗೀಯ ಸಮಸ್ಯೆಯ ಬಗ್ಗೆ ಅವರ ಸಂಕುಚಿತ ತಿಳುವಳಿಕೆಯನ್ನು ಒಪ್ಪುವುದಿಲ್ಲ, ಯಾವುದೇ ರೀತಿಯಲ್ಲಿ ಈ ಬಗ್ಗೆ ಎಂಡಿಎಂಕೆ ನಿಲುವನ್ನು ಬೆಂಬಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವುದಾಗಿಯೂ ತಿಳಿಸಿದರು. ಶ್ರೀಲಂಕಾ ಪ್ರಶ್ನೆ ಕುರಿತಂತೆ ಎಂಡಿಎಂಕೆ ಮಾತ್ರವಲ್ಲ ದ್ರಾವಿಡ ಪಕ್ಷಗಳು ತಾವು ತಮಿಳು-ಪರವಾಗಿ ಎಷ್ಟೊಂದು ಉಗ್ರ ನಿಲುವು ತಳೆದಿದ್ದೇವೆ ಎಂದು ತೋರ್ಪಡಿಸಲು ಸ್ಪರ್ಧೆ ನಡೆಸುತ್ತಿದ್ದಾರೆ ಎಂಬುದರತ್ತ ಗಮನ ಸೆಳೆದರು. ಆದರೆ ಈ ಹಿಂದೆ ಎಂಡಿಎಂಕೆ ಭಾರತದೊಳಗೆ ತಮಿಳು ಪ್ರತ್ಯೇಕತೆಯ ನಿಲುವನ್ನು ತ್ಯಜಿಸಿತ್ತು. ರಾಜ್ಯ ಸಮ್ಮೇಳನದಲ್ಲಿ ಭಾರತದ ಐಕ್ಯತೆಗೆ ತಾನು ಬದ್ಧ ಎಂದಿತ್ತು

ಪುಟ 8 ನೋಡಿ

ವರ್ತಮಾನ ಇತಿಹಾಸ

ಆಂತರಿಕ ತುರ್ತು ಪರಿಸ್ಥಿತಿಯ ಕರಾಳ ದಿವಸಗಳು

-ಸಿ. ನಂಜುಂಡಪ್ಪ

(ಹಿಂದಿನ ಸಂಚಿಕೆಯಿಂದ)

ಮಾಲಿಕರ ಧಿಮಾಕು ಹೆಚ್ಚಿಸಿದ! ಜೇಬು ತುಂಬಿದ ಬದಲಾವಣೆ

ಪ್ಲಾಂಟೇಷನ್ ಕಾರ್ಮಿಕರ ಕೂಲಿಯ ಹೆಚ್ಚಳದ ಬಗ್ಗೆ 1975ರಲ್ಲಿ 5 ಸುತ್ತಿನ ಮಾತುಕತೆಯಲ್ಲಿ ನಡೆದು 6ನೆಯ ಸುತ್ತಿನ ಮಾತುಕತೆಯಲ್ಲಿ ಜುಲೈ 9ರಂದು ಬೆಂಗಳೂರಿನಲ್ಲಿ ವುಡ್ ಲ್ಯಾಂಡ್ಸ್ ಹೋಟೆಲ್‌ನಲ್ಲಿ ನಡೆಯುವುದೆಂದು ನಿರ್ಧಾರವಾಗಿದ್ದಿತು. 72 ರಿಂದ 75ರವರೆಗೆ ಸಿಐಟಿಯು ನಡೆಸಿದ್ದ ಪ್ಲಾಂಟೇಷನ್ ಕಾರ್ಮಿಕರ ಐಕ್ಯಚಳುವಳಿಯ ಪರಿಣಾಮವಾಗಿ ಹಿಂದಿನ 5 ಸುತ್ತು ಮಾತಕತೆಗಳಲ್ಲಿ ಇತರ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸಿಐಟಿಯು ಜತೆಯಲ್ಲಿ ಇದ್ದರು. ಹೀಗಾಗಿ ದಿವಸಕ್ಕೆ 65 ಪೈಸೆ ಹೆಚ್ಚಳ ಕೊಡುವಲ್ಲಿಗೆ ಮಾಲೀಕರ ಪ್ರತಿನಿಧಿಗಳು ಬಂದಿದ್ದರು. ಒಂದು ರೂಪಾಯಿ ಹೆಚ್ಚಳವನ್ನು ಪಡೆಯುವುದು ನಮ್ಮ ಉದ್ದೇಶವಾಗಿದ್ದಿತು. ವೇತನ ಸ್ತಂಭನ ವಿದ್ದುದರಿಂದ ಹೆಚ್ಚಳವನ್ನು ಕೂಲಿಯ ರೂಪದಲ್ಲಿ ಕೊಟ್ಟರೆ ಕಾರ್ಮಿಕರ ಕೈಗೆ ಏನೂ ಸಿಕ್ಕುವುದಿಲ್ಲವೆಂದೂ, ತುಟ್ಟಿಭತ್ತೆಯ ರೂಪದಲ್ಲಿ ಕೊಟ್ಟರೆ ಅವೆವಾಸಿಯಾದರೂ ಅವರಿಗೆ ಸಿಕ್ಕಬಹುದೆಂದೂ ಆದ್ದರಿಂದ ಅದನ್ನು ಚರ್ಚಿಸಲು ಅವರು ಸಿದ್ಧರಾಗಿದ್ದರು.

ಜುಲೈ 9ರಂದು ವುಡ್‌ಲ್ಯಾಂಡ್ಸ್ ಹೋಟೇಲಿನ ನ್ಯೂ ಕಾನ್‌ಫರೆನ್ಸ್ ಹಾಲಿನಲ್ಲಿ ಮಾತುಕತೆ ಪ್ರಾರಂಭವಾಯಿತು. ನಾಲ್ಕು ಜಿಲ್ಲೆಗಳಿಂದ ನಾವು ಒಟ್ಟು 12 ಮಂದಿ ಸಿಐಟಿಯು ಪ್ರತಿನಿಧಿಗಳು ಇದ್ದೆವು. ಆಗ ವಾತಾವರಣ ಪೂರ್ತಿ ಬದಲಾಗಿತ್ತು. ಮಾಲೀಕರ ಪ್ರತಿನಿಧಿಗಳು ಹಿಂದಿನ ಸಭೆಗಳ ಚರ್ಚೆಯನ್ನು ಕೈಬಿಟ್ಟು ಹೊಸದಾಗಿ ಚರ್ಚೆ ಪ್ರಾರಂಭಿಸಿದರು. ಗಂಟೆಗೊಮ್ಮೆ ಒಬ್ಬರು ಬಂದು ಯಾರೂ ಏನು ಮಾತನಾಡಿದರು ಎಂಬುದನ್ನು ಕೇಳಿಕೊಂಡು ಹೋಗುತ್ತಿದ್ದರು. ಮಾಲೀಕರ ಪ್ರತಿನಿಧಿಗಳ ಪೈಕಿ ಹಿರಿಯರೊಬ್ಬರು ನನ್ನನ್ನು ಬೇರೊಂದು ಕೋಣೆಗೆ ಕರೆದೊಯ್ದು ಮುಖ್ಯಮಂತ್ರಿ ದೇವರಾಜು ಅರಸರು ಮಾತುಕತೆಯಲ್ಲಿ ಆಸಕ್ತರಾಗಿದ್ದಾರೆಂದೂ, ಆಗಾಗ್ಗೆ ಬಂದು ಕೇಳಿ ಹೋಗುತ್ತಿರುವ ವ್ಯಕ್ತಿ ಸ್ಪೆಷಲ್ ಬ್ರಾಂಚ್ ಸಬ್‌ಇನ್ಸ್‌ಪೆಕ್ಟರ್ ಬಸವರಾಜು ಎಂಬುವರೆಂದೂ, ನ್ಯೂ ಕಾನ್‌ಫರೆನ್ಸ್ ಹಾಲಿನ ಹಿಂಭಾಗದಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಒಂದು ವೈರ್‌ಲೆಸ್ ಸೆಟ್ ಇಟ್ಟುಕೊಂಡು ಟೇಬಲ್ ಕುರ್ಚಿ ಹಾಕಿಕೊಂಡು ಕುಳಿತಿರುವುದಾಗಿಯೂ, ನಾವು ಮಾತನಾಡುವಾಗ ಜಾಗರೂಕರಾಗಿರಬೇಕೆಂದೂ ತಿಳಿಸಿದರು. ಕೊಡಗಿನವರಾಗಿದ್ದ ಎಫ್.ಎಂ. ಖಾನ್ ಮತ್ತು ಆರ್. ಗುಂಡೂರಾವ್ ಆಗ ದೇವರಾಜ ಅರಸರ ಬಲಗೈ ಬಂಟರಾಗಿದ್ದರು.

ಮಧ್ಯಾಹ್ನ ಊಟವಾದ ನಂತರ ನಾವು ಹನ್ನೆರಡು ಜನ ಸಭೆ ಸೇರಿ ಇಬ್ಬರು ಮಾತ್ರ ಮಧ್ಯಾಹ್ನದ ಸಭೆಯಲ್ಲಿರಬೇಕೆಂದೂ ಒಪ್ಪಂದ 65 ಪೈಸೆಗಿಂತಲೂ ಕಡಿಮೆಯಾದರೆ ಅವರು ಒಪ್ಪಂದಕ್ಕೆ ಸಿಐಟಿಯುವಿನ ವಿರೋಧವನ್ನು ದಾಖಲು ಮಾಡಿ ಬರಬೇಕೆಂದೂ, ಬಂಧನವಾಗುವ ಸಂಭವವಿರುವುದರಿಂದ ಇತರ ಹತ್ತು ಪ್ರತಿನಿಧಿಗಳು ಕೂಡಲೇ ಅಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆಂದೂ ನಿರ್ಧರಿಸಿದೆವು. ಆ ಪ್ರಕಾರ ನಾನು ಬೆಂಗಳೂರಿಂದ ಮೈಸೂರಿಗೆ ಹೋದೆ; 35 ಪೈಸೆ ಹೆಚ್ಚಳಕ್ಕೆ ಒಪ್ಪವಾಯಿತೆಂದು ಮರುದಿವಸ ಆಕಾಶವಾಣಿ ಮತ್ತು ದಿನಪತ್ರಿಕೆಗಳಲ್ಲಿ ಸುದ್ದಿ ಬಂದಿತು. ಕೆಲವು ದಿವಸಗಳ ನಂತರ ನಾನು ಮೈಸೂರಿಂದ ಚಿಕ್ಕಮಗಳೂರನ್ನು ತಲುಪಿದೆ, ಅಲ್ಲಿಯವರೆಗೆ ಅಲ್ಲಿದ್ದ ನಮ್ಮ ಕಛೇರಿಗೆ ಪೋಲೀಸ್ ಪಹರೆ ಇತ್ತು. ಆಫೀಸಿಗೆ ಯಾರೇ ಹೋದರೂ ಅವರ ಹೆಸರು ಇತ್ಯಾದಿಗಳನ್ನು ಕೇಳಿ ಪೋಲೀಸರು ಹೆದರಿಸುತ್ತಿದ್ದರು. ನಾನು ಚಿಕ್ಕಮಗಳೂರನ್ನು ತಲುಪಿದ ದಿವಸ ಅಲ್ಲಿಯ ದಿನಪತ್ರಿಕೆಗಳಲ್ಲಿ ಎಸ್.ಪಿ. (ಸೂಪರಿಂಟೆಂಡೆಂಟ್ ಆಫ್ ಪೋಲೀಸ್) ಸಿದ್ದಲಿಂಗುರವರ ಹೇಳಿಕೆ ಪ್ರಕಟವಾಗಿದ್ದಿತು. ಪ್ಲಾಂಟೇಷನ್ ಗಳಲ್ಲಿ ಎಲ್ಲವೂ ಶಾಂತವಾಗಿದೆ ಎಂದು ಅವರು ಹೇಳಿದ್ದರು. ಅಂದಿನಿಂದ ಪೋಲೀಸು ಪಹರೆಯನ್ನು ಹಿಂತೆಗೆದುಕೊಂಡಿದ್ದರು.

ಆಂತರಿಕ ತುರ್ತು ಪರಿಸ್ಥಿತಿಯಿಂದಾಗಿ ಪ್ಲಾಂಟೇಶನ್ ಕಾರ್ಮಿಕರಿಗೆ ಹೆಚ್ಚಿನ ವೇತನದ ರೂಪದಲ್ಲಿ ಸಿಕ್ಕಬೇಕಾಗಿದ್ದ ಕೋಟ್ಯಾಂತರ ರೂಪಾಯಿ ಹಣ ಪ್ಲಾಂಟೇಷ್ ಮಾಲೀಕರಿಗೆ ಉಳಿತಾಯವಾಯಿತು.

ಅಲೆದಾಟ ಪ್ರಾರಂಭ

ನಾನು ಮಂಗಳೂರಿಗೆ ಹೋಗಿ (ಆಗ ಪಕ್ಷದ ರಾಜ್ಯ ಕೇಂದ್ರ ಮಂಗಳೂರು ಆಗಿದ್ದಿತು) ಮುಖಂಡರೊಂದಿಗೆ ಸಮಾಲೋಚಿಸಿದೆ. ಚಿಕ್ಕಮಗಳೂರಲ್ಲಿದ್ದ ಸಿಐಟಿಯು ಸಂಘವು "ಕಾರ್ಮಿಕ ದ್ರೋಹಿ ಒಪ್ಪಂದಘಾಲನ್ನು ಮಾಡುವವರನ್ನು ದೂರ ಮಾಡಿರಿ" ಎಂಬ ತಲೆಬರಹದ ಕರಪತ್ರವನ್ನು ಪ್ರಕಟಿಸಿ ಕಾರ್ಮಿಕರ ನಡುವೆ ಹಂಚಿತು. ಒಪ್ಪಂದಕ್ಕೆ ರುಜು ಮಾಡಿದ್ದ ಕಾರ್ಮಿಕ ಮುಖಂಡರನ್ನು ಕಾರ್ಮಿಕರು ಪ್ರಶ್ನಿಸಲಾರಂಭಿಸಿದರು. ಚಿಕ್ಕಮಗಳೂರಿನಲ್ಲಿ ಬಾಳೆ ಹೊನ್ನೂರಿನಲ್ಲಿ ರುಜು ಮಾಡಿದ್ದ ಮುಖಂಡರ ಮೇಲೆ ಕಾರ್ಮಿಕರು ಕೈ ಮಾಡಿದರು. ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ನನ್ನ ಮೇಲೆ ದೂರುಗಳು ಬರಲಾರಂಭಿಸಿದವು.

ಬಾಬಾಬುಡನ್ ಗಿರಿಯ ಬದಿಯಲ್ಲಿರುವ ಮಾಣಿಕ್ಯಧಾರಾ ಕಾಪರ್ ಮೈನ್ಸ್ ಕಾರ್ಮಿಕರು ನಾನು ಅಧ್ಯಕ್ಷನಾಗಿದ್ದ ಕರ್ನಾಟಕ ಮೈನ್ ವರ್ಕರ್ಸ್ ಯೂನಿಯನ್ನಿನ ಸದಸ್ಯರಾಗಿದ್ದರು. ಆಗಣಿ ಬಿರ್ಲಾರವರದ್ದಾಗಿದ್ದಿತು. ಕಾರ್ಮಿಕರು ಮೇನೇಜರನ್ನು ಘೆರಾವೋ ಮಾಡಿದ್ದರೆಂದೂ ಪೋಲೀಸರು ನನ್ನನ್ನು ಹುಡುಕುತ್ತಿದ್ದಾರೆಂದೂ ವಕೀಲರೊಬ್ಬರು ನನಗೆ ತಿಳಿಸಿದರು.

ಆ ಕಾಲದಲ್ಲಿ ಇದ್ದ ಜಿಲ್ಲಾಧಿಕಾರಿಯವರ ತಮ್ಮ ಆ ಊರಲ್ಲಿ ಬ್ಯಾಂಕೊಂದರಲ್ಲಿ ಕೆಲಸದಲ್ಲಿದ್ದರು.

ನನ್ನ ಮೇಲೆ ಚಿಕ್ಕಮಗಳೂರು ಜಿಲ್ಲೆಯ ಬೇರೆ ಬೇರೆ ಊರುಗಳಿಂದ ಮಾತ್ರವಲ್ಲದೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ದೂರುಗಳು ಬಂದಿರುವುದಾಗಿ ತಿಳಿಯಿತು. ದೂರುಗಳಲ್ಲಿ, ಎರಡು ಬಗೆ ಇದ್ದವು. ನನ್ನಿಂದ ತಮ್ಮ ಜೀವಕ್ಕೆ ಅಪಾಯವಿರುವುದಾಗಿ ನಾನು ಒಬ್ಬ ಅಪಾಯಕಾರಿ ವ್ಯಕ್ತಿಯೆಂದೂ, ನನ್ನನ್ನು 'ಮೀಸಾ' ಪ್ರಕಾರ ಬಂಧಿಸಬೇಕು ಎಂಬುದು ಒಂದು ತರಹೆಯಾದರೆ, ನಾನು ಒಬ್ಬ ಕಳ್ಳ ಸಾಗಾಣಿಕೆ ಮಾಡುವವನೆಂದೂ ನನ್ನನ್ನು 'ಕಾಫಿ ಪೋಸ' ಪ್ರಕಾರ ಬಂಧಿಸಬೇಕೆಂಬುದು ಇನ್ನೊಂದು ಧಾಟಿಯದು.

ಜಿಲ್ಲೆಯ ಕಾಂಗ್ರೆಸ್ (ಒ) ನಾಯಕ ಪೋಲೀಸರು ನನ್ನನ್ನು ಹುಡುಕುತ್ತಿದ್ದಾರೆಂದೂ, ಜೈಲಿನಲ್ಲಿ ನಮ್ಮ ಪಕ್ಷದವರನ್ನು ಅವರ ಪಕ್ಷದವರನ್ನು ಕಾಣುವಂತೆ ಕಾಣುವುದಿಲ್ಲವೆಂದೂ ಹೇಳಿ ನಾನು ಕೂಡಲೇ ತಪ್ಪಿಸಿಕೊಂಡು ಹೋಗಬೇಕೆಂದು ಹೇಳಿದರು. ಪ.ಬಂಗಾಳದ ಜೈಲುಗಳಲ್ಲಿದ್ದ ಪಕ್ಷದ ಸಂಗಾತಿಗಳು ಭಯಾನಕ ಕಾಯಿಲೆಗಳ ಬ್ಯಾಕ್ಟೀರಿಯಗಳಿದ್ದ ಹೊದಿಕೆಗಳನ್ನು ಉಪಯೋಗಿಸುವಂತೆ ಮಾಡಿದ್ದುದು ನೆನಪಾಯಿತು.ಅಲ್ಲಿಂದ ನನ್ನ ಅಲೆದಾಟ ಪ್ರಾರಂಭವಾಯಿತು.

ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿದ ಮೂರು ತಿಂಗಳಲ್ಲಿ ಬೋನಸ್ ಸುಗ್ರೀವಾಜ್ಞೆಯನ್ನು ಹೊರಡಿಸಿ ಕಾರ್ಮಿಕರಿಗೆ ದೊಡ್ಡ ಅನ್ಯಾಯ ಮಾಡಿತು.

ಈ ನಡುವೆ ಪಿ.ಜಿ. ಸದಸ್ಯ ಓ. ರಾಮಮೂರ್ತಿ ಒಬ್ಬರ ಮೂಲಕ ಸಂದೇಶವನ್ನು ಕಳಿಸಿ ನಾನು ಬಂಧನಕ್ಕೆ ಗುರಿಯಾಗಿ ಜೈಲಿ ಹೋಗಕೂಡದೆಂದೂ ತಪ್ಪಿಸಿಕೊಂಡು ಹೊರಗಿದ್ದುಕೊಂಡೇ ಕೆಲಸ ಮಾಡಬೇಕೆಂದು ತಿಳಿಸಿದ್ದರು.

ಆ ಕಾಲದಲ್ಲಿ ನನ್ನ ಕಾರ್ಯವ್ಯಾಪ್ತಿಯ ಹೊರಗಿದ್ದ ತಿಪಟೂರು, ಬಂಗಾರ ಪೇಟೆ, ಗುಲ್ಬರ್ಗ, ಸಿರ್ಸಿ,ಕುಮಟ ಮೊದಲಾದ ಸ್ಥಳಗಳಿಗೂ ಹೋಗಬೇಕಾಗಿ ಬಂದಿತು.

1976ರ ವೇಳೆಗೆ ಆಂತರಿಕ ತುರ್ತು ಪರಿಸ್ಥಿತಿಯಲ್ಲಿ ಕೆಲಸ ಮಾಡುವುದು ರೂಢಿಯಾಗಿ ಬಿಟ್ಟಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನು ತಂಗಿದ್ದ ಒಬ್ಬರ ಮನೆಯನ್ನು ಪೋಲೀಸರು ಶೋಧ ಮಾಡಿದ್ದರು. ಹೀಗಾಗಿ ಒಂದೇ ಕಡೆ ಹೆಚ್ಚು ದಿವಸ ಇರಲು ಆಗುತ್ತಿರಲಿಲ್ಲ.

ಕೆಲವು ತಿಂಗಳನಂತರ ಚಿಕ್ಕಮಗಳೂರಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸಭೆ ನಡೆಯಬೇಕಿತ್ತು. ಅಂದು ನಾನು ಆಫೀಸನ್ನು ತಲಪಿದ್ದೆ. ಸ್ವಲ್ಪ ಹೊತ್ತಿನಲ್ಲಿ ಪೋಲೀಸ್ ಸಬ್‌ಇನ್ಸಪೆಕ್ಟರ್ ಕೃಷ್ಣಪ್ಪ ಎಂಬುವರು ಬಂದು ಕುಳಿತರು. ಸಭೆಯಲ್ಲಿ ನಾನು ಏನು ಮಾತನಾಡುತ್ತೇನೆ ಎಂಬುದನ್ನು ಬರೆದುಕೊಡಬೇಕೆಂದು, ಬರೆದುಕೊಡದಿದ್ದರೆ ಸಭೆ ನಡೆಯಲು ಬಿಡುವುದಿಲ್ಲವೆಂದು ಬೆದರಿಸಿದರು. ಆ ಸಂಜೆಯವರೆಗೆ ನನಗೆ ಆ ಊರಿನಲ್ಲಿ ಉಳಿಯಲು ಸಾಧ್ಯವಾಗಲಿಲ್ಲ.

ಕಾಡಿನ ನಡುವೆ ಸಭೆಗಳನ್ನು ನಡೆಸುತ್ತಿದ್ದೆವು. ಕರ್ನಾಟಕ ತೋಟ ಕಾರ್ಮಿಕರ ಸಂಘದ ದ್ವೈವಾರ್ಷಿಕ ಮಹಾ ಸಭೆ ಕಾಡಿನಲ್ಲಿ ಸುತ್ತಲು ಕಾರ್ಮಿಕರ ಪಹರೆಯ ನಡುವೆ ಜರುಗಿತು. ಎರಡು ದಿವಸಗಳ ಪಕ್ಷದ ಶಾಲೆಯೂ ನಡೆಯಿತು.

ದಬ್ಬಾಳಿಕೆ

ಆಂತರಿಕ ತುರ್ತು ಪರಿಸ್ಥಿತಿಯ ಕಾಲದಲ್ಲಿ ನಮ್ಮ ಸಂಘಟನೆಯಲ್ಲಿದ್ದ ಪ್ಲಾಂಟೇಷನ್ ಕಾರ್ಮಿಕರ ಮೇಲೆ ವಿಶೇಷವಾದ ದಬ್ಬಾಳಿಕೆ ನಡೆಯಿತು. ಚಿಕ್ಕಮಗಳೂರು ತಾಲೂಕಿನ ಹೊಸಪೇಟೆ ಎಸ್ಟೇಟಿನಲ್ಲಿ ರಾಜು ಎಂಬ ಕಾರ್ಮಿಕನನ್ನು ಗುಂಡಿಕ್ಕಿಕೊಲ್ಲಲಾಯಿತು. ಬೊಕ್ಕಸಾನು ಎಸ್ಟೇಟಿನಲ್ಲಿ ವಿವಾದವಲ್ಲಿದ್ದ ಕಾರ್ಮಿಕರನ್ನು ಕೋವಿ ತೋರಿಸಿ ಒಕ್ಕಲೆಬ್ಬಿಸಲಾಯಿತು. ಬೇದನೆ ಎಸ್ಟೇಟಿಗೆ ವಾಹನಗಳಲ್ಲಿ ಹೊರರಾಜ್ಯದಿಂದ ಬಂದ ಶಸ್ತ್ರಸಜ್ಜಿತರಾದ ಗೂಂಡಾಗಳು ಕಾರ್ಮಿಕರ ಮೇಲೆ ಎರಗಿದರು. ಸಿನಿಮಾವಲ್ಲಿ ನಡೆಯುವಂತೆ ಕಾಳಗ ನಡೆಯಿತು. ಅಂದು ಕಾರ್ಮಿಕ ಸಚಿವರಾಗಿದ್ದ ಯೂಸ್ಥಾನವನ್ನುಭೇಟಿ ಮಾಡಿ ಈ ಕುರಿತಾದ ಮನವಿಯನ್ನು ಕೊಟ್ಟಾಗ ಅವರು ಮನಸ್ಸಿನಲ್ಲಿದ್ದ ವಿಚಾರಗಳನ್ನು ನಂಬಲಿಲ್ಲ. ಯಾಕೆಂದರೆ ಆಗ ಅವರೇ ಸ್ವತಃ ಶುಂಟಿಕೊಪ್ಪದ ಬಳಿಯ ಸ್ಯಾಂಡಲ್ ವುಡ್ ಎಸ್ಟೇಟಿನ ಮಾಲೀಕರೆಂದು ಹೇಳಲಾಗುತ್ತಿತ್ತು.

ತುರ್ತುಪರಿಸ್ಥಿತಿ ಬಲಪ್ರತಿಗಾಮಿಗಳ ವಿರುದ್ಧ ಒಂದು ಕ್ರಮ ಎಂದು ಇಂದಿರಾಗಾಂಧಿಯವರು ಹೇಳಿಕೊಂಡರು. ಅದು ನಿಜ ಎಂದು ಕೆಲವು 'ಪ್ರಗತಿಪರ'ರೆನಿಸಿಕೊಂಡವರೂ ನಂಬಿದರು. ಕಾರ್ಮಿಕ ವರ್ಗವನ್ನು ನಂಬಿಸಲು ಪ್ರಯತ್ನಿಸಿದರು. ಆದರೆ ಇದು ಶುದ್ಧ ಸುಳ್ಳು, ತುರ್ತು ಪರಿಸ್ಥಿತಿ ದುಡಿಯುವ ಜನರ ಹಕ್ಕುಗಳ ವಿರುದ್ಧ ಎಂದು ಹೇಗೆ ಬೇಗನೇ ಅನುಭವಕ್ಕೆ ಬಂತು ಎಂಬ ಬಗ್ಗೆ ಒಂದು ನೆನಪು

ಚಿಕ್ಕಮಗಳೂರು ಜಿಲ್ಲೆಯಲ್ಲಿ ನಾನು ತಪ್ಪಿಸಿದರೂ ಕಳಸಹೋಬಳಿಯ ಕೆ. ಸುಕುಮಾರ್ ಮತ್ತು ಬಾಲಕೃಷ್ಣನ್ ನಾಯರ್ ಡಿ.ಐ.ಆರ್. ಅಡಿಯಲ್ಲಿ ಬಂಧಿತರಾದರು.

ಆಂತರಿಕ ತುರ್ತು ಪರಿಸ್ಥಿತಿಯ ಕಾಲದಲ್ಲಿ ಪಕ್ಷದ ಸಭೆಗಳು ಗುಪ್ತವಾಗಿ ನಡೆಯುತ್ತಿದ್ದುವು. ಇದನ್ನು ಹೊರಗಿದ್ದವರಿಗೆ ತಿಳಿಸಲು ಆಗುತ್ತಿರಲಿಲ್ಲ. ಪತ್ರಿಕೆಗಳ ಸೆನ್ಸಾರ್, ಸಭೆಗಳ ಮೇಲೆ ನಿಷೇಧ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸೌಲಭ್ಯಗಳ ಮೇಲೆ ನಿರ್ಬಂಧಗಳಿದ್ದುವೆಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳದೆ ಇದ್ದ ಮುಖಂಡರಿಗೆ ಸಹಜವಾಗಿಯೇ ಆಂತರಿಕ ತುರ್ತು ಪರಿಸ್ಥಿತಿಯ ಕಾಲದಲ್ಲಿ ಏನೂ ನಡೆಯುತ್ತಿಲ್ಲ ಎಂಬ ಭಾವನೆ ಬರುತ್ತಿದ್ದಿತು. ಆ ಮಟ್ಟಿಗೆ ವರ್ಗ ಶತ್ರುಗಳ ಉದ್ದೇಶ ಸಾಧನೆಯಾಗುತ್ತಿದ್ದಿತು.

ಆಂತರಿಕ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಿದ ನಮ್ಮ ಪಕ್ಷವು 1977ರ ಲೋಕಸಭೆಯ ಚುನಾವಣೆಯ ನಂತರ ಬಲಿಷ್ಠವಾಗಿ ಬೆಳೆದು ಬಂದಿತು. 1977ರ ಜೂನಿನಲ್ಲಿ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರವು ಈವರೆಗೆ ಅಧಿಕಾರದಲ್ಲಿದೆ. ಆನಂತರ ನಡೆದ ತ್ರಿಪುರ ಎಡರಂಗ ಸರ್ಕಾರವು (ನಡುವಿನ ಅವಧಿಯನ್ನು ಬಿಟ್ಟು) ಈಗಲೂ ಅಧಿಕಾರದಲ್ಲಿದೆ. ಶೋಷಣೆ ಮಾಡುವ ಸುಲಿಗೆ ಕೋರರ ಆಳುವ ವರ್ಗಗಳ ದಬ್ಬಾಳಿಕೆಯ ವಿರುದ್ಧವಾಗಿ ಸತತವಾಗಿ, ಸುಸಂಗತವಾಗಿ ಸಿಪಿಐ(ಎಂ) ಹೋರಾಡುತ್ತಾ ಬಂದಿದೆ.

ಅಧಿಕಾರದಲ್ಲಿರುವ ಕಾಂಗ್ರೆಸ್(ಐ) ಪಕ್ಷವು ಬಲಹೀನವಾಗಿದೆ. ದೇಶದ ಪರಿಸ್ಥಿತಿ 1975ರಲ್ಲಿ ಇದ್ದುದಕ್ಕಿಂತಲೂ ಇಂದು ಬಹಳ ಗಂಭೀರವಾಗಿದೆ. ಆಳುವ ವರ್ಗಗಳು ಧಾಳಿ ನಡೆಸಬಹುದು ಎಂಬುದರ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವುದು, ದಾಳಿ ಬಂದಾಗ ಅದರ ವಿರುದ್ಧ ಸಮಸ್ತ ಜನತೆ ಹೋರಾಡುವುದು ಅಗತ್ಯ ಎಂದು ಅವರನ್ನು ಎಚ್ಚರಿಸುವುದು ಅಗತ್ಯವಾಗಿದೆ.

ಗಾಂಧೀ ಸ್ಮರಣೆ

ಖಾಲೀ ಗದ್ದಲದ ಈ ನಾಡಿನ ಉದ್ದಗಲಕ್ಕೂ
ಈಗ ಶಾಂತಿ ನೆಲೆಸಿದೆ.
ನರನಾಡಿಯೆಲ್ಲ ನಿಂತೇ ಹೋದಂತಾಗಿ
ನಾವೆಲ್ಲ ಯೋಗಿಗಳಾಗಿದ್ದೇವೆ.
ಹಾದಿ ಮಾತು, ಬೀದಿ ಭಾಷಣಗಳ ಸದ್ದಡಗಿ
ಕಿವಿ ತುಂಬ ಹುಲುಸಾಗಿ ಕೂದಲು ಬೆಳೆಯುತ್ತಿದೆ,

ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ ಬದಲು

ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿದೆ.
ಎಲ್ಲಾ ಸಾಮಾನುಗಳ ಬೆಲೆ ಇಳಿದೂ ಇಳಿದೂ
ಈಗ ಕೈಗೆ ಸಿಗದಂತಾಗಿವೆ.
ಬಿಡಾಡಿ ನಾಯಿಗಳ ನಿರ್ಬೀಜೀಕರಣವಾಗಿದೆ.
ಭಾರತದ ಜನಸಂಖ್ಯೆ ಇಳಿಯುತ್ತಿದೆ.

ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ
ಸರಿಯಾಗಿ ಶಾಲೆಗೆ ಹೋಗಿ
'ಒಂದು ಎರಡು ಬಾಳೆಲೆ ಹರಡು'
ಕಲಿಯುತ್ತಿದ್ದಾರೆ.
ಹಸಗಂಡು ಮನೆಗೆ ಬಂದು
ಮಣ್ಣಿನ ವಾಸನೆಯ ತಾಜಾ ಊಟ ಮಾಡುತ್ತಾರೆ.

ಜಾಣ ಬಾಬಾಗಳಿಗೆ ಹುಚ್ಚಗೌಡರ ಬೆನ್ನುಸಿಕ್ಕು
ಧರಮೋದ್ಧಾರದ ಸವಾರಿ ಮುನ್ನಡೆದಿದೆ.
ಅಸ್ಪೃಶ್ಯ ದೇವರಿಗೆ ಹರಿಜನರ ದರ್ಶನವಾಗಿ
ಅವರ ಉದ್ಧಾರವು ಆಗುತ್ತಿದೆ.

ಸರಕಾರದ ಕೆಲಸ ದೇವರ ಕೆಲಸವಾಗಿ
ತುಪ್ಪದ ದೀಪ ಧಾಳಾಗಿ ಉರಿಯುತ್ತಿದೆ.
ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ
ಜಿಟಿ ಜಿಟಿ ಮಳೆ ಹಿಡಿದಿದೆ.
ನಮ್ಮ ತ್ರಿವರ್ಣ ಧ್ವಜ ತೊಯ್ದು ತೊಪ್ಪಡಿಯಾಗಿ
ಅಶೋಕ ಚಕ್ರ ಸ್ಥಿರವಾಗಿದೆ.

ಹೆದ್ದಾರಿಯ ಮೇಲೆ ಕೆಟ್ಟು ನಿಂತ ಟ್ರಕ್ಕು ಕೂಡ
ನಾಡು ಮುನ್ನಡೆದಿದೆ-ಎಂಬ ಸಂದೇಶ ಹೊತ್ತಿದೆ.
ರೇಡಿಯೋದ ಗಿಳಿವಿಂಡು, ಅದೋ,
ಒಕ್ಕೊರಲಿನಿಂದ ಅದೇ ಹಾಡು ಹಾಡುತ್ತಿದೆ.

ಧನ್ಯತೆಯ ಈ ಕ್ಷಣದಿ, ಓ ಮುದ್ದುರಂಗ
ಕಿವಿ ಮುಚ್ಚಿ, ಕಣ್ಣು ಮುಚ್ಚಿ,
ನೆನೆ ನೆನೆ ಗಾಂಧಿಯನು
(ಯಾವ ಗಾಂಧಿ? ಅಂತ ತಿಳಿಯದೇ ಪೆದ್ದಲಿಂಗ?)
ಬಾಯಿ ಮುಚ್ಚಿ,
ನೆನೆ ನೆನೆ ಗಾಂಧಿಯನು.

-ಚಂದ್ರಶೇಖರ ಪಾಟೀಲ

(ತುರ್ತುಪರಿಸ್ಥಿತಿಯಲ್ಲಿ, ತುರ್ತುಪರಿಸ್ಥಿತಿಯ ಬಗ್ಗೆ ಬರೆದ ಒಂದು ಕವನ)

ರಾಜ್ಯದಲ್ಲಿ ಹೊಸ ಆರ್ಥಿಕ ನೀತಿಗಳ ವಿರುದ್ಧ ಹೋರಾಟದ ಹೊಸ ಘಟ್ಟ

ಸಾಮೂಹಿಕ ಸಂಘಟನೆಗಳ ವೇದಿಕೆ, ಕರ್ನಾಟಕ ಇದರ ಆಶ್ರಯದಲ್ಲಿ ಎ.ಐ.ಟಿ.ಯು.ಸಿ., ಹಾಗೂ ಸಿ.ಐ.ಟಿ.ಯು ಕೇಂದ್ರ ಸಂಘಟನೆಗಳ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಕೃಷಿ ಕೂಲಿಗಾರರ ಸಂಘ, ಬ್ಯಾಂಕ್ ಎಲ್.ಐ.ಸಿ. ಕಾರ್ಮಿಕ ಸಂಘಟನೆಗಳ ಡಿ.ವೈ.ಎಫ್.ಐ., ಎಸ್.ಎಫ್.ಐ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ಜುಲೈ 29ರಂದು ಸಭೆ ಸೇರಿದ್ದರು. ಕಾಂ. ಚಂದ್ರಶೇಖರ ಬಾಳೆ (ಎ.ಐ.ಕೆ.ಎಸ್.) ಅಧ್ಯಕ್ಷತೆ ವಹಿಸಿದ್ದರು.

ಜುಲೈ 15ರಂದು ನವದೆಹಲಿಯಲ್ಲಿ ಜರುಗಿದ ಸಾಮೂಹಿಕ ಸಂಘಟನೆಗಳ ಸಮಾವೇಶದ ವಿವರಗಳನ್ನು ಕಾಂ. ಎಸ್. ಸೂರ್ಯನಾರಾಯಣ ರಾವ್ ರವರು ಕರ್ನಾಟಕ ರಾಜ್ಯ ವೇದಿಕೆಯ ಸಭೆಗೆ ವಿವರಿಸಿದರು. ಚರ್ಚೆಯ ನಂತರ ಸಭೆಯು ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಂಡಿತು.

ಅ) ಹೊಸ ಆರ್ಥಿಕ ಮತ್ತು ಕೈಗಾರಿಕಾ ಧೋರಣೆಗಳನ್ನು ವಿರೋಧಿಸಿ ರಾಷ್ಟ್ರಮಟ್ಟದ ಸಾಮೂಹಿಕ ಸಂಘಟನೆಗಳ ವೇದಿಕೆಯಲ್ಲಿ ಅಂಗೀಕೃತವಾದ 18 ಅಂಶಗಳನ್ನು ಸೂಕ್ತ ರೀತಿಯಲ್ಲಿ ರಾಜ್ಯಾದ್ಯಂತ ಪ್ರಚಾರ ಮಾಡುವುದು

ಆ) ಆಗಸ್ಟ್ ತಿಂಗಳಲ್ಲಿ ಈ ಅಂಶಗಳನ್ನು ಪ್ರಚಾರ ಮಾಡಲು ಸಮಾವೇಶಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ನಡೆಸುವುದು.

ಇ) ಆಗಸ್ಟ್ 22 ರಂದು ಮಂಗಳವಾರ ಬೆಂಗಳೂರಿನಲ್ಲಿ (ಎ.ಡಿ.ಎ. ರಂಗಮಂದಿರ) ರಾಜ್ಯ ಮಟ್ಟದ ಸಮಾವೇಶವನ್ನು ನಡೆಸುವುದು.

ಈ) ಸೆಪ್ಟೆಂಬರ್ 1995ರಂದು ಎಲ್ಲಾ ಜಿಲ್ಲೆಗಳಲ್ಲಿಯೂ ಹಾಗೂ ಬೆಂಗಳೂರು ನಗರದಲ್ಲಿ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಯನ್ನು ಪ್ರತಿಭಟಿಸಿ ಸಾಮೂಹಿಕ ಪ್ರತಿಭಟನಾ ಮೆರವಣಿಗೆ ಮತ್ತು ಸಭೆಗಳನ್ನು ನಡೆಸುವುದು.

ಉ) ರಾಜ್ಯ ಮಟ್ಟದ ಸಮಾವೇಶವನ್ನು ಹಾಗೂ ಪ್ರತಿಭಟನಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಆಗಸ್ಟ್ 6 ರಂದು ವೇದಿಕೆಯ ಸಭೆಯನ್ನು ನಡೆಸುವುದು.

ಕರ್ನಾಟಕ ಸುದ್ದಿ ಸಮಾಚಾರ

ಕಾರಂತರ 'ಓದುವ ಆಟ'ವನ್ನು ಹಿಂತೆಗೆದುಕೊಳ್ಳಲು ಎಸ್.ಎಫ್.ಐ ಆಗ್ರಹ

ಬೆಂಗಳೂರು: ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರಾಥಮಿಕ ಶಾಲಾ ವಿಧ್ಯಾರ್ಥಿಗಳಿಗೆ ನಿಗದಿ ಯಾಗಿರುವ ಡಾ.ಶಿವರಾಮ ಕಾರಂತರ ವಿವಾದಿತ ಪಠ್ಯ "ಓದುವ ಆಟ"ವನ್ನು ಪಠ್ಯಕ್ರಮದಿಂದ ಹಿಂತೆಗೆದು ಕೊಳ್ಳಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸುತ್ತದೆ. ರಾಜ್ಯದ ಬಹುತೇಕ ಶಿಕ್ಷಣ ಪ್ರೇಮಿಗಳು, ಶಿಕ್ಷಣ ತಜ್ಞರು ಮತ್ತು ಆ ಎರಡು ಜಿಲ್ಲೆಯ ಶಿಕ್ಷಕರು ಏಕಾಭಿಪ್ರಾಯದಿಂದ ಕಾರಂತರ ಪುಸ್ತಕವನ್ನು ಪಠ್ಯಕ್ರಮದಿಂದ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಆದ್ದರಿಂದ ವಿಧ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಈ ಪುಸ್ತಕವನ್ನು ಕೂಡಲೇ ಹಿಂತೆಗೆದುಕೊಂಡು ಅದರ ಜಾಗದಲ್ಲಿ ರಾಜ್ಯಕ್ಕೆಲ್ಲಾ ಇರುವಂತೆ 'ಕನ್ನಡ ಭಾರತಿ' ಪುಸ್ತಕವನ್ನೆ ಭೋದಿಸಬೇಕೆಂದು ಎಸ್.ಎಫ್.ಐ ರಾಜ್ಯಾಧ್ಯಕ್ಷರಾದ ಶಾಂತರಾಮ ಎಸ್. ನಾಯಕ್, ಕಾರ್ಯದರ್ಶಿ ಪ್ರಕಾಶ್.ಕೆ ಆಗಸ್ಟ್ ಒಂದ ರಂದು ಪತ್ರಿಕಾ ಗೊಷ್ಟೀಯಲ್ಲಿ ತಿಳಿಸಿದರು.

'ಓದುವ ಆಟ' ಪುಸ್ತಕವನ್ನು ನಾವು ವಿರೋಧಿಸುವುದಕ್ಕೆ ಹಲವಾರು ಕಾರಣಗಳಿವೆ. ನಮ್ಮ ವಿರೋದ ಈ ಪಠ್ಯಪುಸ್ತಕದ ವಿರುದ್ಧವೇ ಹೊರತು ಕಾರಂತರ ವಿರುದ್ಧವಲ್ಲ ಎಂಬುವುದನ್ನು ಸ್ಪಷ್ಟಪಡಿಸುತ್ತೇವೆ. ಏಕೆಂದರೆ ನಮ್ಮ ವಿರೋದವನ್ನು ವ್ಯಕ್ತಿಗತವಾಗಿ ಪರಿಗಣಿಸಬಾರದೆಂಬ ಕಳಕಳಿಯಿಂದ.

ಓದುವ ಆಟವನ್ನು ಆಯ್ಕೆ ಮಾಡಿರುವ ಕ್ರಮವೇ ಸರಿಯಾಗಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಾಂಶಗಳನ್ನು ಗಾಳಿಗೆ ತೂರಿ ಈ ಪಠ್ಯವನ್ನು ನಿಗದಿಪಡಿಸಲಾಗಿದೆ. ರಾಜ್ಯಕ್ಕೆಲ್ಲಾ ಕನ್ನಡ ಭಾರತಿ ಪುಸ್ತಕವನ್ನು ನಿಗದಿಪಡಿಸಿರುವಾಗ ಎರಡು ಜಿಲ್ಲೆಗಳಿಗೆ ಮಾತ್ರ ಕಾರಂತರ ಪುಸ್ತಕವನ್ನು ನಿಗದಿಪಡಿಸಿರುವುದರ ಹಿಂದೆ ಭಾರಿ ಮೋಸ ನಡೆದಿರುವ ಸಾಧ್ಯತೆಗಳಿವೆ. ಈ ಕ್ರಮವು ಎರಡು ಜಿಲ್ಲೆಗಳ ವಿದ್ಯಾರ್ಥಿಗಳನ್ನು ರಾಜ್ಯದ ಶೈಕ್ಷಣಿಕ ಮುಖ್ಯವಾಹಿನಿಯಿಂದ ಹೊರಗಿಡುವ ಪ್ರಯತ್ನವಾಗಿದೆ. ಇಷ್ಟಕ್ಕೂ ಓದುವ ಆಟದಲ್ಲಿ ಈ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಉಣಬಡಿಸುವ ವಿಚಾರವೇನಿಲ್ಲ.

ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಒಬ್ಬರೆ ಲೇಖಕರ ಪಾಠಗಳನ್ನು ಓದಬೇಕೆನ್ನುವ ಕ್ರಮವು ಅತ್ಯಂತ ಅವೈಜ್ಞಾನಿಕವಾದುದ್ದು ಮತ್ತು ಅಪ್ರಜಾತಾತ್ರಕವಾದುದು. ಬಹುಶ ಕಾರಂತರೇ ಈ ಕ್ರಮವನ್ನು ಒಪ್ಪಲಾರರೆಂದು ಭಾವಿಸಿದ್ದೇವೆ ರಾಜ್ಯದ ಇತರ ಲೇಖಕಕ ಬರಹಗಳ ಪರಿಚಯ, ವಿಚಾರ ವಿದ್ಯಾರ್ಥಿಗಳಿಗೆ ಆಗತ್ಯವಾಗಿದೆ. ಶಿಕ್ಷಣದ ವಿಕೇಂದ್ರಿಕರಣದ ಬಗ್ಗೆ ಮಾತನಾಡುವ "ಪ್ರಜಾಸತ್ತಾತ್ಮಕ ಕಾರಂತರು" ಏಳು ತರಗತಿಗಳಿಗೂ ತಮ್ಮದೇ ಪುಸ್ತಕವನ್ನು ಭೋದಿಸಲಿಕ್ಕೆ ಒಪ್ಪಿರುವುದು ಶಿಕ್ಷಣ ಕ್ಷೇತ್ರದಲ್ಲಿ ಏಕಸ್ವಾಮ್ಯ ಪ್ರವೃತ್ತಿಯನ್ನು ತೋರಿಸುತ್ತದೆ. ಇದು ಖಂಡನೀಯ.

ಪಠ್ಯಪುಸ್ತಕ ಆಯ್ಕೆ ಸಮಿತಿಯ ಪರಿಧಿಯನ್ನು ಮೀರಿ ರಾಜಕೀಯ ಹುಚ್ಚು ಮನಸ್ಸಿನ ಮೂಲಕ ಈ ಪುಸ್ತಕ ಆಯ್ಕೆಯಾಗಿರುವುದು ಇದನ್ನು ಹಿಂತೆಗೆದುಕೊಳ್ಳಬೇಕೆನ್ನುವುದಕ್ಕೆ ಪುಷ್ಠಿ ನೀಡುತ್ತದೆ.

ಹೆಚ್ಚಿನ ಪಾಠದ ಹೊರೆ,ಅಸಂಬದ್ಧ ಅತಾರ್ಕಿಕ ವಿಚಾರಗಳು, 50-60 ವರ್ಷಗಳ ಹಿಂದಿನ ದೃಷ್ಟಿ ಕೋನಗಳು ಮುಂತಾದವುಗಳ ಕಾರಣದಿಂದ ಪಠ್ಯವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇವೆ. ಜೊತೆಗೆ ಪಾಠ ಮಾಡುವ ಶಿಕ್ಷಕರು ಸಹ ಓದುವ ಆಟ ಪಾಠ ಮಾಡಲು ಅರ್ಹವಾಗಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಯಾರೊಬ್ಬರೂ ಸಹ ಕಾರಂತರ ವಿಚಾರಗಳು ಮತ್ತು ಪಠ್ಯ ಕ್ರಮದ ಆಯ್ಕೆ ಇತ್ಯಾದಿಗಳ ಪರವಾಗಿ ಮಾತನಾಡುತ್ತಿಲ್ಲವೆನ್ನುವುದು ಈ ಪುಸ್ತಕ ಪಠ್ಯಕ್ರಮದಿಂದ ರದ್ದಾಗಬೇಕೆಂಬುದ್ದಕ್ಕೆ ಆಧಾರಗಳು ಸಾಕಷ್ಟಾಗುತ್ತವೆ. ವಿವಾದದ ಹಿನ್ನೆಲೆಯಲ್ಲಿ ಜುಲೈ 30 ರಂದು ಮಂಗಳೂರಿನಲ್ಲಿ ಎಸ್.ಎಫ್.ಐ ಏರ್ಪಡಿಸಿದ ಸಂವಾದ ಕಾರ್ಯಕ್ರಮದಲ್ಲಿ ಇದೆ ಅಭಿಪ್ರಾಯ ವ್ಯಕ್ತಗೊಂಡಿದೆ. ಕಾರಣ ಈ ಪುಸ್ತಕವನ್ನು ತಕ್ಷಣ ಸರ್ಕಾರ ವಾಪಸ್ಸು ಪಡೆದು ಕನ್ನಡ ಭಾರತಿ ಯನ್ನು 1 ರಿಂದ 7 ನೇ ತರಗತಿಯವರೆಗೆ ಜಾರಿಗೊಳಿಸಿ, ಪುಕ್ಕಟೆಯಾಗಿ ವಿತರಿಸಬೇಕು. ಇಲ್ಲದಿದ್ದಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಹಿ ಸಂಗ್ರಹ ಮತ್ತಿತರ ಹೋರಾಟದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಎಸ್.ಎಫ್.ಐ ತೀರ್ಮಾನಿಸಿದೆ.

ಸಿ.ಪಿ.ಐ(ಎಂ) ನಾಯಕನ ಮೇಲೆ ಹಲ್ಲೆ:ಖಂಡನೆ

ರಾಮದುರ್ಗ; ಚಿಕ್ಕೋಡಿ ತಾಲೂಕಿನ ನೌಂದಲಗಾ ಗ್ರಾಮ ಪಂಚಾಯತಿಯ ಸದಸ್ಯರು ಮಾರ್ಕ್ಸವಾದಿ ಕಮ್ಯುನಿಷ್ಟ ಪಕ್ಷದ ನಿಪ್ಪಾಣಿ ಘಟಕದ ಕಾರ್ಯದರ್ಶಿಯು ಆದ ಸಂಗಾತಿ ದಿಲೀಕ್ ವಾರ್ಕೆ ಇವರ ಮೇಲೆ ನೌಂದಲಗಾ ಪಂಚಾಯಿತಿಯ ಉಪಾಧ್ಯಾಕ್ಷ, ವಡ್ಡರ ಎಂಬಾತ ಹಲ್ಲೆ ನಡೆಸಿದ್ದನ್ನು ಸಿಪಿಐ(ಎಂ) ಜಿಲ್ಲಾ ಮುಖಂಡ ವಿ.ಪಿ ಕುಲಕರ್ಣಿಯವರು ಖಂಡಿಸಿದ್ದಾರೆ.

ಜನರ ಕುಂದುಕೊರತೆಗಳ ಬಗ್ಗೆ ಗ್ರಾಮ ಪಂಚಾಯಿತ್ ಕಾರ್ಯದರ್ಶಿ ಜೊತೆಗೆ ಚರ್ಚಿಸುತ್ತಿದ್ದಾಗ ಸದರಿ ಮೋಹನ ವಡ್ಡರ ಪಾನಮತ್ತನಾಗಿ ಹಲ್ಲೆ ನಡೆಸಿದ್ದಾನೆ. ರಾಜಕೀಯ ಪಕ್ಷಕಾರ್ಯಕರ್ತನ ಮೇಲೆ ನಡೆದ ಈ ಹಲ್ಲೆಯನ್ನು ತಾವು ತೀವ್ರವಾಗಿ ಖಂಡಿಸುತ್ತಾ ಪೋಲಿಸ್ ಇಲಾಖೆ ಕೂಡಲೇ ಕ್ರಮ ವಹಿಸಬೇಕು ಹಾಗೂ ಸದರಿ ಪಂಚಾಯಿತ್ ಉಪಾದ್ಯಕ್ಷ ಮೋಹನ ವಡ್ಡರ ಈತನ ಸದಸ್ಯತ್ವವನ್ನು ರದ್ದು ಪಡಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

"ಪುರಸಭಾ ವ್ಯಾಪ್ತಿಗೆ ಸೇರಿಸಲು ಒತ್ತಾಯ"

ರಾಮದುರ್ಗ: ಪುರಸಭಾ ವ್ಯಾಪ್ತಿ ವಿಸ್ತರಣಬಗ್ಗೆ ಪ್ರಸ್ತಾವನೆ ಕಳುಹಿಸಲು ಸರ್ಕಾರ ನೀಡಿದ ಆದೇಶದಂತೆ ರಾಮದುರ್ಗ ಪುರಸಭಾ ವ್ಯಾಪ್ತಿಗೆ ಬಾಗ್ಯ ನಗರ ಪ್ರದೇಶವನ್ನು ಸೇರಿಸಿ ಪುರಸಭೆ ಪ್ರಸ್ತಾವನೆ ಕಳುಹಿಸಿತ್ತು. ನಂತರ ಕೆಲವರ ಚಿತಾವಣೆಯಿಂದಾಗಿ ಬಾಗ್ಯ ನಗರ ಪ್ರದೇಶವನ್ನು ಕೈಬಿಟ್ಟು ಹೊಸ ಪ್ರಸ್ತಾವನೆಯನ್ನು ಪುರಸಭೆಯವರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದನ್ನು ಪ್ರತಿಭಟಿಸಿ ವಸತಿ ರಹಿತರ ಸಂಘದವರು ಜುಲೈ 19 ರಂದು ನಗರದಲ್ಲಿ ಭಾರೀ ಮೆರವಣಿಗೆ ನಡೆಸಿದರು.

1990 ರಲ್ಲಿ ಈ ಜನರು ಕೆಂಬಾವುಟದಡಿಯಲ್ಲಿ ಸಂಘಟಿತರಾದ ಏಕಮೇವ ಅಧರಾದದಿಂದಾಗಿ ಈ ಪ್ರದೇಶ ಪುರಸಭೆಯ ಹೊರಗಿದೆ ಎಂದು ಸೂಚಿಸಿ ಪ್ರಥಮ ಭಾರಿ ಪುರಸಭೆಗೆ ಮತಧಾನದ ಅವಕಾಶ ನೀಡಲಿಲ್ಲ. ಇದನ್ನು ವಿರೋದಿಸಿ ಪುರಸಬೆಗೆ ಹಾಗೂ ಸ್ಥಳಿಯ ಶಾಸಕರಿಗೆ ಪ್ರತಿಭಟನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಮುಖಂಡ ವಿ.ಪಿ. ಕುಲಕರ್ಣಿ ಅವರು ಮಾತನಾಡಿ ಈ ವಿಷಯದಲ್ಲಿ ನಡೆದ ಕುತಂತ್ರವನ್ನು ವಿವರಿಸಿ ಸರಿಪಡಿಸದಿದ್ದಲ್ಲಿ ತೀವ್ರ ಹೋರಾಟ ಕೈಗೊಳ್ಳಬೇಕಾದಿತು ಎಂದು ಎಚ್ಚರಿಸಿದರು. ಮೆರವಣಿಗೆಯ ನೇತೃತ್ವವನ್ನು ನಾಗಪ್ಪ ಸಂಗೊಳ್ಳಿ, ಹನುಮಂತ ಯಾವವಾಡ, ಹನುಮಂತ ಹೊಸಕೋಟೆ ಇನ್ನಿತರರು ವಹಿಸಿದ್ದರು

ನಮ್ಮದು ಬವಣೆಯ ಬದುಕು ನೋಡಾ!!!

ಗಾರ್ಮೆಂಟ್ಸ್ ಕಾರ್ಖಾನೆಗಳು ಬೆಂಗಳೂರು ನಗರವೊಂದರಲ್ಲಿ ಕನಿಷ್ಠ 1000 ಇವೆ. (ಸರಕಾರದ ಅಂಕಿ ಅಂಶದ ಪ್ರಕಾರ ಸುಮಾರು 550) ಇದರಲ್ಲಿ ಕೆಲಸ ಮಾಡುವವರು ಕಡಿಮೆಯೆಂದರೆ 2 ಲಕ್ಷ ಕಾರ್ಮಿಕರಿದ್ದಾರೆ. ಇವರಲ್ಲಿ ಶೇ. 95 ರಷ್ಟು ಮಹಿಳಾ ಕಾರ್ಮಿಕರು.

ಹೀಗೊಂದು ಆತ್ಮ ವಂಚನೆ....

ಕಾರ್ಮಿಕ ಸಚಿವರು, ಕಾರ್ಮಿಕ ಆಯುಕ್ತರು, ಮಾಲಿಕರ, ಸಂಘದ ಪ್ರತಿನಿಧಿಗಳ ಮಾತುಕತೆಯಲ್ಲಿ ನಡೆದ ಒಂದು ಘಟನೆ.

ಮಾಲಿಕ ವರ್ಗವು ಕನಿಷ್ಠ ಕೂಲಿ ಕೊಡುತ್ತಿದ್ದೇವೆ ಎಂಬ ಹಸೀ ಸುಳ್ಳನ್ನು ನಿಜವೆಂದು ತೋರಿಸಲಿಕ್ಕೆ ಯಾರೋ ನಾಲ್ಕೈದು ಮಹಿಳೆಯರನ್ನು ಆ ಸಭೆಗೆ ಕರೆ ತಂದಿದ್ದರು. ಕಾರ್ಮಿಕ ಸಚಿವರ ಸಂಬಳ ಎಷ್ಟು ಕೊಡುತ್ತಿದ್ದೀರಿ ಎಂಬ ಪ್ರಶ್ನೆಗೆ ಮಾಲಿಕರು ಸುಮಾರು 3 ರಿಂದ 4 ಸಾವಿರದವರೆಗೆ ಎಂದು ಹೇಳಿ ಬೇಕಿದ್ದರೆ ಈ ಕಾರ್ಮಿಕರನ್ನು ಕೇಳಿ ಎಂದು ಆ ಮಹಿಳೆಯರನ್ನು ತೋರಿಸಿದರು. ಅದಕ್ಕೆ ಆ ಮಹಿಳೆಯರೂ ಹೌದೆಂದು ತಲೆಯಲ್ಲಾಡಿಸಿದರು. ಆಗ ಸಂಘದ ಮುಖಂಡರೊಬ್ಬರು ಆ ಮಹಿಳೆಯರತ್ತ ತಿರುಗಿ "ಏನ್ರಮ್ಮ ನಿಮಗೆ ನಾಚಿಕೆಯಾಗೊಲ್ಲಾ, ಕತ್ತಿನಲ್ಲಿ ನೋಡಿದರೆ, ಅರಿಶಿಣದ ದಾರ, ಸೀರೆ ನೋಡಿದರೆ ಬಿ.ಇ.ಎಲ್. ಕಾರ್ಖಾನೆಯದು. ನಿಮಗೆ ಮೂರ್ನಾಲ್ಕು ಸಾವಿರ ಸಂಬಳ ಸಿಗುತ್ತದಾ" ಎಂದು ಕೇಳಿದಾಗ ಅವರ ನಿಜ ಬಣ್ಣ ಬಯಲಾಯಿತು.

ಗಾರ್ಮೆಂಟ್ ವಲಯದ ಒಂದು ಕಾರ್ಖಾನೆಯ ಕಾರ್ಮಿಕರ ಹೋರಾಟದ ವರದಿ

ಇಲ್ಲಿ ಕೆಲಸ ಮಾಡುವ ಮಹಿಳೆಯರು ಶೋಷಣೆಯಿಂದ ಮುಕ್ತರಾಗಲು ಬೇಕಾದ ಸಾಮಾಜಿಕ ತಿಳುವಳಿಕೆ, ಸಂಘಟನೆ ಇವುಗಳ ಕೊರತೆಯೇ ಮುಖ್ಯ ಕಾರಣ. ಬಹುತೇಕ ಕಾರ್ಮಿಕರ ಸಾಮಾಜಿಕ ಹಿನ್ನೆಲೆ ತುಂಬಾ ಹಿಂದುಳಿದಿರುವಿಕೆ ಏನಾದರಾಗಲಿ ತಿಂಗಳಿಗೆ ಒಂದಿಷ್ಟು ಹಣ ಬಂದರೆ ಸಂಸಾರವನ್ನು ಸಾಗಿಸಬಹುದೆಂಬ ಆಸೆಯಿಂದ ಇವರು ಶೋಷಣೆಗೆ ತುತ್ತಾಗುತ್ತಿದ್ದಾರೆ. ಅವರನ್ನು ಸಂಘಟಿತರನ್ನಾಗಿಸಲು ಸಿಐಟಿಯು ಇತ್ತೀಚೆಗೆ ನಡೆಸಿದ ಅಭೂತಪೂರ್ವ ಹೋರಾಟ ನಾಂದಿ ಹಾಡಬಹುದು ಎಂಬುದು ಶೋಷಣೆ-ಮುಕ್ತ ಸಮಾಜದ ಗುರಿ ಹೊಂದಿರುವವರ, ದೃಢವಾದ ನಂಬಿಕೆ. ಈ ನಂಬಿಕೆಯನ್ನು ಸುಳ್ಳು ಮಾಡುವುದಿಲ್ಲ ಎನ್ನುವುದನ್ನು ತೋರಿಸಿದ್ದಾರೆ ನಗರದ ಮೈಸೂರು ರಸ್ತೆಯಲ್ಲಿರುವ ಸಾಮ್ರಾಟ್ ಅಶೋಕ ಎಕ್ಸ್‌ಪೋರ್ಟ್ ಕಂಪನಿಯ ಒಂದು ಸಂಸ್ಥೆಯಾದ ಮೌರ್ಯ ಎಕ್ಸ್ ಪೋರ್ಟ್ ಕಂಪನಿಯ ಕಾರ್ಮಿಕರು. ಇವರ ಹೋರಾಟದ ಅನುಭವದಿಂದ ಬೆಂಗಳೂರಿನಲ್ಲಿರುವ ಎಲ್ಲಾ ಕಾರ್ಮಿಕರನ್ನು ಸಿಐಟಿಯು ಸಂಘದಡಿ ತರಲು ಸಾಧ್ಯವಾಗಬಹುದು ಎನ್ನುತ್ತಾರೆ ಬೆಂಗಳೂರು ಡಿಸ್ಟ್ರಿಕ್ಟ್ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್‌ನ ಮುಖಂಡರು.

ಯೂನಿಯನ್ ಮುಖಂಡರ ಪ್ರಕಾರ ಅನೇಕ ಕಾರ್ಖಾನೆಗಳು ಒಬ್ಬನೇ ಮಾಲಿಕನ ಅಡಿಯಲ್ಲಿ ಬೇರೆ ಬೇರೆ ಹೆಸರಿನಲ್ಲಿ, ಕೆಲಸ ಮಾಡಿ, ಕಾರ್ಮಿಕರಿಗೆ ಕಾರ್ಖಾನೆ ಕಾಯಿದೆ ಪ್ರಕಾರ ಸಿಗಬೇಕಾದ ಸೌಲಭ್ಯಗಳಿಂದ ವಂಚಿಸಲಾಗುತ್ತಿದೆ. ಅನೇಕ ಕಡೆ ರಜೆ ಸೌಲಭ್ಯವೇ ಇಲ್ಲ, ಇದ್ದರೂ ಕೂಡ ಸೀಮಿತ ರಜೆ. ಕೆಲಸದ ಅತೀ ಒತ್ತಡ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಸೀಮಿತ ಅವಧಿಯಲ್ಲಿ ಇಂತಿಷ್ಟು ಕನಿಷ್ಠ ಉತ್ಪಾದನೆಯಾಗಬೇಕೆಂಬ ನಿಬಂಧನೆಗೊಳಪಟ್ಟ ಕಾರ್ಮಿಕರು ತಮ್ಮ ಆರೋಗ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಕೆಲಸ ಮಾಡುವುದು ಸರ್ವೆ ಸಾಮಾನ್ಯವಾಗಿದೆ. ಕೆಲಸಕ್ಕೆ ತಕ್ಕ ಸಂಬಳ ಇಲ್ಲಿ ಇಲ್ಲವೇ ಇಲ್ಲ. ಕಡಿಮೆ ಎಂದರೆ 350 ರೂ. ಹೆಚ್ಚೆಂದರೆ 1000 ರೂ. ಇ.ಎಸ್.ಐ. ಸೌಲಭ್ಯವಿದ್ದರೂ ಪ್ರಯೋಜನ ಸೊನ್ನೆ. ಆರೋಗ್ಯ ಸರಿಯಿಲ್ಲದೆ ರಜಾ ಹಾಕಿದರೆ ಕೆಲಸದಿಂದಲೇ ವಜಾ. ಇದು ಗಾರ್ಮೆಂಟ್ಸ್ ಕಾರ್ಖಾನೆಯ ಶೋಷಣೆಯ ಒಂದು ಮುಖ ಮಾತ್ರ. ಇದನ್ನು ಮೀರಿಸುವ ಅನೇಕ ಮುಖಗಳಿವೆ. ಅದನ್ನು ವಿವರಿಸಿದರೆ ಬಹುಶಃ ನಮ್ಮ ಪತ್ರಿಕೆಯ ಪುಟಗಳು ಸಾಲುವುದಿಲ್ಲ.

ಹೋರಾಟಕ್ಕಿಳಿಸುವಂತೆ ಮಾಡಿದ ದಮನ

ಸುಮಾರು 40 ದಿವಸಗಳಿಂದಲೂ ಹೋರಾಟದ ಕಣದಲ್ಲಿರುವ ಕಾರ್ಮಿಕರ ಹೋರಾಟವನ್ನು ನೋಡೋಣ.

ಸಾಮ್ರಾಟ್ ಅಶೋಕ ಎಕ್ಸ್ ಪೋರ್ಟ್ಸ್ ಒಂದು ರಫ್ತು ಮಾಡುವ ಕಂಪನಿಯಾಗಿದ್ದು ಅನೇಕ ಕಡೆ ಬೇರೆ ಬೇರೆ ಹೆಸರಿನಲ್ಲಿ ಕೆಲಸ ಮಾಡುತ್ತಿದೆ. ಮೈಸೂರು ರಸ್ತೆಯಲ್ಲಿರುವ ಮೌರ್ಯ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯಲ್ಲಿ 375 ಕಾರ್ಮಿಕರಿದ್ದಾರೆ. ಇಲ್ಲಿ ಕನಿಷ್ಠ ಕೂಲಿಯಿಲ್ಲ, ಕಾರ್ಖಾನೆ ಕಾಯಿದೆಯಡಿ ಯಾವುದೇ ಸೌಲಭ್ಯವಿಲ್ಲ, ಇಲ್ಲಿ ಹೋರಾಟದ ಕಿಡಿ ಹತ್ತಿದ್ದು ಕೇವಲ ರಜೆ ಸೌಲಭ್ಯಕ್ಕಾಗಿ! ಇಲ್ಲಿ ತಿಂಗಳಿಗೆ ಒಂದೇ ದಿವಸ ರಜೆ. ಈ ರಜೆಯನ್ನು ನೊಟಕು ಮಾಡಿ ಮಾಲಿಕ ವರ್ಗ ತನ್ನ ಧಿಮಾಕು ತೋರಿಸಿತು.

ಯಾವುದೇ ಸಂಘದ ಮುಖಂಡತ್ವವಿಲ್ಲದೆ ಕಾರ್ಮಿಕರು ಜೂನ್ 3 ರಂದು Stay-in Strike ಮಾಡಿದರು. ಇವರಿಗೆ ಬೆಂಬಲವಾಗಿ ಸುಳಿವನ್ನರಿತ ಸಿಐಟಿಯು ಮುಖಂಡತ್ವ ಹೋರಾಟವನ್ನು ಕೈಗೆತ್ತಿಕೊಂಡಿತು. 4 ನೇ ತಾರೀಖು ಬೆಂಗಳೂರು ಡಿಸ್ಟ್ರಿಕ್ಟ್ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾದ ಆರ್. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾದ ಜಿ. ರಾಮಯ್ಯನವರ ನೇತೃತ್ವದಲ್ಲಿ ಕಾರ್ಮಿಕ ಆಯುಕ್ತರ ಕಛೇರಿಗೆ ಮೆರವಣಿಗೆ ಮಾಡಿ ಮನವಿ ಪತ್ರವನ್ನರ್ಪಿಸಲಾಯಿತು.

ಸಿಐಟಿಯು ನಾಯಕತ್ವವನ್ನು ವಹಿಸಿದ್ದನ್ನು ಕಂಡ ಮಾಲಿಕರು ಹೆದರಿ, ಇನ್ನು ಮುಂದೆ ತಮ್ಮ ಆಟ ಸಾಗುವುದಿಲ್ಲ, ಎಂಬುದನ್ನರಿತು ತಮ್ಮ ಇಲ್ಲಿಯವರೆಗಿನ ಹುಚ್ಚಾಟಗಳೆಲ್ಲಾ ಕೊನೆಗೊಳ್ಳುವ ಭಯದಿಂದ, ಅದನ್ನು ಉಳಿಸಿಕೊಳ್ಳಲು, ತಮ್ಮ ಲಾಭಕೋರತನವನ್ನು ಕಾಪಾಡಿಕೊಳ್ಳಲು ಕಾರ್ಖಾನೆಗೆ ಅಕ್ರಮ ಬೀಗಮುದ್ರೆಯನ್ನು ಜೂನ್ 6 ರಂದು ಘೋಷಿಸಿದರು. ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಅಸಂಘಟಿತರಾಗಿದ್ದ ನೂರಕ್ಕೆ ನೂರು ಕಾರ್ಮಿಕರು ತಮ್ಮ ನಿಷ್ಠೆಯನ್ನು ಸಿಐಟಿಯುವಿನಲ್ಲಿ ಇಟ್ಟು ಏನಾದರಾಗಲಿ ಹೋರಾಟ ಮಾಡುತ್ತೇವೆಂದು ತೋರಿದ ಅಭೂತಪೂರ್ವ ಹೋರಾಟದ ಕಿಚ್ಚು.

ಹೋರಾಟದ ಬೆಂಬಲ

ಇದೇ ಕಂಪನಿಯ ಸೋದರ ಸಂಸ್ಥೆಯೊಂದು ಬನ್ನೇರು ಘಟ್ಟ ಪ್ರದೇಶದಲ್ಲಿದೆ. ಇಲ್ಲಿರುವ ಕಾರ್ಮಿಕರು ಹೋರಾಟ ನಿರತ ಕಾರ್ಮಿಕರ ಬೆಂಬಲಾರ್ಥವಾಗಿ ಒಂದು ದಿನದ ಮುಷ್ಕರ ನಡೆಸಿದರು. ಈ ಹೋರಾಟದ ಬೆಂಬಲಕ್ಕೆ ನಿಂತ ಈ ಕಾರ್ಮಿಕ ವರ್ಗವನ್ನು ನೋಡಿದ ಹೋರಾಟ ನಿರತ ಕಾರ್ಮಿಕರು ತಮ್ಮ ಶಕ್ತಿಯ ಅರಿವಾಗಿ ಹೋರಾಟ ಮುಂದುವರಿಸಲು ತೀರ್ಮಾನಿಸಿದರು.

7 ನೇ ಪುಟ

ಹೀಗೊಂದು ಕಾರ್ಖಾನೆ

ಒಂದು ಕಾರ್ಖಾನೆಯೆಂದರೆ, ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಊಟ ಮಾಡಲು ಒಂದು ಪ್ರತ್ಯೇಕ ಸ್ಥಳ, ಸಾಕಷ್ಟು ಪ್ರಮಾಣದ ಮೂತ್ರಾಲಯ ಇರಬೇಕೆನ್ನುತ್ತದೆ ಕಾರ್ಖಾನೆಯ ಕಾಯಿದೆ. ಆದರೆ ಇಲ್ಲಿ ಅವೆಲ್ಲವೂ ನಗಣ್ಯ.

ಇಲ್ಲಿನ ಕಾರ್ಮಿಕರು ಊಟ ಮಾಡಬೇಕೆಂದರೆ ಹತ್ತಿರ ಒಂದು ಉದ್ಯಾನವನ, ಪಕ್ಕದ ಫುಟ್ ಪಾತ್, ಅಥವಾ ಕಾರ್ಖಾನೆಯ ಮೆಟ್ಟಿಲು -ಹೀಗೆ ಎಲ್ಲೆಂದರಲ್ಲಿ.

ಇನ್ನೊಂದು ಪ್ರಮುಖ ವಿಷಯವೆಂದರೆ 500 ಜನರಿಗೆ ಒಂದು ಮೂತ್ರಾಲಯ -ಇದು ಕಾರ್ಮಿಕರ ಆರೋಗ್ಯದ ಬಗ್ಗೆ ಬಂಡವಾಳಶಾಹಿಗಳ ನಿರ್ಲಕ್ಷ್ಯತನಕ್ಕೊಂದು ಉದಾಹರಣೆಯಂತಿದೆಯಲ್ಲವೇ?

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ಸರಕಾರವನ್ನು ಬದಲಿಸಬೇಕೆಂಬ, ಧೋರಣೆಗಳನ್ನು ಬದಲಿಸಬೇಕೆಂಬ ಜನಗಳ ಆಕಾಂಕ್ಷೆಗಳನ್ನು ಈಡೇರಿಸುವತ್ತ.....

ಇದೇ ಏಪ್ರಿಲ್ ನಲ್ಲಿ ಚಂಡೀಗಢದಲ್ಲಿ ಸಿಪಿಐ(ಎಂ) 15ನೇ ಮಹಾಧಿವೇಶನದ ನಂತರ ಜುಲೈ 16 ರಿಂದ 18ರವರೆಗೆ ಸಭೆ ಸೇರಿದ ಕೇಂದ್ರ ಸಮಿತಿ ಆ ಮಹಾಧಿವೇಶನದ ನಿರ್ಣಯಗಳ ಬೆಳಕಿನಲ್ಲಿ ರಾಷ್ಟ್ರೀಯ ಸನ್ನಿವೇಶದ ಪರಾಮರ್ಶೆ ನಡೆಸಿತು. ಈ ಸಭೆಯ ನಂತರ ನೀಡಿದ ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ.

ಜನಗಳ ಸಂಕಟಗಳನ್ನು ಉಲ್ಬಣಗೊಳಿಸುವ ನೀತಿಗಳು

ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ದೊಡ್ಡ ವ್ಯಾಪಾರಸ್ಥರಿಗೆ ಅನುಕೂಲವಾದ ಆರ್ಥಿಕ ನೀತಿಗಳನ್ನು ಅನುಸರಿಸುವ ಹಟ ತೊಟ್ಟಂತಿರುವ ನರಸಿಂಹರಾವ್ ಸರಕಾರ ಜನಗಳ ಆರ್ಥಿಕ ಸಂಕಷ್ಟಗಳನ್ನು ಉಲ್ಬಣಗೊಳಿಸುತ್ತಿದೆ ಎಂದು ಕೇಂದ್ರ ಸಮಿತಿ ಗಮನಿಸಿತು.

ಈ ಅಮಾನವೀಯ ನೀತಿಯ ತೀರಾ ನಿಕೃಷ್ಟ ಉದಾಹರಣೆಯೆಂದರೆ ಒಂದೆಡೆ ಸರ್ಕಾರದ ಬಳಿ 3 ಕೋಟಿ ಟನ್ ಆಹಾರ ಧಾನ್ಯಗಳ ದಾಸ್ತಾನು ಇದ್ದರೂ ಇನ್ನೊಂದೆಡೆ ಆಹಾರ ಧಾನ್ಯಗಳ ಬೆಲೆಗಳು ಏರುತ್ತಲೇ ಇರುವುದು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪೂರೈಸುವ ಆಹಾರ ಧಾನ್ಯಗಳ ಬೆಲೆಗಳನ್ನು ಇಳಿಸಬೇಕೆಂಬ ಒತ್ತಾಯವನ್ನು ಒಪ್ಪಲು ನರಸಿಂಹರಾವ್ ಸರಕಾರ ನಿರಾಕರಿಸುತ್ತಿದೆ. ತದ್ವಿರುದ್ಧವಾಗಿ ಆಹಾರ ಸಬ್ಸಿಡಿಯನ್ನು ಕಡಿತ ಮಾಡುವ ಭರದಲ್ಲಿ ಸರಕಾರ ಮತ್ತೆ-ಮತ್ತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸುವ ಸಾಮಗ್ರಿಗಳ ಬೆಲೆಗಳನ್ನು ಹೆಚ್ಚಿಸಿ ಮಾರುಕಟ್ಟೆ ಬೆಲೆಗಳ ಮಟ್ಟಕ್ಕೆ ತರುತ್ತಿದೆ. 1991 ರಿಂದೀಚೆಗೆ ಗೋಧಿಯ ಬೆಲೆಯನ್ನು 72ಶೇ, ಅಕ್ಕಿಯ ಬೆಲೆಯನ್ನು ಶೇ. 86ಹೆಚ್ಚಿಸಲಾಗಿದೆ.

ಹಣದುಬ್ಬರ ದರವನ್ನು ನಿಧಾನಗೊಳಿಸಲಾಗಿದೆ ಎಂದು ಸರಕಾರ ಹೇಳಿಕೊಂಡರೂ ಜನಸಾಮಾನ್ಯರಿಗೆ ಮಾತ್ರ ಏನೂ ಪರಿಹಾರ ದೊರೆತಿಲ್ಲ, ಆಹಾರ ಧಾನ್ಯಗಳ ಬೆಲೆಗಳಲ್ಲದೆ ಇತರ ಆಹಾರ ಸಾಮಗ್ರಿಗಳ ಬೆಲೆಗಳು 1994-95ರಲ್ಲಿ 18.4ಶೇ. ದಷ್ಟು ಏರಿವೆ. ಬೇಳೆಕಾಳುಗಳ ಬೆಲೆ ವಿಪರೀತ ಮಟ್ಟ ತಲುಪಿವೆ. ಇದು ಬಡಜನರ ಮೇಲೆ ವಿನಾಶಕಾರಿ ಪರಿಣಾಮ ಬೀರಿದೆ. ಅಪೌಷ್ಟಿಕ ಆಹಾರದಿಂದ ಸಾವು, ಮತ್ತು ಇತರ ಹಸಿವಿಗೆ ಸಂಬಂಧಪಟ್ಟ ಕಾಯಿಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹರಡುತ್ತಿವೆ. ತಕ್ಷಣ ರಾವ್ ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪೂರೈಸುವ ಎಲ್ಲಾ ಆಹಾರಧಾನ್ಯಗಳ ಬೆಲೆಗಳನ್ನು ಶೇ. 50ದಷ್ಟು ಇಳಿಸಬೇಕು. ಭಾರತ ಆಹಾರ ನಿಗಮದ ಮೂಲಕ ಪೂರೈಕೆ ಮುಖ್ಯವಾಗಿ ಈಶಾನ್ಯ ಭಾರತದ ರಾಜ್ಯಗಳಿಗೆ ಹೆಚ್ಚಿಸಬೇಕು, ಹಾಗೂ ರೇಷನ್ ವ್ಯವಸ್ಥೆಯನ್ನು ವಿಸ್ತರಿಸಿ 14 ಜೀವನಾವಶ್ಯಕ ಸಾಮಗ್ರಿಗಳವನ್ನು ಅದರ ವ್ಯಾಪ್ತಿಗೆ ತರಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಎನ್ರೋನ್ ಯೋಜನೆಯನ್ನು ವಿಳಂಬವಿಲ್ಲದೆ ರದ್ದುಮಾಡಬೇಕು.

ದೂರಸಂಪರ್ಕ (ಟೆಲಿಕಾಂ) ಮತ್ತು ವಿದ್ಯುತ್ ವಲಯಗಳನ್ನು ಕುರಿತಂತೆ ಕೇಂದ್ರ ಸರಕಾರದ ದೇಶ-ವಿರೋಧಿ ನೀತಿಯನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಈ ವಲಯಗಳಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೊಡಮಾಡಿರುವ ಅಸಮರ್ಥನೀಯ ಅನುಕೂಲತೆಗಳಿಗೆ ದೇಶ ಭಾರೀ ಬೆಲೆ ತೆರಲೇಬೇಕಾಗುತ್ತದೆ, ವಿದೇಶೀ ಕಂಪೆನಿಗಳೊಂದಿಗೆ ಮಾಡಿಕೊಂಡ ತೀರಾ ಅನ್ಯಾಯದ ಒಪ್ಪಂದಗಳ ಮೂಲಕ ದೇಶದಿಂದ ಭಾರೀ ಪ್ರಮಾಣದಲ್ಲಿ ಸಂಪನ್ಮೂಲಗಳು ಹೊರ ಹರಿದು ಹೋಗುತ್ತವೆ. ದಭೋಲ್‌ನಲ್ಲಿ ಎನ್ರೋನ್ ಯೋಜನೆ ಹಾಗೂ ದೂರಸಂಪರ್ಕ ವಲಯದಲ್ಲಿ ಯು.ಎಸ್. ವೆಸ್ಟ್ ಕಂಪೆನಿಯೊಂದಿಗೆ ಕಾನೂನು ಬಾಹಿರ ಒಪ್ಪಂದ ಸರಕಾರದ ಶರಣಾಗತಿಯ ಉದಾಹರಣೆಗಳು. ಮಹಾರಾಷ್ಟ್ರ ಸರಕಾರಕ್ಕೆ ಮಂತ್ರಿ ಮಂಡಳ ಉಪಸಮಿತಿ ವಿಮರ್ಶಾ ವರದಿ ಒಪ್ಪಿಸಿದ್ದು ರಾಷ್ಟ್ರ ಸರಕಾರ ವಿಳಂಬಮಾಡದೆ ಎನ್ರೋನ್‌ನೊಂದಿಗೆ ಒಪ್ಪಂದವನ್ನು ರದ್ದು ಮಾಡಬೇಕು.

> **ಈ ಅಮಾನವೀಯ ನೀತಿಯ ತೀರಾ ನಿಕೃಷ್ಟ ಉದಾಹರಣೆಯೆಂದರೆ ಒಂದೆಡೆ ಸರ್ಕಾರದ ಬಳಿ 3 ಕೋಟಿ ಟನ್ ಆಹಾರ ಧಾನ್ಯಗಳ ದಾಸ್ತಾನು ಇದ್ದರೂ ಇನ್ನೊಂದೆಡೆ ಆಹಾರ ಧಾನ್ಯಗಳ ಬೆಲೆಗಳು ಏರುತ್ತಲೇ ಇರುವುದು.**

ಜೀವನಾಡಿಯಂತಿರುವ ಮೂರು ವಲಯಗಳಲ್ಲಿ ಖಾಸಗೀಕರಣ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶದ ವಿರುದ್ಧ ಹೋರಾಟ ಗಮನ ಕೇಂದ್ರೀಕರಿಸಿದೆ. ಅವೆಂದರೆ ವಿದ್ಯುತ್, ದೂರಸಂಪರ್ಕ ಮತ್ತು ಹಣಕಾಸು. ವಿಮಾ ವಲಯವನ್ನು ಚುನಾವಣೆಗಳ ನಂತರ ತೆರೆಯುವುದಾಗಿ ರಾವ್ ಸರಕಾರ ಭರವಸೆ ನೀಡಿದೆ. ದೇಶದ ಮತ್ತು ಸ್ಥಳೀಯ ತಂತ್ರಜ್ಞಾನದ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ವಿದ್ಯುತ್ ಮತ್ತು ದೂರಸಂಪರ್ಕ ನೀತಿಗಳ ಮರುವಿಮರ್ಶೆ ನಡೆಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ವಿದ್ಯುತ್ ಮತ್ತು ದೂರಸಂಪರ್ಕ ಕುರಿತಂತೆ ದೇಶದ ಅಗತ್ಯಗಳನ್ನು ಪೂರೈಸಬಲ್ಲ ಪರ್ಯಾಯ ನೀತಿಗಳನ್ನು ರೂಪಿಸಲಾಗಿದೆ.

ಖಾಸಗೀಕರಣ ನೀತಿಯ ವಿರುದ್ಧ ಒಂದು ನಾಲ್ಕು ದಿನಗಳ ಮುಷ್ಕರಕ್ಕಿಳಿದ ದೂರಸಂಪರ್ಕ ಇಲಾಖೆಯ ನೌಕರರನ್ನು ಕೇಂದ್ರ ಸಮಿತಿ ಅಭಿನಂದಿಸಿತು. ಅದೊಂದು ಮಹತ್ವಪೂರ್ಣ ಹೋರಾಟ. ಏಕೆಂದರೆ ನೌಕರರು ಒಂದು ತಕ್ಷಣದ ಬೇಡಿಕೆಯ ಈಡೇರಿಕೆಗಾಗಿ ಹೋರಾಟ ನಡೆಸಿದ್ದಲ್ಲ, ದೇಶದ ಹಿತಾಸಕ್ತಿಗಳ ಜೀವಾಳವಾದ ಒಂದು ಧೋರಣೆಯ ಬದಲಾವಣೆಗಾಗಿ ನಡೆಸಿದ ಹೋರಾಟ ಅದು. ನೌಕರರೊಡನೆ ಸಮಾಲೋಚನೆ ನಡೆಸದೆ ಮುಷ್ಕರವನ್ನು ಹಿಂತೆಗೆದುಕೊಂಡ ಮುಖಂಡತ್ವದ ವಿಶ್ವಾಸಘಾತವನ್ನು ಕೇಂದ್ರ ಸಮಿತಿ ಖಂಡಿಸಿತು. ಏನೇ ಆಗಲಿ ಈ ಮುಷ್ಕರದಲ್ಲಿ ವ್ಯಕ್ತಗೊಂಡ ನೌಕರರ ಸಮರಶೀಲ ಭಾವನೆ ವಿದೇಶೀ ಬಂಡವಾಳಕ್ಕೆ ಮಾರಿಕೊಳ್ಳುವ ನೀತಿಯ ವಿರುದ್ಧ ಜನರಲ್ಲಿರುವ ಭಾವನೆಗೆ ಒಂದು ಸಂಕೇತ.

ಸಾರ್ವಜನಿಕ ವಲಯದ ರಕ್ಷಣೆ

ಕಾಂಗ್ರೆಸ್ (ಐ) ಸರಕಾರ ಭಾರತ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (ಇಸ್ಕೋ)ಯನ್ನು ಆಧುನೀಕರಿಸಲು ನೆರವಾಗುತ್ತೇನೆಂಬ ತನ್ನ ಮಾತಿನಂತೆ ನಡೆಯದಿರುವುದನ್ನು ಕೇಂದ್ರ ಸರಕಾರ ಬಲವಾಗಿ ಖಂಡಿಸಿತು. ಭಾರತ ಉಕ್ಕು ಪ್ರಾಧಿಕಾರ (SAIL) ಕ್ಕೆ ಆಧುನೀಕರಣ ನಡೆಸಲು ಅನುಮೋದನೆ ನೀಡುವುದಾಗಿ ಭರವಸೆ ನೀಡಿದ್ದರೂ ರಾವ್ ಸರಕಾರ ಈಗ ಆ ಉದ್ದೇಶಕ್ಕಾಗಿ 1100 ಕೋಟಿ ರೂ.ಗಳ ಬಜೆಟ್ ಬೆಂಬಲ ನೀಡಲು ನಿರಾಕರಿಸುತ್ತಿದೆ. ಅದೇ ರೀತಿ ಲಕ್ಷಾಂತರ ಮೀನುಗಾರರ ಕುಟುಂಬಗಳ ಬದುಕನ್ನು ತಟ್ಟುವ ಆಳ ಸಮುದ್ರ ಟ್ರಾಲರುಗಳನ್ನು ವಿದೇಶೀ ಹಾಗೂ ಜಂಟಿ ವಲಯದ ಕಂಪೆನಿಗಳು ಬಳಸುವುದನ್ನು ಕಾನೂನು ಬಾಹಿರಗೊಳಿಸುವ ಬಗ್ಗೆ ಒಂದು ಸ್ಪಷ್ಟ ನಿರ್ಣಯ ಕೈಗೊಳ್ಳಲು ನಿರಾಕರಿಸುತ್ತಿರುವ ಕಾಂಗ್ರೆಸ್(ಐ) ಸರಕಾರದ ನಿಲುವನ್ನು ಕೇಂದ್ರ ಸಮಿತಿ ತೀಕ್ಷ್ಣವಾಗಿ ಟೀಕಿಸಿತು. ಬೈಲಾದಿಲ್ಲಾ ಗಣಿಗಳನ್ನು ಖಾಸಗೀ ವಲಯಕ್ಕೆ ವಹಿಸಿಕೊಡದೆ ರಾಷ್ಟ್ರೀಯ ಧಾತು ಅಭಿವೃದ್ಧಿ ನಿಗಮ (ಎನ್.ಎಮ್.ಡಿ.ಸಿ.) ಬಳಿಯೇ ಅದನ್ನು ಉಳಿಸಬೇಕು ಎಂದೂ ಕೇಂದ್ರ ಸಮಿತಿ ಒತ್ತಾಯಿಸಿದೆ.

> **ದಭೋಲ್‌ನಲ್ಲಿ ಎನ್ರೋನ್ ಯೋಜನೆ ಹಾಗೂ ದೂರಸಂಪರ್ಕ ವಲಯದಲ್ಲಿ ಯು.ಎಸ್. ವೆಸ್ಟ್ ಕಂಪೆನಿಯೊಂದಿಗೆ ಕಾನೂನು ಬಾಹಿರ ಒಪ್ಪಂದ ಸರಕಾರದ ಶರಣಾಗತಿಯ ಉದಾಹರಣೆಗಳು.**

ಕಾಂಗ್ರೆಸ್ (ಐ) ಸರಕಾರ ಮತ್ತು ಅದರ ನೀತಿಗಳನ್ನು ಬೆಂಬಲಿಸುವ ಪತ್ರಿಕೆಗಳು ಪಶ್ಚಿಮ ಬಂಗಾಳದ ಎಡರಂಗ ಸರಕಾರದ ನೀತಿಗಳ ಬಗ್ಗೆ ಜನರಲ್ಲಿ ಗೊಂದಲ ಉಂಟು ಮಾಡಲು ಪ್ರಯತ್ನಿಸುತ್ತಿವೆ. ಎಡರಂಗ ಸರ್ಕಾರ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ಅಂಗೀಕರಿಸಿದ ಧೋರಣೆಗಳನ್ನೇ ಅಂಗೀಕರಿಸಿದೆ ಎಂದು ಚಿತ್ರಿಸಬಯಸುತ್ತಾರೆ. ಇದಕ್ಕಿಂತ ಸತ್ಯ ದೂರವಾದ ಸಂಗತಿ ಬೇರಿರಲಾರದು. ಪಶ್ಚಿಮ ಬಂಗಾಳ ಸರಕಾರ ವಿರುದ್ಧವಾಗಿದೆ; ಉದಾಹರಣೆಗೆ, ವಿದ್ಯುತ್ ವಲಯದಲ್ಲಿ ಪಶ್ಚಿಮ ಬಂಗಾಳ ಸರಕಾರ ರಾಜ್ಯ ವಲಯದಲ್ಲಿ ಈಗ ಇರುವ ವಿದ್ಯುತ್ ಸ್ಥಾವರಗಳನ್ನು ಖಾಸಗೀಕರಿಸುವುದಕ್ಕೆ ವಿರುದ್ಧವಾಗಿದೆ, ಎನ್ರೋನ್ ನಂತಹ 100ಶೇ. ವಿದೇಶೀ ಒಡೆತನದ ವಿದ್ಯುತ್ ಯೋಜನೆಗಳಿಗೆ ಅವಕಾಶ ಕೊಡುವುದಿಲ್ಲ; ಸಾರ್ವಜನಿಕ ವಲಯದಲ್ಲಿ ವಿದ್ಯುತ್ ವಲಯದ ವಿಸ್ತರಣೆಗೆ ಕೇಂದ್ರ ಸರಕಾರ ಹಣ ಒದಗಿಸುವುದಿಲ್ಲವಾದ್ದರಿಂದ ಪಶ್ಚಿಮ ಬಂಗಾಳ ಜಂಟಿ ವಲಯದ ಯೋಜನೆಗಳಲ್ಲಿ ಖಾಸಗೀ ವಲಯ ಭಾಗವಹಿಸಲು ಅವಕಾಶ ನೀಡಲು ನಿರ್ಧರಿಸಿದೆ. ಇಲ್ಲಿಯೂ ನಿಯಮಗಳು ಮತ್ತು ಶರತ್ತುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗುತ್ತದೆ. ಪರಿಣಾಮಕಾರಿ ಹತೋಟಿ ರಾಜ್ಯದ ಕೈಯಲ್ಲಿರುತ್ತದೆ. ಆದ್ದರಿಂದ ಸಿಪಿಐ(ಎಂ) ಒರಿಸ್ಸಾದ ಇಬ್ ವ್ಯಾಲಿ ಯೋಜನೆ, ಕರ್ನಾಟಕದ ಕೊಜೆಂಟ್ರಿಕ್ಸ್ ಯೋಜನೆಯಂತಹ ಕೇಂದ್ರ ಸರ್ಕಾರ ಪ್ರತಿ ಗ್ಯಾರಂಟಿ ನೀಡುತ್ತಿರುವ ಎಲ್ಲಾ ಏಳು ವಿದೇಶೀ ಹಣಕಾಸಿನ ಯೋಜನೆಗಳ ಮರುವಿಮರ್ಶೆ ನಡೆಸಬೇಕೆಂದು ಕರೆ ನೀಡಿದೆ.

ಕಾಂಗ್ರೆಸ್(ಐ) ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ. ಈ ಸಂದರ್ಭದಲ್ಲಿ ಕೇಂದ್ರ ಸಮಿತಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಸೆಪ್ಟೆಂಬರ್ ನಿಂದ ನವೆಂಬರ್ ವರೆಗೆ ಹೊಸ ಆರ್ಥಿಕ ನೀತಿಗಳ ವಿರುದ್ಧ ಎಲ್ಲಾ ಜನವಿಭಾಗಗಳನ್ನು ಅಣಿನೆರೆಸಲು ಒಂದು ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂದು ನೀಡಿದ ಕರೆಗೆ ಪೂರ್ಣ ಬೆಂಬಲ ನೀಡಿದೆ.

ಸಾರ್ವಜನಿಕ ವಿತರಣಾ ಸಭೆ ದಿನಾಚರಣೆ

ಆಗಸ್ಟ್ 8 ರಂದು ಬೆಲೆಯೇರಿಕೆ ವಿರುದ್ಧ ದಿನವಾಗಿ ಆಚರಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ಕರೆ ನೀಡಬೇಕು ಎಂದು ಕೇಂದ್ರ ಸಮಿತಿ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕು, ಆಹಾರ ಧಾನ್ಯಗಳು ಮತ್ತು ರೇಷನ್ ವ್ಯವಸ್ಥೆಯ ಮೂಲಕ ಒದಗಿಸುವ ಇತರ ಸಾಮಗ್ರಿಗಳ ಬೆಲೆಗಳನ್ನು ಶೇ. 50 ದಷ್ಟು ಇಳಿಸಬೇಕು ಹಾಗೂ ಇದಕ್ಕಾಗಿ ಭಾರತ ಆಹಾರ ನಿಗಮದ ದಾಸ್ತಾನುಗಳಲ್ಲಿ ರಾಶಿ ಬಿದ್ದಿರುವ ಆಹಾರ ದಾಸ್ತಾನನ್ನು ಬಿಡುಗಡೆ ಮಾಡಬೇಕು ಎಂಬುದು ಈ ಪ್ರಕ್ಷೋಭೆಯ ಕೇಂದ್ರ ಬೇಡಿಕೆಗಳಾಗಬೇಕು. ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟ ಜನಗಳನ್ನು ತಟ್ಟುವ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಬೆಳೆಸಲು ಮುಂದಡಿಯಿಡಬೇಕು ಎಂದೂ ಕೇಂದ್ರ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ಕಸರತ್ತು

ಉತ್ತರ ಪ್ರದೇಶದ ಬೆಳವಣಿಗೆಗಳನ್ನು ವಿಮರ್ಶಿಸುತ್ತಾ ಕೇಂದ್ರ ಸಮಿತಿ ಅಲ್ಲಿ ಮಾಯಾವತಿ ಸರಕಾರವನ್ನು ಪ್ರತಿಷ್ಠಾಪಿಸುವ ಬಿಜೆಪಿ ಕಸರತ್ತುಗಳನ್ನು ತೀಕ್ಷ್ಣವಾಗಿ ಖಂಡಿಸಿತು. ಉತ್ತರ ಪ್ರದೇಶದಲ್ಲಿ ದಲಿತರ ಬಗ್ಗೆ ಅದು ಪ್ರದರ್ಶಿಸುತ್ತಿರುವ ಗೋಸುಂಬೆ ನಿಲುವು ಗುಜರಾತ್ ನಲ್ಲಿ ಅದರ ಸರಕಾರದ ದಾಖಲೆಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ಅಲ್ಲಿ ಕಡಿ ಎಂಬಲ್ಲಿ ಒಬ್ಬ ಮಂತ್ರಿಯ ಬಹಿರಂಗ ಕುಮ್ಮಕ್ಕಿನಿಂದ ದಲಿತರ ಮೇಲೆ ಅತ್ಯಾಚಾರಗಳು ನಡೆದಿವೆ. ಬಿಜೆಪಿ ಮತ್ತು ಬಿ.ಎಸ್.ಪಿ. ನಡುವಿನ ಇಂತಹ ಒಂದು ಅನೀತಿಯುತ ಹಾಗೂ ಸಮಯ ಸಾಧಕ ಕೂಟ ದಲಿತ ವಿಭಾಗಗಳಿಗೆ ಪರಿಹಾರ ನೀಡಬಲ್ಲ ಆಳ್ವಿಕೆ ನೀಡಲು ಸಾಧ್ಯವಿಲ್ಲ ಅಥವಾ ಉತ್ತರ ಪ್ರದೇಶದ ಅಭಿವೃದ್ಧಿಗೆ ನೆರವಾಗಲು ಸಾಧ್ಯವಿಲ್ಲ, ಕೇಂದ್ರ ಸಮಿತಿ ವಾರಾಣಸಿಯ ಗ್ಯಾನ್ ವಾಪಿ ಮಸೀದಿಯಲ್ಲಿ ಧಾರ್ಮಿಕ ಆಚರಣೆಗಳ ಹೆಸರಲ್ಲಿ ಮತ್ತೆ ಚಳುವಳಿ ಆರಂಭಿಸುವ ಹಿಂದೂ ಪರಿಷತ್ತಿನ ಕರೆಯನ್ನು ಖಂಡಿಸಿತು. ವಿ.ಹೆಚ್.ಪಿ. ಮತ್ತು ಅದರ ಮಿತ್ರ ಸಂಸ್ಥೆಗಳ ಏಕಾತ್ಮತಾ ಯಜ್ಞ ಮುಂತಾದ ಚಟುವಟಿಕೆಗಳ ವಿರುದ್ಧ ಎಚ್ಚರಿಕೆ ನೀಡಿದೆ. ಇವು ಕೋಮು ಸೆಳೆತಗಳನ್ನು ಹೆಚ್ಚಿಸುತ್ತವೆಯಷ್ಟೆ.

ಮಹಾರಾಷ್ಟ್ರದಲ್ಲಿ ಶಿವಸೇನೆ ಶಾಸಕನನ್ನು ಅನರ್ಹವಾಗಿಸಿದ ತೀರ್ಪನ್ನು ಎತ್ತಿ ಹಿಡಿದ ಸರ್ವೋಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠದ ತೀರ್ಪು ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದನ್ನು ನಿರ್ಬಂಧಿಸುವ ಶಾಸನವನ್ನು ತರುವ ಅಗತ್ಯವನ್ನು ಒತ್ತಿ ಹೇಳಿದೆ. ಧರ್ಮದ ಹೆಸರಲ್ಲಿ ಮನವಿಯನ್ನು ತಡೆಯುವಲ್ಲಿ ಈಗಿನ ಕಾನೂನುಗಳ ಮಿತಿಗಳ ಬಗ್ಗೆ ಈ ತೀರ್ಪು ಬಹಳ ಸರಿಯಾಗಿಯೇನೂ ತರ್ಕ ಮಾಡಿಲ್ಲ, ಕಾಂಗ್ರೆಸ್ ಸರಕಾರ ಧ... ವನ್ನು ಬಳಸುವ ರಾಜಕೀಯ ಚಟುವಟಿಕೆಗಳನ್ನು ... ಯಲು ನೆರವಾಗುವ ತಿದ್ದುಪಡಿಗಳನ್ನು ಜನತಾ ಪ್ರಾ... ಕಾನೂನಿಗೆ ತಂದು ಪಾಸು ಮಾಡಿಸಿಕೊಳ್ಳಲು ... ಮಾಡಿಲ್ಲ. ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ... ಮಸೂದೆಯನ್ನು ಅಂಗೀಕರಿಸಬೇಕೆಂದು ಸಿಪಿಐ(ಎಂ) ...ಯಿಸುತ್ತದೆ.

ಸಮಾನ ನಾಗರಿಕ ಸಂಹಿತೆಗೆ ವಾತಾವರಣ ನಿರ್ಮಾಣವಾಗಬೇಕು

ಪೊಲಿಟ್ ಬ್ಯೂರೋ ಸಮಾನ ನಾಗರಿಕ ಸಂಹಿ... ಪ್ರಶ್ನೆ ಕುರಿತಂತೆ ತಳೆದ ನಿಲುವನ್ನು ಕೇಂದ್ರ ಸ... ಅನುಮೋದಿಸಿತು. ಒಂದು ಸಮಾನ ನಾಗರಿಕ ಸಂಹಿತೆ... ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕರೆ ನೀ... ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ತೀರ್ಪು ... ಒಂದು ಕ್ರಮಕ್ಕೆ ಅಲ್ಪಸಂಖ್ಯಾತರ ನಡುವೆ ... ಸಿಗುವಂತಹ ಒಂದು ವಾತಾವರಣವನ್ನು ನಿರ್ಮಿ... ಕೆಂದೂ ಹೇಳಿದೆ. ನಮ್ಮ ಪಕ್ಷ ಈ ತೀರ್ಪಿನಲ್ಲಿ ನಿ... ಸ್ಥೂಲ ನಿರ್ದೇಶನಗಳನ್ನು ಸ್ವಾಗತಿಸಿದೆ. ಅದೇ ... ತೀರ್ಪಿನ ಕೆಲವು ಟಿಪ್ಪಣಿಗಳು ಹಿಂದೂ ಸಾಮ... ಕಾನೂನುಗಳು ಸುಧಾರಣೆಗೊಂಡಿವೆ ಎಂಬ ಭ... ನೀಡುತ್ತವೆ. ಆದರೆ ವಾಸ್ತವವಾಗಿ ಹಿಂದೂ ಮಹಿ... ವಿರುದ್ಧ ಪಕ್ಷಪಾತ ಈ ವ್ಯವಸ್ಥೆಯಲ್ಲಿ ಮುಂದ... ತ್ತಿದೆ. ಪ್ರಭುತ್ವದ ಆದೇಶದಿಂದ ಒಂದು ಸಮಾನ ನಾ... ಸಂಹಿತೆಯನ್ನು ಹೇರುವ ಬದಲು ಎಲ್ಲಾ ಕೋಮು... ಮಹಿಳೆಯರ ಹಕ್ಕುಗಳು ಹಾಗೂ ಅವರ ಸ... ಸ್ಥಾನಮಾನಗಳ ಪ್ರಶ್ನೆಯನ್ನು ಎತ್ತಿಕೊಂಡು ಮಹಿಳೆಯ... ವಿವಾಹ, ಆಸ್ತಿ ಮತ್ತಿತರ ಸಾಮಾಜಿಕ ವಿಷಯಗ... ಸಮಾನತೆ ಒದಗಿಸಲು ಈಗಿರುವ ಕಾನೂನುಗ... ತಿದ್ದುಪಡಿ ತರುವುದು ಅಥವಾ ಹೊಸ ಕಾ... ಆರಂಭಿಸುವುದು ಅಗತ್ಯ. ಇದು ಒಂದು ಸಮಾನ ನಾ... ಸಂಹಿತೆ ವಿಕಾಸ ಗೊಳಿಸುವ ಹಾದಿಯಲ್ಲಿ ನೆರವಾ... ಲ್ಲದು. ಅಲ್ಪ ಸಂಖ್ಯಾಕರ ವಿರುದ್ಧ ಭಾವನೆ... ಬಡಿದೆಬ್ಬಿಸುವ ದುರುದ್ದೇಶದ ಬಿಜೆಪಿಯ ಸ... ನಾಗರಿಕ ಸಂಹಿತೆ ತರಬೇಕೆಂಬ ಪ್ರಚಾರವನ್ನು ಬಂ... ಳಿಯಬೇಕು. ಮಹಿಳೆಯರ ಪ್ರಗತಿಗೆ ವಿರುದ್ಧವಾಗಿ... ಅವರ ವಿರುದ್ಧ ಪಕ್ಷಪಾತ ನಡೆಸುವ ಕಾನೂನುಗ... ಸುಧಾರಿಸಲು ಬಿಜೆಪಿ ಎಂದೂ ಗಂಭೀರ ಪ್ರ... ನಡೆಸಿಯೇ ಇಲ್ಲ.

ಕಾಶ್ಮೀರಿ ಜನತೆಯಲ್ಲಿ ವಿಶ್ವಾಸ ಮೂಡಿಸುವ ಕ್ರಮ ಅಗತ್ಯ

ಕಾಂಗ್ರೆಸ್(ಐ) ಸರಕಾರ ಕಾಶ್ಮೀರ ಪ್ರಶ್ನೆ ಕುರಿ... ಒಂದು ಸಮಗ್ರ ನೀತಿ ರೂಪಿಸಬೇಕು ಎಂದು ... ಸಮಿತಿ ಒತ್ತಾಯಿಸಿದೆ. ಎಲ್ಲಾ ಎಡಪಕ್ಷಗಳು ... ಅಂಶಗಳ ಪ್ರಸ್ತಾವವನ್ನು ಪ್ರತಿಪಾದಿಸಿದರೂ ಸ... ಪರಿಸ್ಥಿತಿಯನ್ನು ಎದುರಿಸಲು ಯಾವುದೇ ತು... ತೋರಿಸಿಲ್ಲ, ಉಗ್ರಗಾಮಿಗಳು ಆರು ವಿದೇಶೀ ಪ್ರ... ರನ್ನು ಒತ್ತೆಯಿಟ್ಟುಕೊಂಡಿರುವ ಇತ್ತೀಚಿನ ಬಿಕ್ಕಟ್ಟು ... ಮಟ್ಟದಲ್ಲಿನ ವಾಸ್ತವಿಕತೆ ಏನು ಎಂಬುದನ್ನು ತೋ... ತ್ತದೆ. ಆಝಾದಿ (ಸ್ವಾತಂತ್ರ್ಯ)ಯೊಂದನ್ನು ಬಿಟ್ಟು ... ಸ್ವಾಯತ್ತತೆ ನೀಡಲಾಗುವುದು ಎಂಬ ಪ್ರಧಾನ ಮಂ... ಆಶ್ವಾಸನೆ ಸ್ವಾಗತಾರ್ಹ. ಆದರೆ ಅದು ಕಾಗದದ ಮೇ... ಉಳಿಯಬಾರದು.

ಕಾಶ್ಮೀರಿ ಜನತೆಯ ಸ್ವಂತಿಕೆಯ ರಕ್ಷಣೆಯ ಹಾಗೂ ಗರಿಷ್ಠ ಸ್ವಾಯತ್ತತೆ ಒದಗಿಸುವ ಆಶ್ವಾಸನೆ ನೀಡಲು ಸರಕಾರ ಯಾವುದೇ ರಾಜಕೀಯ ಕ್ರಮ ಆರಂಭಿಸುತ್ತಲೂ ಇಲ್ಲ, ಕಾಶ್ಮೀರ ಕಣಿವೆಗೆ ನೀಡಿದ ಅಭಿವೃದ್ಧಿ ನಿಧಿಯನ್ನು ಬೇರೆ ಉದ್ದೇಶಗಳಿಗೆ

> **ಸಿಪಿಐ(ಎಂ) ಒರಿಸ್ಸಾದ ಇಬ್ ವ್ಯಾಲಿ ಯೋಜನೆ ಕರ್ನಾಟಕದ ಕೊಜೆಂಟ್ರಿಕ್ಸ್ ಯೋಜನೆಯಂತಹ ಕೇಂ... ಸರ್ಕಾರ ಪ್ರತಿ ಗ್ಯಾರಂಟಿ ನೀಡುತ್ತಿರುವ ಎಲ್ಲಾ ಏ... ವಿದೇಶೀ ಹಣಕಾಸಿನ ಯೋಜನೆಗಳ ಮರುವಿಮರ್ಶೆ ನಡೆಸಬೇಕೆಂದು...**

...ಸುವಂತೆ ನೋಡಿಕೊಳ್ಳುವ ...ಯೂ ಆಡಳಿತ ಶಕ್ತವಾಗಿಲ್ಲ. ...ನರಲ್ಲಿ ವಿಶ್ವಾಸ ಮತ್ತೆ ಮೂಡಿ ...ವ ರಾಜಕೀಯ ಹಾಗೂ ...ನೀತ ಕ್ರಮಗಳನ್ನು ಜಾರಿಗೆ ...ದರೆ ಮಾತ್ರವೇ ಚುನಾವಣೆಗೆ ...ನುಕೂಲವಾದ ವಾತಾವರಣ ...ರ್ಮಾಣವಾಗಬಹುದು.

ಬಹುಸದಸ್ಯ ಚುನಾವಣಾ ಆಯೋಗ-ಸ್ವಾಗತಾರ್ಹ

ಎಲ್ಲಾ ಚುನಾವಣಾ ಆಯು...ರಿಗೆ ಸಮಾನ ಅಧಿಕಾರಗಳಿ...ವ ಒಂದು ಬಹುಸದಸ್ಯ ಚುನಾ...ಣಾ ಆಯೋಗದ ರಚನೆಯನ್ನು ಎತ್ತಿ ಹಿಡಿದಿರುವ ...ಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ಕೇಂದ್ರ ಸಮಿತಿ ...ನ್ನ ಆಳವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ಈ ...ರ್ಪಿನೊಂದಿಗೆ ಮುಖ್ಯ ಚುನಾವಣಾ ಆಯುಕ್ತ ...ಎನ್. ಶೇಷನ್‌ರು ಎಲ್ಲಾ ಅಧಿಕಾರಗಳು ತನಗಿವೆ ...ಂದು ತಳೆದಿರುವ ಕಾನೂನು ಬಾಹಿರ ಹಾಗೂ ...ಪ್ರಜಾಪ್ರಭುತ್ವ ನಿಲುವಿಗೆ ತಡೆ ಬೀಳುತ್ತದೆ. ಈಗ ...ನ್ಯಾಯಾಲಯ ಹಾಕಿಕೊಟ್ಟ ಮಾರ್ಗ ನಿರ್ದೇಶನದಲ್ಲಿ ...ಹುಸದಸ್ಯ ಆಯೋಗ ಕೆಲಸ ಮಾಡುವುದು ಅಗತ್ಯ. ...ಯೋಗಕ್ಕೆ ಸ್ವತಂತ್ರ ಅಸ್ತಿತ್ವವಿರುವಂತೆ ಮಾಡಲು ...ಗೊಳ್ಳಬೇಕಾದ ಮುಂದಿನ ಕ್ರಮ ಎಂದರೆ ಚುನಾ...ಣೆ ಸುಧಾರಣೆ ಕುರಿತ ದಿನೇಶ್ ಗೋಸ್ವಾಮಿ ...ಮಿತಿಯ ವರದಿಯಲ್ಲಿ ಹೇಳಿರುವಂತೆ ಕಾರ್ಯಾಂಗ ...ತರ ಸಂಬಂಧಪಟ್ಟ ಸಂವಿಧಾನಿಕ ಅಧಿಕಾರಿಗಳೊಂ...ನ ಸಮಾಲೋಚನೆಯ ಪ್ರಕ್ರಿಯೆಯ ಮೂಲಕ ...ಯುಕ್ತರುಗಳನ್ನು ನೇಮಿಸಲು ಒಂದು ಕಾನೂನು ...ಚಿಸುವುದು.

ರಾಜಕೀಯದ ಅಪರಾಧೀಕರಣವನ್ನು ಬುಡ ಸಹಿತ ನಾಶ ಮಾಡಬೇಕು.

ನವದೆಹಲಿಯಲ್ಲಿ ಒಬ್ಬ ...ಮುಖ ಯುವಕಾಂಗ್ರೆಸ್ ...ಮುಖಂಡ ನಡೆಸಿದ ನೈನಾ ...ಸ್ನಿಯ ಭೀಕರ ಕೊಲೆ ಸಾರ್ವ...ನಿಕ ಅಭಿಪ್ರಾಯಕ್ಕೆ ಆಘಾತ ...ಂಟುಮಾಡಿದೆ. ಹಲವು ...ಕಾಂಗ್ರೆಸ್ ಪದಾಧಿಕಾರಿಗಳ ...ಪುಂಡ ಸ್ವಭಾವದ ಉದಾಹ...ಣೆ ಅದು. ಆಳುವ ಪಕ್ಷದ ...ನೀತಿಗಳು, ಆಚರಣೆಗಳು ಸಾರ್ವ...ಜನಿಕ ಜೀವನದ ಅಧಃಪತನಕ್ಕೆ ...ಮುಖ್ಯ ಪ್ರೋತ್ಸಾಹ ನೀಡು...ವೆ. ಕೇರಳದಲ್ಲಿ ಸಿಪಿಐ(ಎಂ) ಮುಖಂಡ ಇ.ಪಿ. ...ಜಯರಾಜನ್ ರ ಕೊಲೆ ಪ್ರಯತ್ನ ನಡೆಸಿದ ...ಮೊಕದ್ದಮೆಯ ಆರೋಪಿಯಾಗಿರುವ ಒಬ್ಬ ...ಕಾಂಗ್ರೆಸ್(ಐ) ಎಂ.ಎಲ್.ಎ. ಬಂಧನ ತಪ್ಪಿಸಿಕೊ...ಳ್ಳಲು ಹತಾಶ ಪ್ರಯತ್ನ ನಡೆಸಿದ್ದಾನೆ. ಇತರ ...ಪುಂಡಪಾಳಶಾಹಿ ಪಕ್ಷಗಳೂ ಇಂತಹ ವ್ಯಕ್ತಿಗಳಿಗೆ ...ಆಶ್ರಯ ನೀಡಿವೆ. ಈ ರೀತಿ ಸಾರ್ವಜನಿಕ ...ಜೀವನವನ್ನು ಪತನಗೊಳಿಸುವ ಎಲ್ಲಾ ಕ್ರಿಮಿನಲ್ ...ಹಾಗೂ ಭ್ರಷ್ಟ ಚಟುವಟಿಕೆಗಳನ್ನು ಸಿಪಿಐ(ಎಂ) ...ವಿಶ್ರಾಂತವಾಗಿ ಬಯಲಿಗೆಳೆಯುತ್ತಿರುತ್ತದೆ.

ಪಶ್ಚಿಮ ಬಂಗಾಳ ಚುನಾವಣೆಗಳು

ಕೇಂದ್ರ ಸಮಿತಿ ಎಡರಂಗ ಮೂರು ವಿಧಾನ ...ಭಾ ಉಪ ಚುನಾವಣೆಗಳನ್ನು ಹೆಚ್ಚಿನ ಬಹುಮ...ದಿಂದ ಗೆದ್ದುಕೊಂಡಿರುವುದನ್ನು ಅಭಿನಂದಿಸಿದೆ. ...ದು ಜನಗಳ ಬಲವಾದ ಬೆಂಬಲವನ್ನು ಸೂಚಿ...ಸುತ್ತದೆ. ನಗರಸಭಾ ಚುನಾವಣೆಗಳಲ್ಲಿ ಬೆಂಬಲದಲ್ಲಿ ...ಸ್ವಲ್ಪ ಇಳಿತವಾಗಿದ್ದರೂ ಎಡರಂಗ ಬಹುಪಾಲು ...ಳೀಯ ಸಂಸ್ಥೆಗಳಲ್ಲಿ ಗೆದ್ದಿದೆ. ಪಕ್ಷದ ರಾಜ್ಯ ಸಮಿತಿ ...ಈ ಚುನಾವಣೆಗಳು ಹಾಗೂ ಕಲ್ಕತ್ತಾ ಕಾರ್ಪೊರೇ...ಷನ್ ಚುನಾವಣೆಗಳ ...ಮರ್ಶೆ ನಡೆಸುತ್ತದೆ. ಫಲಿ...ತಾಂಶಗಳ ವಿಶ್ಲೇಷಣೆ ನಡೆಸಿ ...ಸಂಘಟನಾ ದೌರ್ಬಲ್ಯಗಳು ...ಮತ್ತು ಇತರ ನ್ಯೂನ್ಯತೆಗ...ಳನ್ನು ಸರಿಪಡಿಸಲು ಅಗತ್ಯ ...ಕ್ರಮಗಳನ್ನು ಕೈಗೊಳ್ಳಬೇಕು ...ಎಂದು ಕೇಂದ್ರ ಸಮಿತಿ ...ರಾಜ್ಯ ಘಟಕವನ್ನು ಕೇಳಿದೆ.

ಚುನಾವಣಾ ಸಮರ

ಮುಂಬರುವ ಚುನಾ...ವಣೆಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸಮಿತಿ ರಾಜಕೀಯ ಘಟನೆಗಳ ವಿಮರ್ಶೆ ನಡೆಸಿತು. ಹಲವು ರಾಜ್ಯಗಳಲ್ಲಿ ಇತ್ತೀಚಿನ ಉಪಚುನಾವಣೆಗಳಲ್ಲಿ ಕಾಂಗ್ರೆಸ್(ಐ) ನೆಲೆ ಕಳೆದುಕೊಳ್ಳುತ್ತಿದೆ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿದೆ. ಎಲ್ಲೆಲ್ಲಿ ಎಡ, ಜಾತ್ಯಾತೀತ ಪ್ರತಿಪಕ್ಷಗಳು ಒಂದು ಪರ್ಯಾಯ ನೀಡಲು ಸಮರ್ಥವಾಗಿವೆಯೋ ಅಲ್ಲೆಲ್ಲಾ ಜನ ಅವರಿಗೆ ಮತ ನೀಡುತ್ತಾರೆ. ಚುನಾವಣೆ ನಡೆದ 28 ಸ್ಥಾನಗಳಲ್ಲಿ ಎಡ ಮತ್ತು ಜಾತ್ಯಾತೀತ ಪ್ರತಿಪಕ್ಷಗಳು 13, ಕಾಂಗ್ರೆಸ್ 10 ಹಾಗೂ ಬಿಜೆಪಿ ಮೂರನ್ನು ಗೆದ್ದಿವೆ.

ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿ ಎರಡನ್ನೂ ಸೋಲಿಸಲು ಕೆಲಸ ಮಾಡಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ. ಕಾಂಗ್ರೆಸ್ (ಐ) ಸರಕಾರವನ್ನು ಅದರ ದೇಶ-ವಿರೋಧಿ ಆರ್ಥಿಕ ನೀತಿಗಳಿಗಾಗಿ, ಕೋಮುವಾದದೊಂದಿಗೆ ರಾಜಿ ಮಾಡಿಕೊಂಡದಕ್ಕಾಗಿ, ವಿಪರೀತ ಭ್ರಷ್ಟಾಚಾರಕ್ಕಾಗಿ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವಲ್ಲಿ ಅದರ ವಿಫಲತೆಗಾಗಿ ಅಧಿಕಾರದಿಂದ ಇಳಿಸಬೇಕಾಗಿದೆ. ಕಾಂಗ್ರೆಸ್(ಐ)ಗೆ ಪರ್ಯಾಯ ತಾನೆಂದು ಹೇಳಿಕೊಳ್ಳುವ ಬಿಜೆಪಿ ತನ್ನ ಕೋಮುವಾದಿ ವೇದಿಕೆಯಿಂದಾಗಿ ಜನಗಳನ್ನು ಒಡೆಯಲು ನೆರವಾಗಬಹುದಷ್ಟೇ ವಿನಹ ಒಂದು ಪರ್ಯಾಯವನ್ನು ಕೊಡಲಾರದು. ಏಕೆಂದರೆ ಮೂಲಭೂತವಾಗಿ ಅದು ಖಾಸಗೀಕರಣ ಮತ್ತು ಉದಾರೀಕರಣವನ್ನು ಪ್ರತಿ ಪಾದಿಸುವಂತಹದ್ದು. ಎಡೆಬಿಡದೆ ಜನಗಳ ಹಿತಾಸಕ್ತಿಗಳ ರಕ್ಷಣೆಗೆ ನಿಂತಿರುವುದು ಕಾಂಗ್ರೆಸ್(ಐ) ಸರಕಾರಕ್ಕೆ ಪರ್ಯಾಯ ನೀತಿಗಳನ್ನು ಮಂಡಿಸಿರುವುದು ಎಡ ಪಕ್ಷಗಳು. ಮುಂಬರುವ ಅವಧಿಯಲ್ಲಿ ಎಡ ನೇತೃತ್ವದ ಸಾಮೂಹಿಕ ಆಂದೋಲನಗಳನ್ನು ತೀವ್ರಗೊಳಿಸಬೇಕು. ಎಡ ಪಕ್ಷಗಳು ಆರ್ಥಿಕ ನೀತಿಗಳು, ಕೋಮುವಾದ, ರಾಷ್ಟ್ರೀಯ ಐಕ್ಯತೆ, ಸರಕಾರ ಪ್ರಾಯೋಜಿತ ಭ್ರಷ್ಟಾಚಾರ ಹಾಗೂ ಜನಗಳ ಹಕ್ಕುಗಳ ರಕ್ಷಣೆಗೆ ಸಂಬಂಧಪಟ್ಟಂತೆ ಎಲ್ಲಾ ಪ್ರಶ್ನೆಗಳ ಮೇಲೆ ತಮ್ಮ ನಿಲುವನ್ನು ಜನಜನಿತಗೊಳಿಸುತ್ತವೆ. ಮುಂಬರುವ ಚುನಾವಣಾ ಸಮರದಲ್ಲಿ ಕೇಂದ್ರ ಸಮಿತಿ ಪಕ್ಷವನ್ನು ಮತ್ತು ಎಡಶಕ್ತಿಗಳನ್ನು ಬಲಪಡಿಸುವುದಕ್ಕೆ ಮಹತ್ವ ನೀಡುತ್ತದೆ.

ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸೋಲಿಸಲು ಮತ್ತು ಒಂದು ಪರಿಣಾಮಕಾರಿ ರಾಷ್ಟ್ರೀಯ ಚುನಾವಣಾ ಪರ್ಯಾಯ ಮೂಡಿಬರುವಂತೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಎಲ್ಲಾ ಜಾತ್ಯಾತೀತ ಪ್ರತಿಪಕ್ಷಗಳೊಂದಿಗೆ ಸಾಧ್ಯವಾದಷ್ಟು ವ್ಯಾಪಕ ತಿಳುವಳಿಕೆಗೆ ಬರಲು ಪ್ರಯತ್ನಿಸುತ್ತವೆ. ರಾಜಕೀಯ ರಂಗದಲ್ಲಿ ಎಲ್ಲಾ ಜಾತ್ಯಾತೀತ ಪಕ್ಷಗಳನ್ನು ಅಣಿನೆರೆಸಲು ಎಡಪಕ್ಷಗಳೊಂದಿಗೆ ಒಟ್ಟಾಗಿ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸಮಿತಿ ಪೊಲಿಟ್ ಬ್ಯೂರೋಗೆ ನಿರ್ದೇಶನ ನೀಡಿದೆ. ಇದಕ್ಕಾಗಿ ಜನತಾದಳ ಮತ್ತು ರಾಷ್ಟ್ರೀಯ ರಂಗದೊಡನೆ ಸಮಾಲೋಚನೆ ನಡೆಸಲಾಗುವುದು. ಉತ್ತರ ಪ್ರದೇಶದ ಸಮಾಜವಾದಿ ಪಾರ್ಟಿ ಮತ್ತು ಉಳಿದ ರಾಜ್ಯಗಳಲ್ಲಿ ಇಂತಹ ಶಕ್ತಿಗಳನ್ನು ಕೂಡಾ ಅಣಿನೆರೆಸಬೇಕು. ಬಿಜೆಪಿ ಏನೇ ಹೇಳಿಕೊಂಡರೂ ರಾಷ್ಟ್ರೀಯ ಮಟ್ಟದಲ್ಲಿ ಒಂದು ಚುನಾವಣಾ ಪರ್ಯಾಯವಾಗುವ ಸನ್ನಿವೇಶದ ಸಮೀಪ ಬರುವ ಸ್ಥಿತಿಯಲ್ಲಿ ಕೂಡಾ ಅದು ಇಲ್ಲ. ಆದ್ದರಿಂದ ಎಡಪಕ್ಷಗಳು ಮುಂದಡಿಯಿಟ್ಟು ಜನಗಳನ್ನು ಬಾಧಿಸುವ ಪ್ರಶ್ನೆಗಳನ್ನೆಲ್ಲಾ ಎತ್ತಿಕೊಂಡು ಸಾಮೂಹಿಕ ಹೋರಾಟಗಳನ್ನು ಆಂದೋಲನಗಳನ್ನು ನಡೆಸುವುದರೊಂದಿಗೆ ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಳಗೊಂಡಿರುವ ಒಂದು ಚುನಾವಣಾ ಮೈತ್ರಿಕೂಟ ಕಟ್ಟಲು ಸಿದ್ಧತೆ ನಡೆಸಬೇಕಾಗಿದೆ. ಇದರಿಂದ ಸರಕಾರದಲ್ಲಿ ಒಂದು ಬದಲಾವಣೆ ತರಬೇಕೆಂಬ, ನೀತಿಗಳಲ್ಲಿ ಒಂದು ಬದಲಾವಣೆ ತರಬೇಕೆಂಬ ಜನಗಳ ಆಕಾಂಕ್ಷೆಗಳನ್ನು ಪೂರೈಸಲು, ಈಡೇರಿಸಲು ಅನುವಾಗುತ್ತದೆ.

> ಮಹಾರಾಷ್ಟ್ರದಲ್ಲಿ ಶಿವಸೇನ ಶಾಸಕನನ್ನು ಅನರ್ಹನಾಗಿ ಸಿದ ತೀರ್ಪನ್ನು ಎತ್ತಿ ಹಿಡಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಪೀಠದ ತೀರ್ಪು ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದನ್ನು ನಿರ್ಬಂಧಿಸುವ ಶಾಸನವನ್ನು ತರುವ ಅಗತ್ಯವನ್ನು ಒತ್ತಿ ಹೇಳಿದೆ

> ಪ್ರಭುತ್ವದ ಆದೇಶದಿಂದ ಒಂದು ಸಮಾನ ನಾಗರಿಕ ಸಂಹಿತೆಯನ್ನು ಹೇರುವ ಬದಲು ಎಲ್ಲಾ ಕೋಮುಗಳಲ್ಲಿ ಮಹಿಳೆಯರ ಹಕ್ಕುಗಳು ಹಾಗೂ ಅವರ ಸಮಾನ ಸ್ಥಾನಮಾನಗಳ ಪ್ರಶ್ನೆಯನ್ನು ಎತ್ತಿಕೊಂಡು ಮಹಿಳೆಯರಿಗೆ ವಿವಾಹ, ಆಸ್ತಿ ಮುಂತಾದ ಸಾಮಾಜಿಕ ವಿಷಯಗಳಲ್ಲಿ ಸಮಾನತೆ ಒದಗಿಸಲು ಈಗಿರುವ ಕಾನೂನುಗಳಲ್ಲಿ ತಿದ್ದುಪಡಿ ತರುವುದು ಅಥವಾ ಹೊಸ ಕಾನೂನು ಆರಂಭಿಸುವುದು ಅಗತ್ಯ.

> ಕಾಂಗ್ರೆಸ್ (ಐ) ಸರಕಾರವನ್ನು ಅದರ ದೇಶ-ವಿರೋಧಿ ಆರ್ಥಿಕ ನೀತಿಗಳಿಗಾಗಿ, ಕೋಮುವಾದದೊಂದಿಗೆ ರಾಜಿ ಮಾಡಿಕೊಂಡದಕ್ಕಾಗಿ, ವಿಪರೀತ ಭ್ರಷ್ಟಾಚಾರಕ್ಕಾಗಿ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವಲ್ಲಿ ಅದರ ವಿಫಲತೆಗಾಗಿ ಅಧಿಕಾರದಿಂದ ಇಳಿಸಬೇಕಾಗಿದೆ. ಕಾಂಗ್ರೆಸ್(ಐ)ಗೆ ಪರ್ಯಾಯ ತಾನೆಂದು ಹೇಳಿಕೊಳ್ಳುವ ಬಿಜೆಪಿ ತನ್ನ ಕೋಮುವಾದಿ ವೇದಿಕೆಯಿಂದಾಗಿ ಜನಗಳನ್ನು ಒಡೆಯಲು ನೆರವಾಗಬಹುದಷ್ಟೇ ವಿನಹ ಒಂದು ಪರ್ಯಾಯವನ್ನು ಕೊಡಲಾರದು.

ಶೇರು ಮಾರುಕಟ್ಟೆಯ ಮಂಜು



ಶೇರು ಮಾರುಕಟ್ಟೆಗೆ ಹಲವು ತಿಂಗಳುಗಳಿಂದಲೇ ಮಂಜು ಕವಿದಿದೆ. ಶೇರುಗಳ ಬೆಲೆ ಗಗನಕ್ಕೇರಿದ್ದದ್ದು ಈಗ ಭೂಮಿಗೆ ಇಳಿದು ಹೋಗಿದೆ. ಮಾರುಕಟ್ಟೆ ಪಂಡಿತರಿಗೂ ಇದೇಕೆ ಹೀಗೆಂದು ಮನದಟ್ಟಾಗುವಂತೆ ವಿವರಿಸುವುದು ಸಾಧ್ಯವಾಗಿಲ್ಲ. ಶೇರು ಮಾರುಕಟ್ಟೆಯಲ್ಲಿ ಬೆಲೆಗಳು ಗಗನದಲ್ಲೇ ಇರುವುವಕ್ಕೆ ಅನುಕೂಲವಾಗುವಂತಹ ಎಲ್ಲ ಅವಕಾಶಗಳೂ ಇವೆ. ಆದರೂ ಬೆಲೆಗಳು ಏರುತ್ತಿಲ್ಲ. ಕಂಪನಿಗಳು ಉದಾರೀಕರಣದ ಪರಿಣಾಮವಾಗಿ ಅಪಾರ ಲಾಭಗಳಿಸುತ್ತಿವೆ. ಕಂಪನಿಗಳು ಲಾಭಗಳಿಸಿದರೆ ಅವು ತಮ್ಮ ಶೇರುಗಳ ಮೇಲೆ ಹೆಚ್ಚಿನ ಡಿವಿಡೆಂಡ್ ನೀಡುತ್ತವೆ. ಹೀಗಿರುವಾಗ ಶೇರುಗಳ ಬೆಲೆ ಏರಲೇಬೇಕು. ಆದರೆ ಹಾಗಾಗುತ್ತಿಲ್ಲ.

ಎಂ.ಎಸ್. ಶೂಸ್ ಎಂಬ ಕಂಪನಿಯ ಶೇರು ನೀಡಿಕೆಯ ಹಗರಣದ ನಂತರ ಈಗ ಪ್ರಾಥಮಿಕ ಶೇರು ಮಾರುಕಟ್ಟೆ (ಅಂದರೆ ಪ್ರಥಮವಾಗಿ ಕಂಪನಿಗಳು ಮಾರುಕಟ್ಟೆಯಲ್ಲಿ ಮಾರುವ ಮಾರುಕಟ್ಟೆ) ನೋವು ಅನುಭವಿಸತೊಡಗಿವೆ. ಶೇರುಗಳಲ್ಲಿ ಹಣ ಹೂಡುವವರ ಸಂಖ್ಯೆ ಇಳಿಮುಖವಾಗಿದೆ. ಈ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮೋಸಗಳು ನಡೆದಿದ್ದು ಇದಕ್ಕೆ ಒಂದು ಮುಖ್ಯ ಕಾರಣವಾಗಿರಬಹುದು. ಈಗಂತೂ ಸಣ್ಣ ಪುಟ್ಟ ಕಂಪನಿಗಳು ಶೇರು ಮಾರುಕಟ್ಟೆ ಪ್ರವೇಶಿಸಲು ಧೈರ್ಯವನ್ನೇ ಕಳೆದುಕೊಂಡಿವೆ. ದೊಡ್ಡ ಹಾಗೂ ಸತತವಾಗಿ ಲಾಭಗಳಿಸುವ ಕಂಪನಿಗಳು ಶೇರು ಮಾರುಕಟ್ಟೆ ಪ್ರವೇಶಿಸಲು ಹಿಂದೆ ಮುಂದೆ ನೋಡುತ್ತಿವೆ.

ದೇಶದ ಶೇರು ಮಾರುಕಟ್ಟೆಯಲ್ಲಿ ಇಂತಹ ಸ್ಥಿತಿಯಿರುವಾಗ ಇನ್ನೊಂದು ಬೆಳವಣಿಗೆಯೂ ಆಗಿದೆ. ಅದು ವಿದೇಶೀ ಹೂಡಿಕೆದಾರರ ಹಿಂಜರಿಕೆ. ಶೇರು ಮಾರುಕಟ್ಟೆ ಗಗನಕ್ಕೇರುತ್ತಿರುವಾಗ ಅಪಾರವಾಗಿ ಹಣಹೂಡುವಂತೆ ಕಂಡುಬಂದ ವಿದೇಶೀ ಹೂಡಿಕೆದಾರರು ಈಗ ಮಾರುಕಟ್ಟೆಯಲ್ಲಿ ಇಳಿತ ಕಂಡ ಕೂಡಲೇ ಹೂಡಿಕೆ ನಿಲ್ಲಿಸತೊಡಗಿದ್ದಾರೆ. ಇದರಿಂದಾಗಿ ದೇಶದೊಳಗೆ ಹರಿದು ಬರುತ್ತಿರುವ ವಿದೇಶೀ ವಿನಿಮಯದ ಪ್ರಮಾಣ ಬಹಳ ಕಡಿಮೆಯಾಗಿದೆ.

ಇದರಿಂದೇನು ಎಂದು ಕೇಳಬಹುದು. ಈಗಿರುವ ಸ್ಥಿತಿ ಅಂತಹ ಸಮಸ್ಯಾತ್ಮಕ ಪರಿಸ್ಥಿತಿಯಲ್ಲ. ಆದರೆ ಮುಕ್ತ ಮಾರುಕಟ್ಟೆಯಲ್ಲಿ ಆರ್ಥಿಕ ಪರಿಸ್ಥಿತಿ ಏನಾಗಬಹುದೆಂಬುದರ ಸೂಚಿ. ಸದ್ಯಕ್ಕೆ ಆಗಿರುವ ಏರಿಳಿತ ದೊಡ್ಡ ಸಮಸ್ಯೆಯನ್ನುಂಟು ಮಾಡಿರದಿದ್ದರು ಈ ಏರಿಳಿತ ತೀವ್ರ ಪ್ರಮಾಣದ್ದಾದರೆ ಖಂಡಿತವಾಗಿಯೂ ಆರ್ಥಿಕ ಬಿಕ್ಕಟ್ಟನ್ನು ಉಂಟು ಮಾಡಬಹುದು ಎಂಬುದನ್ನು ತೋರಿಸುತ್ತದೆ. ಅಂತಹ ಬಿಕ್ಕಟ್ಟುಗಳು ಉದಾರೀಕರಣದ ಕಾಣಿಕೆಗಳಾಗಿರುತ್ತವೆ ಅಷ್ಟೆ.

ಉಕ್ಕಿನ 'ಲಕ್ಕಿ'ನಲ್ಲಿ ಇಳಿತ

ಭಾರತದ ಉಕ್ಕಿನ ದೆಸೆ ಇಳಿದಂತೆ ಕಾಣುತ್ತದೆ. ಹಿಂದಿನ ವರ್ಷ ಅಂದರೆ 1993-94ರಲ್ಲಿ ಭಾರತ ದೊಡ್ಡ ಪ್ರಮಾಣದಲ್ಲಿ ಅಂದರೆ 22.85 ಲಕ್ಷ ಟನ್ನುಗಳಷ್ಟು ಉಕ್ಕು ಮತ್ತು ಕಬ್ಬಿಣವನ್ನು ರಫ್ತು ಮಾಡಿತ್ತು. ಆದರೆ ಕಳೆದ ವರ್ಷದಲ್ಲಿ ಈ ರಫ್ತಿನ ಪ್ರಮಾಣ 17.36 ಲಕ್ಷ ಟನ್ನಿಗೆ ಇಳಿದಿದೆ.

ಭಾರತ 22.85 ಲಕ್ಷ ಟನ್ನುಗಳಷ್ಟು ಕಬ್ಬಿಣ ಮತ್ತು ಉಕ್ಕನ್ನು ರಫ್ತು ಮಾಡಿದಾಗ ಅದನ್ನು ದೊಡ್ಡ ಸಾಧನೆಯೆಂದು ವರ್ಣಿಸಲಾಗಿತ್ತು. ಇದಲ್ಲದೆ ಉದಾರೀಕರಣವಾದಿಗಳು ಉದಾರೀಕರಣದಿಂದಲೇ ಇದು ಸಾಧ್ಯವಾದದ್ದು. ಉದಾರೀಕರಣದ ದೇಶಕ್ಕೆ ಎಂತ ಸಮೃದ್ಧಿ ತರಬಹುದೆಂಬುದರ ಸೂಚಿಯೂ ಇದಾಗಿದೆ ಎಂದಿದ್ದರು. ಈಗ ರಫ್ತು ಇಳಿಮುಖವಾದಾಗ ಅವರು ಬಾಯಿ ಮುಚ್ಚಿಕೊಂಡಿದ್ದಾರೆ.

ಈ ರಫ್ತಿನ ಇಳಿತ ಚೀನಾದಿಂದ ಬೇಡಿಕೆ ಬರದೇ ಇದ್ದುದರಿಂದ ಮತ್ತು ಆಂತರಿಕವಾಗಿ ಬೇಡಿಕೆ ಹೆಚ್ಚಿದ್ದರಿಂದ ಎನ್ನಲಾಗುತ್ತಿದೆ. ಮುಂದಿನ ವರ್ಷದಲ್ಲಿ ರಫ್ತು ಹೆಚ್ಚುತ್ತದೆ ಎನ್ನಲಾಗುತ್ತಿದೆ.

ಹೌದು ನೋಡಬೇಕು ಅಲ್ಲವೆ ಈ ಮುನ್ಸೂಚನೆಯನ್ನು.

ಏರುತ್ತಿರುವ ಸರ್ಕಾರಿ ಸಾಲ

ದೇಶದ ಬಡಜನತೆಗೆ ಉಪಯೋಗವಾಗುವ ಯೋಜನೆಗಳ ವಿಷಯ ಬಂದಾಗ ನರಸಿಂಹರಾಯರ ಸರ್ಕಾರದಲ್ಲಿ ಹಣವಿಲ್ಲ. ಸರ್ಕಾರ ಹೆಚ್ಚು ಖರ್ಚು ಮಾಡಿದರೆ ಹಣಕಾಸು ಖೋತಾ. ಆರ್ಥಿಕದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಯೋಜನೆಗಳ ಮೇಲಿನ ವೆಚ್ಚ ಕಡಿತ ಮಾಡಬೇಕು ಎನ್ನುತ್ತದೆ. ಇದರಿಂದಾಗಿ ಬಡಜನತೆಯ ಹೊಟ್ಟೆಯ ಮೇಲೆ ಹೊಡೆತ ಬಿದ್ದರೂ ಸರಿಯೇ ಆದರೆ ವೆಚ್ಚ ಮಾಡಲಾಗದು ಎಂಬುದು ಅವರ ಧೋರಣೆ.

ಆದರೆ ಸರ್ಕಾರ ವೆಚ್ಚ ಕಡಿಮೆ ಮಾಡುತ್ತಿದೆಯೋ? ಭಾರತೀಯ ರಿಸರ್ವ್ ಬ್ಯಾಂಕ್ ನ ಪ್ರಕಾರ ಕೇಂದ್ರ ಸರ್ಕಾರದ ಸಾಲ ಹೆಚ್ಚುತ್ತಿದೆ. ವರ್ಷದ ಮೊದಲ ಮೂರು ತಿಂಗಳಲ್ಲೇ ಕೇಂದ್ರ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆದ ಸಾಲ 12,999 ಕೋಟಿ ರೂಪಾಯಿಗಳಷ್ಟಕ್ಕೆ ಏರಿದೆ.

ಚುನಾವಣಾ ವರ್ಷದಲ್ಲಿ ದೇಶದ ಖಜಾನೆಯ ಲಾಭ ಪಡೆಯಲು ಕೈ ಸಡಿಲು ಬಿಟ್ಟಿರುವ ಕೇಂದ್ರ ಸರ್ಕಾರ ಅಪಾರ ಖರ್ಚುಗಳನ್ನು ಮಾಡುತ್ತಿದೆ ಎಂಬುದು ಸ್ಪಷ್ಟ. ಈ ಅಲ್ಪಾವಧಿ ಲಾಭದ ಕ್ರಮಗಳಿಂದಾಗಿ ಮುಂದೆ ಹಣದುಬ್ಬರ ತೀವ್ರವಾಗಿ ಏರುವ ಸಾಧ್ಯತೆಗಳು ಹೆಚ್ಚಾಗುತ್ತವೆ.

ಕೊಜೆಂಟ್ರಿಕ್ಸ್ ಸರ್ಕಸ್ಸು

ಮಂಗಳೂರಿನಲ್ಲಿ ವಿದ್ಯುತ್ ಉತ್ಪಾದನಾ ಯೋಜನೆ ಅನುಷ್ಠಾನಕ್ಕೆ ತರಲಿರುವ ಕೊಜೆಂಟ್ರಿಕ್ಸ್ ಎಂಬ ಬಹುರಾಷ್ಟ್ರೀಯ ಕಂಪನಿ ಈಗ ಎನ್ರಾನ್ ನಂತೇ ಸರ್ಕಸ್ಸುಗಳನ್ನು ಪ್ರಾರಂಭಿಸಿದೆ. ವಿದ್ಯುತ್ ಅಭಾವ ದೊಡ್ಡ ಪ್ರಮಾಣದಲ್ಲಿ ಇರುವುದರ ಲಾಭ ಪಡೆಯುವ ಹುನ್ನಾರ ನಡೆಸಿದ ಈ ಕಂಪನಿ. ಈಗ ಅದರ ಹುನ್ನಾರ ಈಗ ಜನತೆಗೆ ತಿಳಿದು ಜನ ಪ್ರತಿಭಟಿಸತೊಡಗಿರುವುದನ್ನು ... ವಿವಿಧ ಸರ್ಕಸ್ಸುಗಳನ್ನು ಮಾಡತೊಡಗಿದ್ದಾರೆ.

ಹಲವು ಪತ್ರಿಕಾ ಹೇಳಿಕೆ ನೀಡತೊಡಗಿರುವ ಕಂಪನಿಯ ವಕ್ತಾರರು ವಿದ್ಯುತ್ ಖರೀದಿ ಒಪ್ಪಂದದಲ್ಲಿರುವ ಷರತ್ತುಗಳನ್ನು ಬದಲಾಯಿಸುವ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದ ಜನತೆಗೆ ಈ ಯೋಜನೆ ಅತ್ಯವಶ್ಯವಾಗಿರುವುದರಿಂದ ಅವರು ಇವನ್ನೆಲ್ಲ ಮಾಡಲು ಮುಂದೆ ಬರುತ್ತಿದ್ದಾರೆಂಬ ಭಾವನೆ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ನಿಜದಲ್ಲಿ ಕೊಜೆಂಟ್ರಿಕ್ಸ್ ಕಂಪೆನಿಗೆ ತಮ್ಮ ಮೋಸ ಬಯಲಿಗೆ ಬಂದಿತೆಂಬ ಹೆದರಿಕೆ ಜೊತೆಗೇ ಯೋಜನೆ ಕೈಬಿಡಬಹುದೆಂಬ ಭಯವಿರುವಂತಿದೆ.

ಆದರೆ ಇದಲ್ಲದೆ ತೆರೆಯ ಮರೆಯಲ್ಲಿ ಅವರು ಏನೇನು ಮಾಡುತ್ತಿದ್ದಾರೊ ಯಾರು ಬಲ್ಲರು?

ಬಹುರಾಷ್ಟ್ರೀಯ ಕಂಪನಿಗಳ ಹೊಸ ಹುನ್ನಾರ

ಉದಾರೀಕರಣಕ್ಕೂ ಮೊದಲು ಹಲವು ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕಂಪನಿಯ ಅಧೀನ ಕಂಪನಿಗಳನ್ನು ಹೊಂದಿದ್ದವು. ಆದರೆ ಅವುಗಳಲ್ಲಿ ಭಾರತೀಯರ ಪಾಲೂ ಇರುವುದರ ಜೊತೆಗೆ ಹಲವು ನಿಬಂಧನೆಗಳಿಗೂ ಅವು ಒಳಪಡುತ್ತವೆ. ಉದಾರೀಕರಣದ ನಂತರ ಪೂರ್ಣ ಸ್ವಾಮ್ಯದ ಅಧೀನ ಸಂಸ್ಥೆಗಳನ್ನು ಈ ಬಹುರಾಷ್ಟ್ರೀಯ ಕಂಪನಿಗಳು ಸ್ಥಾಪಿಸಬಹುದಾಗಿದೆ.

ಈ ಅವಕಾಶವನ್ನು ಬಳಸಿಕೊಂಡು ಈ ಕಂಪನಿಗಳು ಈಗ ಹಲವು ಪೂರ್ಣ ಸ್ವಾಮ್ಯದ ಅಧೀನ ಸಂಸ್ಥೆಗಳನ್ನು ಪ್ರಾರಂಭಿಸಿವೆ. ಇಂತಹ ಅಧೀನ ಕಂಪನಿಗಳು ನಿಬಂಧನೆಗಳಿಂದ ಹೊರಗೆ ಆದ್ದರಿಂದ ಭಾರತದೊಳಗೆ ಎಲ್ಲ ತರಹದ ಆಟಗಳನ್ನು ಅವು ಆಡಬಲ್ಲವು.

ಇಷ್ಟೇ ಅಲ್ಲ, ಹಳೆಯ ಅಧೀನ ಕಂಪನಿಗಳ ವ್ಯವಹಾರವನ್ನೆಲ್ಲ ಈ ಹೊಸ ಪೂರ್ಣ ಅಧೀನ ಕಂಪನಿಗಳಿಗೆ ವರ್ಗಾಯಿಸುತ್ತಿವೆ. ನಮ್ಮ ದೇಶದಿಂದ ಲಾಭ ಕೊಳ್ಳೆ ಹೊಡೆವ ಹೊಸ ಹೊಸ ಸಂಚನ್ನು ಅವು ಮಾಡುತ್ತವೆ.



ವಿಶ್ವ

ಭ್ರಷ್ಟಾಚಾರಿ ಮಂತ್ರಿ ಪಿಳ್ಳೈ ರಾಜಿನಾಮೆ

ಎಡಮಲಯಾರ್ ವಿದ್ಯುತ್ ಯೋಜನೆಯ ಗುತ್ತಿಗೆ ನೀಡಿಕೆಯಲ್ಲಿ ಭ್ರಷ್ಟಾಚಾರ ಎಸಗಿದ್ದಾರೆಂಬ ಆರೋಪಕ್ಕೆ ಒಳಗಾಗಿದ್ದ ಕೇರಳದ ಸಾರಿಗೆ ಸಚಿವ ಬಾಲಕೃಷ್ಣಪಿಳ್ಳೈ ಜುಲೈ 27 ರಂದು ರಾಜಿನಾಮೆ ಕೊಟ್ಟಿದ್ದಾರೆ.

1983 ರಲ್ಲಿ ವಿದ್ಯುತ್ ಸಚಿವನಾಗಿದ್ದ ಪಿಳ್ಳೈ ಲಂಚ ಪಡೆದಿದ್ದರೆಂದು ಆರೋಪಿಸಲಾಗಿತ್ತು. ಪಿಳ್ಳೈ ಹಾಗೂ ಇತರ 12 ಅಧಿಕಾರಿಗಳ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ಅವರ ಮೇಲಿನ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ವಿಶೇಷ ನ್ಯಾಯಾಲಯದ ನ್ಯಾಯಧೀಶರು ಹೇಳಿದ್ದರು. ಈ ಹಿನ್ನೇಲೆಯಲ್ಲಿ ಅವರ ರಾಜಿನಾಮೆಗೆ ಪ್ರಬಲ ಒತ್ತಾಯ ಕೇಳಿ ಬಂತು.

ಪಿಳ್ಳೈ ರಾಜಿನಾಮೆ ನೀಡಬೇಕು ಅಥವಾ ಮುಖ್ಯಮಂತ್ರಿಯೇ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಎಂದು ಸಿ.ಪಿ.ಐ.(ಎಂ) ನೇತೃತ್ವದ ಎಡ-ಪ್ರಜಾಸತ್ತಾತ್ಮಕ ರಂಗ ತೀವ್ರವಾಗಿ ಒತ್ತಾಯಿಸಿತ್ತು. (ಭ್ರಷ್ಟಾಚಾರದ ವಿರುದ್ಧ ಸಮರ ಹೂಡಿರುವುದಾಗಿ ಜಂಭ ಕೊಚ್ಚಿ ಕೊಳ್ಳುತ್ತಿರುವ ಮುಖ್ಯ ಮಂತ್ರಿ ಎ.ಕೆ. ಆಂಟನಿ ಅವರಿಗೆ ಇದೊಂದು ಸತ್ವ ಪರೀಕ್ಷೆಯಾಗಿತ್ತು. ಈ ಪರೀಕ್ಷೆಯಲ್ಲಿ ಅವರು ಸೋತರೆಂದೇ ಹೇಳಬೇಕು. ಯಾಕೆಂದರೆ ನ್ಯಾಯಲಯದ ಟೀಕೆಗೆ ಒಳಗಾಗಿರುವ ಪಿಳ್ಳೆಯವರ ರಾಜಿನಾಮೆ ಕೇಳುವ ಅಥವಾ ಮಂತ್ರಿ ಮಂಡಲದಿಂದ ಪಿಳ್ಳೆಯನ್ನು ಕೈಬಿಡುವ ಧಾರ್ಷ್ಟ್ಯವನ್ನು ಅವರು ತೋರಿಸಲಿಲ್ಲ. ಬದಲಿಗೆ ಅವರು ಪಿಳ್ಳೆಯನ್ನು ರಕ್ಷಿಸುತ್ತಲೇ ಬಂದರು. ಸಹಕಾರ ಸಚಿವ ಎಂ.ಬಿ ರಾಘವನ್ ಅವರನ್ನು ಸಮರ್ಥಿಸಿಕೊಳ್ಳುತ್ತಿರುವ ರೀತಿಯಲ್ಲೇ ಪಿಳ್ಳೆಯನ್ನು ವಹಿಸಿಕೊಂಡು ಮಾತಾಡಿದರು.

ಆದರೆ ರಾಘವನ್‌ರ ಪದಚ್ಯುತಿಗಾಗಿ ಸತತ ಪ್ರಯತ್ನ ನಡೆಸುತ್ತಿರುವ ಎಲ್.ಡಿ.ಎಫ್ ಪಿಳ್ಳೆ ವಿಚಾರದಲ್ಲೂ ತನ್ನ ಯತ್ನವನ್ನು ಕೈಬಿಡಲಿಲ್ಲ. ವಿಧಾನಸಭೆಯ ಒಳಗೂ ಹೊರಗೂ ಪ್ರಯತ್ನ ನಡೆಸಿತು. ಕೊನೆಗೂ ಅದು ಪಿಳ್ಳೆ ವಿಚಾರದಲ್ಲಿ ಯಶಸ್ಸನ್ನು ಪಡೆಯಿತು.

ಅನಿರ್ದಿಷ್ಟ ಧರಣಿ

ಭ್ರಷ್ಟಾಚಾರಿ ಸಹೋದ್ಯೋಗಿ ಬಾಲಕೃಷ್ಣ ಪಿಳ್ಳೆಯನ್ನು ಮಂತ್ರಿಮಂಡಲದಿಂದ ಕೈಬಿಡಲು ಮುಖ್ಯಮಂತ್ರಿ ಕ್ರಮ ಕೈಗೊಳ್ಳದಿರುವುದನ್ನು ಪ್ರತಿಭಟಿಸಿ ಪ್ರತಿಪಕ್ಷಗಳ ಐದು ಶಾಸಕರು ಜುಲೈ 24 ರಂದು ಕೇರಳ ವಿಧಾನ ಸಭೆ ಪ್ರವೇಶ ದ್ವಾರದ ಬಳಿ ಅನಿರ್ದಿಷ್ಟ ಅವಧಿಯ ಧರಣಿಯನ್ನು ಆರಂಬಿಸಿದರು.

ಪಿಣರಾಯಿ ವಿಜಯನ್ (ಸಿಪಿಐ(ಎಂ)) ಪಿ.ರಾಜು(ಸಿಪಿಐ), ವಿ.ಸಿ. ಕಬೀರ್ (ಕಾಂಗ್ರೆಸ್ ಎಸ್), ಕೃಷ್ಣನ್ ಕುಟ್ಟಿ(ಜನತಾದಳ) ಮತ್ತು ನಾನು ಮಾಸ್ತರ್ (ಆರ್‌ಎಸ್‌ಪಿ) ಧರಣಿ ಕುಳಿತಿದ್ದ ಶಾಸಕರು.

ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದು ಪಡಿಸುವಂತೆ ಕೋರಿ ಸಚಿವ ಬಾಲಕೃಷ್ಣ ಪಿಳ್ಳೆ ಕೇರಳ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾರೆ.

27 ರಂದು ಪಿಳ್ಳೆ ತನ್ನ ರಾಜಿನಾಮೆ ಘೋಷಿಸಿದನೆಂದು ಒಂದೆರಡು ದಿನದ ನಂತರ ಮುಖ್ಯಮಂತ್ರಿ ಆಂಟನಿ ಇದನ್ನು ಸದನದಲ್ಲಿ ಪ್ರಕಟಿಸಿದರು. ಸಹೋದ್ಯೋಗಿಯ ರಾಜಿನಾಮೆ ಹಿಂದಿನ ಚಳುವಳಿಯ ಕೀರ್ತಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸಲ್ಲುತದೆಂಬ ಭಯ ಕಾಂಗ್ರೆಸ್(ಐ) ಯನ್ನು ಕಾಡಿದೆ. ಆದಕ್ಕಾಗಿಯೇ ಆಂಟನಿ ವಿಧಾನ ಸಭೆಯಲ್ಲಿ 'ಪಿಳ್ಳೆ ಸ್ವಯಂ ಇಚ್ಛೆಯಿಂದ ಪದತ್ಯಾಗ ಮಾಡಿದ್ದಾರೆ' ಎಂದು ಹೇಳಿದರು. ಇದು ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ಹೇಳುವ ಪರಿಯಾಗಿದೆ. ಪಿಳ್ಳೆ ರಾಜಿನಾಮೆಯ ಹಿಂದೆ ಪ್ರತಿಪಕ್ಷಗಳ ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ)ನ ಶ್ರಮವನ್ನು ಯಾರೂ ಅಲ್ಲಗಳೆಯಲಾರರು ಎಂಬುದು ಕಟು ಸತ್ಯ ವಿಚಾರ. ಇದು ಜನತೆಯ ಹೋರಾಟಕ್ಕೆ ಸಂದ ವಿಜಯವಾಗಿದೆ.

ರಾಘವನ್‌ಗೂ ಇದೇ ಗತಿ

ಸಹಕಾರ ಸಚಿವ ಎಂ.ವಿ. ರಾಘವನ್‌ಗೆ ಕೂಡ ಇದೇ ಗತಿ ಕಾದಿದೆ ಎಂದು ವಿಧಾನ ಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ವಿ.ಎಸ್. ಅಚ್ಯುತಾನಂದನ್ ಸದನದಲ್ಲಿ ಘೋಷಿಸಿದರು.

ವಾರಾಣಾಸಿ ರೈತರ ಧೀರ ಹೋರಾಟ

ಉತ್ತರ ಪ್ರದೇಶ ರಾಜ್ಯದ ವಾರಾಣಸಿಯ ಮಾಜಿ ಮಹಾರಾಜ ತನ್ನ ಕಾನೂನು ಬಾಹಿರ ಜಮೀನನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಇದಕ್ಕೆ ಪೋಲಿಸರು ಮತ್ತು ಸ್ಥಳೀಯ ಅದಿಕಾರಿಗಳು ಸಂಪೂರ್ಣ ಬೆಂಬಲ ಕೊಡುತ್ತಿದ್ದಾರೆ. ಈ ಜಮೀನಿನಲ್ಲಿ ಹಲವಾರು ವರ್ಷಗಳಿಂದ ವಾಸಿಸಿ ಉತ್ತು ಬಿತ್ತು ಫಸಲು ತೆಗೆಯುತ್ತಿರುವ ರೈತರು ಕೃಷಿ-ಕೂಲಿಗಾರರನ್ನು ಒಕ್ಕಲೆಬ್ಬಿಸಲು ಪೋಲಿಸರು ಅಧಿಕಾರಿಗಳು ಭಾರೀ ದಬ್ಬಾಳಿಕೆ ನಡೆಸುತ್ತಿದ್ದಾರೆ. ಆದರೆ ಈ ಬಡಜನರು ದೌರ್ಜನ್ಯದಿಂದ ಬೆದರಿಲ್ಲ, ಅದಕ್ಕೆಲ್ಲ ಜಗ್ಗುವವರೂ ಅವರಲ್ಲ. ಅವರ ಹೋರಾಟಕ್ಕೆ ಕೆಂಬಾವುಟದ ಬೆಂಬಲವಿದೆ.

ವಾರಾಣಸಿ ಜಿಲ್ಲೆಯ ಸಾವಿರಾರು ಕೃಷಿಕೂಲಿಗಾರರು ಸಿಪಿಐ(ಎಂ), ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ತಾವು ಬೆವರಿಳಿಸಿದ ಜಮೀನಿನ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಎಷ್ಟೆಲ್ಲಾ ಸಂಕಷ್ಟ ಬಂದರೂ ಎದುರಿಸಲು ಸಿದ್ಧರಾಗಿದ್ದಾರೆ.

ತ್ರಿಪುರಾದಲ್ಲಿ ವೃದ್ಧಾಪ್ಯ ಪಿಂಚಣಿ ಮೊತ್ತ ಏರಿಕೆ

ತ್ರಿಪುರಾ ಸರಕಾರ ವೃದ್ಧರಿಗೆ ಪ್ರತಿ ತಿಂಗಳು ಕೊಡುತ್ತಿದ್ದ ಪಿಂಚಣಿಯನ್ನು 75 ರೂ. ನಿಂದ 100 ರೂಪಾಯಿಗೆ ಏರಿಸಿದೆ. ಈ ವರ್ಷದ ಏಪ್ರಿಲ್‌ನಿಂದಲೇ ಇದು ಪೂರ್ಣಸ್ವಯವಾಗಿ ಜಾರಿಗೆ ಬರುತ್ತದೆ.

ರಾಜ್ಯದ ಆರ್ಥಿಕವಾಗಿ ದುರ್ಬಲವಾದ ವರ್ಗಗಳ ಸುಮಾರು 33,500 ವೃದ್ಧರು ಹಾಗೂ ಅಂಗವಿಕಲರಿಗೆ ಇದರಿಂದ ಲಾಭವಾಗಲಿದೆ.

ತ್ರಿಪುರಾದ ಪ್ರಪ್ರಥಮ ಎಡರಂಗ ಸರಕಾರ ರಾಜ್ಯದಲ್ಲಿ ವೃದ್ಧಾಪ್ಯ ವೇತನ ನೀಡುವುದನ್ನು ಆರಂಭಿಸಿತ್ತು, ಆರಂಭದಲ್ಲಿ ಅದು 60 ರೂ. ಆಗಿತ್ತು ಈಗ ಮೂರನೇ ಎಡರಂಗ ಸರ್ಕಾರ ಅದರ ಮೊತ್ತವನ್ನು ಹೆಚ್ಚಿಸಿದೆ.

ಮಾಯಾವತಿ ಸರ್ಕಾರದ ಬಣ್ಣಾ ಬಯಲು

ದಲಿತರ ಹಕ್ಕುಗಳ ಬಗ್ಗೆ ಮಾಯಾವತಿ ಸರಕಾರ ತುಂಬಾ ಮಾತಾಡುತ್ತಿದೆ. ಆದರೆ ಇಲ್ಲಿ ಮಾಯಾವತಿ ಸರಕಾರದ ಪೂರ್ಣ ಬಣ್ಣ ಬಯಲಾಗಿದೆ. ಸ್ಥಳಿಯ ಆಡಳಿತ ಪಾಳೇಗಾರಿ ಮಹಾರಾಜರ ಹಿತಾಸಕ್ತಿಗಳನ್ನು ರಕ್ಷಿಸಲು ಟೊಂಕ ಕಟ್ಟಿ ನಿಂತಿದ್ದು ದಲಿತರ ಮೇಲೆ ಆಕ್ರಮಣ ನಡೆಸುತ್ತಿದೆ...

ಹೀಗೆಂದು ಹೇಳಿರುವ ಸಿಪಿಐ(ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ರಾಮ ಸುಮೇರ್ ಯಾದವ್ ಹೋರಾಟದ ಕೇಂದ್ರ ಸ್ಥಳವಾಗಿರುವ ಚತಿಯಾದಲ್ಲಿ ಜುಲೈ 25 ರಂದು ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಅವರು ಮಾತಾಡುತ್ತಿದ್ದರು.

ಎಂಥ ದಬ್ಬಾಳಿಕೆಯಿಂದಲೂ ಭೂ ಹೋರಾಟವನ್ನು ದಮನಿಸಲಾಗದು ಎಂದು ಅವರು ಎಚ್ಚರಿಕೆ ನೀಡಿದರು.

ಬಹುತೇಕವಾಗಿ ತೀರಾಶೋಷಿತ ಬುಡಕಟ್ಟು ಹಾಗೂ ದಲಿತ ವರ್ಗಗಳಿಗೆ ಸೇರಿದ ಭೂರಹಿತ ಕೃಷಿಕೂಲಿಕಾರರು ಕಳೆದ ಆರುತಿಂಗಳಿಂದ ಚಳುವಳಿ ನಡೆಸುತ್ತಿದ್ದಾರೆ. ಬೆಟ್ಟಗುಡ್ಡ ಹಾಗೂ ಕಾಡಿನಿಂದ ಕೂಡಿರುವ ಸುಮಾರು 1000 ಎಕರೆಗಿಂತ ಹೆಚ್ಚಿನ ಪ್ರದೇಶವನ್ನು ವಶಪಡಿಸಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಈ ಅನಕ್ಷರಸ್ಥ ಹಾಗೂ ಶೋಷಿತ ಜನರು ಅನೇಕ ಪೀಳಿಗೆಗಳಿಂದ ಈ ಜಮೀನನ್ನು ಹದಗೊಳಿಸಿ ಉತ್ತು ಬಿತ್ತು ಸಮೃದ್ಧವನ್ನಾಗಿ ಮಾಡಿದ್ದಾರೆ. ಈಗ ಇದು ವಾರಾಣಸಿಯ ಮಾಜಿ ಮಹಾರಾಜ ವಿಭೂತಿ ಸಿಂಗ್‌ಗೆ ಸೇರಿದ ಜಮೀನು ಎಂದು ಹೇಳಲಾಗುತ್ತಿದೆ.

ಯಾರ ಜಮೀನೂ ಅಲ್ಲ

ಆದರೆ ಈ ಜಮೀನು ಯಾರೊಬ್ಬನಿಗೂ ಸೇರಿದ್ದಲ್ಲ ಎಂದು ದಾಖಲೆಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ), ಈ ಶೋಷಿತ ಜನರಲ್ಲಿ ಧೈರ್ಯತುಂಬಿ ಹೋರಾಟದ ಕಣಕ್ಕೆ ಇಳಿಸಿತು. 'ಜಮೀನನ್ನು ಯಾರು ಉತ್ತು ಬಿತ್ತುತ್ತಾರೋ ಅವರೇ ಅದರ ಒಡೆಯರು' ಎಂದು ಘೋಷಣೆಯನ್ನು ಕೊಟ್ಟು ಕ್ರಾಂತಿಕಾರಿ ಹೋರಾಟವನ್ನು ಆರಂಭಿಸಿತು. ಕೆಂಬಾವುಟದಿಂದ ಸ್ಫೂರ್ತಿಪಡೆದ ಬಡವರು ಜಮೀನನ್ನು ಮತ್ತು ಫಸಲನ್ನು ಮಾಜಿ ಮಹಾರಾಜನಿಗೆ ಕೊಡದೆ ತಾವೇ ಇಟ್ಟುಕೊಂಡರು.

ಹೆಚ್ಚುತ್ತಿರುವ ವರದಕ್ಷಿಣೆ ಕೊಲೆಗಳು ಮಾಗಡಿ ಡಿ.ವೈ.ಎಫ್.ಐ. ಪ್ರತಿಭಟನೆ

ವರದಕ್ಷಿಣೆಗಾಗಿ ಕೊಲೆ, ಕಿರುಕುಳ, ಹಿಂಸೆಯ ಸುದ್ದಿಗಳು ದಿನಪತ್ರಿಕೆಗಳಲ್ಲಿ ಪ್ರಕಟವಾಗದ ದಿನಗಳಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕ್ ಕಲ್ಲುದೇವನ ಹಳ್ಳಿಯಲ್ಲಿ ಲಕ್ಷ್ಮಿದೇವಿಯ ಕೊಲೆ ಇಂತಹುದೇ ಒಂದು ಸುದ್ದಿ. ಸುಮಾರು 3 ವರ್ಷಗಳ ಹಿಂದೆ ಈಕೆಯ ವಿವಾಹವಾದಾಗ 20 ಸಾವಿರ ರೂ. ನಗದು ಮತ್ತು ಬಂಗಾರ ಕೊಟ್ಟಿದ್ದರೂ ಒಂದು ವರ್ಷವಾಗುತ್ತಲೇ ಸೈಟು, ಸ್ಕೂಟರ್‌ಗೆ ಒತ್ತಾಯ. ಆದಕ್ಕಾಗಿ ಜಗಳ, ಕಿರುಕುಳ. ಎರಡು ವರ್ಷಗಳ ಹಿಂದೆ ಇದರಿಂದಾಗಿ ಆಕೆಯ ಗಂಡನ ಏಟು ತಿಂದು ಒಂದುವಾರ ಆಸ್ಪತ್ರೆಯಲ್ಲಿ ಕಳೆಯಬೇಕಾಯಿತು. ಗಂಡ ತಂದೆಯೊಡನೆ ಜಗಳವಾಡಿ ಪ್ರತ್ಯೇಕ ಇರಲಾರಂಭಿಸಿದರೂ ಬಿಡದ ಗಂಡನ ಅಣ್ಣನ ಕಿರುಕುಳ. ಇದೇ ಮೇ 14 ರಂದು ಲಕ್ಷ್ಮಿದೇವಮ್ಮನ ಕೊಲೆಯ ಸುದ್ದಿ ಆಕೆಯ ತಂದೆ-ತಾಯಿಗೆ ಪೋಲೀಸರಿಂದ ತಿಳಿಯಿತು. ಸ್ಥಳೀಯ ಡಿ.ವೈ.ಎಫ್.ಐ. ಘಟಕದ ಕಾರ್ಯಕರ್ತರು ಊರಿನಲ್ಲಿ ವಿಚಾರಿಸಿದಾಗ ಹಿಂದಿನ ದಿನ ತುಂಬಾ ಏಟು ತಿಂದರೂ ಬೆಳಿಗ್ಗೆ ತೋಟದಲ್ಲಿ ಕೆಲಸ ಮಾಡಲು ಬಂದಾಗ ಮಾವ ತಡವಾಗಿ ಬಂದುದಕ್ಕೆ ಬಯ್ದು ಹಗ್ಗದಿಂದ ಹೊಡೆದಾಗ ಬಿದ್ದ ಲಕ್ಷ್ಮಿದೇವಮ್ಮನ ಕುತ್ತಿಗೆಗೆ ಅದೇ ಹಗ್ಗ ಸುತ್ತಿ ಭೀಕರ ರೀತಿಯಲ್ಲಿ ಕೊಲೆ ಮಾಡಲಾಯಿತು ಎಂದು ತಿಳಿದು ಬಂದಿದೆ. ಈ ವರದಕ್ಷಿಣೆ ಕೊಲೆಯನ್ನು ಪ್ರತಿಭಟಿಸಿ ಜುಲೈ 5 ರಂದು ಡಿ.ವೈ.ಎಫ್.ಐ. ಘಟಕ ಮಾಗಡಿಯಲ್ಲಿ ಒಂದು ಪ್ರತಿಭಟನಾ ಮೆರವಣಿಗೆ ನಡೆಸಿ ಕೊಲೆಗಾರರಿಗೆ ಉಗ್ರ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದ ಮನವಿಯೊಂದನ್ನು ತಹಸೀಲ್ದಾರರಿಗೆ ಅರ್ಪಿಸಲಾಯಿತು.

ಕಾರ್ಮಿಕ ಆಯುಕ್ತರ ಕಛೇರಿ ಚಲೋ

ಜುಲೈ 7 ರಂದು ಸಿಐಟಿಯು ಅಖಿಲ ಭಾರತ ಮಟ್ಟದ ಕರೆಯ ಮೇರೆಗೆ ಬೀಡಿ ಮತ್ತು ಅಗರಬತ್ತಿ ಕಾರ್ಮಿಕರಿಗೆ ಬಜೆಟ್ ಆಶ್ವಾಸನೆಯ ಜೀವನ ಆಧಾರಿತ ಕನಿಷ್ಠ ಕೂಲಿ ದೊರೆಯಬೇಕು, ಕೆಲಸದ ಗುರುತಿನ ಚೀಟಿ ದೊರೆಯಬೇಕು, ವೈದ್ಯಕೀಯ ಸೌಲಭ್ಯ ಸಿಗಬೇಕು ಮೊದಲಾದ ಬೇಡಿಕೆಗಳ ಮನವಿಯನ್ನು ಉಪ ಕಾರ್ಮಿಕ ಆಯುಕ್ತರಿಗೆ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ನೂರಾರು ಬೀಡಿ ಮತ್ತು ಅಗರಬತ್ತಿ ಕಾರ್ಮಿಕರು ಭಾಗವಹಿಸಿದ್ದರು. ಇದರ ನಾಯಕತ್ವ ವನ್ನು ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ ನಾಯರ್ ಮತ್ತು ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಸುಬ್ರಮಣ್ಯ ವಹಿಸಿದ್ದರು.

ಮುಖ್ಯಮಂತ್ರಿಗೆ ಮನವಿ

ವಿಜಾಪುರ: ಜುಲೈ 17 ರಂದು ಕರ್ನಾಟಕ ಪ್ರಾಂತ ರೈತ ಸಂಘವು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಜಿಲ್ಲೆಯ ಬರಗಾಲವನ್ನು ಗಮನಕ್ಕೆ ತೆಗೆದುಕೊಂಡು ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಜಾರಿಗೆ ಕ್ರಮ ವಹಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಡಾ. ಅಂಬೆಡ್ಕರ್ ಕ್ರಿಡಾಂಗಣದಲ್ಲಿ ಮುಖ್ಯಮಂತ್ರಿಯವರಿಗೆ ಕಾಂ. ಬೀಮಸಿ ಕಲಾದಗಿಯವರು ಅರ್ಪಿಸಿದರು. ಮನವಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು ಸಮಸ್ಯೆಯ ಪರಿಹಾರಕ್ಕೆ ತೀವ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಮೆರವಣಿಗೆಯ ನೇತೃತ್ವವನ್ನು ಸಿ.ಪಿ.ಐ.(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎನ್.ಕೆ.ಉಪಾಧ್ಯಾಯರು, ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷರಾದ ಮನಸಾಬ್ ಕಲಾದಗಿ ಮೊದಲಾದವರರು ವಹಿಸಿದ್ದರು.

ವಸತಿ ಸೌಕರ್ಯಕ್ಕೆ ಡಿ.ವೈ.ಎಫ್.ಐ ಆಗ್ರಹ

ಗಂಗಾವತಿ: ಡಿ.ವೈ.ಎಫ್.ಐ ಗಂಗಾವತಿ ತಾಲೊಕು ಸಮಿತಿ ನೇತೃತ್ವದಲ್ಲಿ ಜುಲೈ 5 ರಂದು ನೂರಾರು ಕಾರ್ಯಕರ್ತರು ಪುರಸಭೆ ಆಡಳಿತ ವರ್ಗ ತಕ್ಷಣವೇ ವಸತಿಹೀರಿಗೆ ಪ್ಲಾಟ್ ವಿತರಣೆ ಮಾಡಬೇಕೆಂದು ಒತ್ತಾಯಿಸಿ ಪುರಸಭೆ ಕಾರ್ಯಾಲಯಕ್ಕೆ ಮೆರವಣಿಗೆಯಲ್ಲಿ ತೆರಳಿ ಮನವಿಯನ್ನು ಅರ್ಪಿಸಿದರು. ಮನವಿ ಸ್ವೀಕರಿಸಿದ ಪುರಾಯುಕ್ತರು 2 ದಿನಗಳಲ್ಲಿ ಬೇಡಿಕೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಆಶ್ವಾಸನೆ ನೀಡಿದರು.

ನಂತರ ರಾಜ್ಯ ಕಾರ್ಯದರ್ಶಿ ಕಾಂ. ಗುರುಶಾಂತ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ ಈ ಹೋರಾಟಕ್ಕೆ ರಾಜ್ಯ ಸಮಿತಿಯ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿದರು. ಈ ಮೆರವಣಿಗೆಯ ನೇತೃತ್ವವನ್ನು ಡಿ.ವೈ.ಎಫ್.ಐ ತಾಲೊಕು ಅಧ್ಯಕ್ಷರಾದ ನಬೀಸಾಬ್,ಹುಸೇನ್ ಸಾಬ್, ಸತ್ಯಪ್ಪ ರಂಗಪ್ಪಮೇಸ್ತ್ರಿ ಮೊದಲಾದವರು. ವಹಿಸಿದ್ದರು.

ಗಾಳಿ ಪಟ ಹಾರಾಟ ಸ್ವರ್ಧೆ ಡಿ.ವೈ.ಎಫ್.ಐ.

ದೊಡ್ಡ ಬಳ್ಳಾಪುರ: ದೊಡ್ಡ ಬಳ್ಳಾಪುರದ ದೇವರಾಜ ನಗರದ ಘಟಕವು ಗಾಳಿ ಪಟ ಹಾರಾಟ ಸ್ಪರ್ಧೆಯನ್ನು ನಡೆಸಿತು. ಸ್ಪರ್ಧೆಯಲ್ಲಿ 50 ಸ್ಪರ್ಧಿಗಳು ಭಾಗವಹಿಸಿದರು. ಸ್ಪರ್ಧೆಯ ತಿರ್ಪುಗಾರರಾಗಿ ವಕೀಲರಾದ ಧನಲಕ್ಷ್ಮಿ ಸಾನತನಮೂರ್ತಿ ಮತ್ತು ಶ್ರೀನಿವಾಸ ಪ್ರಸನ್ನ ಭಾಹವಹಿಸಿದ್ದರು. ಒಟ್ಟು ನಾಲ್ಕು ಬಹುಮಾನಗಳನ್ನು ಮತ್ತು ಉತ್ತಮ ಪಟಗಳಿಗೆ ಹತ್ತು ಪ್ರಶಸ್ತಿ ಪ್ರತ್ರಗಳನ್ನು ನೀಡಲಾಯಿತು. ಬಹುಮಾನ ವಿತರಣೆಯ ಅಧ್ಯಕ್ಷತೆಯನ್ನು ದೇವರಾಜ ನಗರ ಘಟಕದ ಅಧ್ಯಕ್ಷರಾದ ಪದ್ಮನಾಭನವರು ವಹಿಸಿದ್ದರು. ತಾಲೊಕು ಡಿ.ವೈ.ಎಫ್.ಐ ಅಧ್ಯಕ್ಷರಾದ ಬಿ.ಜಿ. ಹೇಮಂತರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಕೀಲರಾದ ಎಂ.ಕೃಷ್ಣಮೂರ್ತಿಯವರು ಬಹುಮಾನಗಳನ್ನು ವಿತರಿಸಿದರು. ತಾಲೊಕು ಡಿ.ವೈ.ಎಫ್.ಐ. ಕಾರ್ಯದರ್ಶಿ ಸಂಜೀವಪ್ಪ ಕಾರ್ಯಕ್ರಮ ನಿರ್ವಹಿಸಿದರು

ಅರೆ ಕಾಲಿಕ ಉಪನ್ಯಾಸಕರ ರದ್ದು : ತರಗತಿ ಬಹಿಷ್ಕಾರ

ಸುರಪುರ: ಜುಲೈ 22 ರಂದು ಎಸ್.ಎಫ್.ಐ ಸುರಪುರ ಘಟಕವು ಜನತಾ ಸರ್ಕಾರದ ಆದೇಶದನ್ವಯ ಅರೆಕಾಲಿಕ ಉಪನ್ಯಾಸಕರನ್ನು ರದ್ದು ಪಡಿಸಿರುವುದನ್ನು ಪ್ರತಿಭಟಿಸಿ ತಾಲೊಕಿನ ಕಾಲೇಜುಗಳಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದರು.

ಸರ್ಕಾರದ ಈ ಹೊಸ ಆದೇಶದಿಂದಾಗಿ ನಗರದ ಸರ್ಕಾರಿ ಕಾಲೇಜು ಮತ್ತು ವಿದ್ಯಾರ್ಥಿನಿಯರ ಜೂನಿಯರ್ ಕಾಲೇಜಿನಲ್ಲಿ ಕೇವಲ ಪ್ರಾಂಶುಪಾಲರನ್ನು ಹೊರತು ಪಡಿಸಿ ಎಲ್ಲಾ 30 ಉಪನ್ಯಾಸಕರು ಅರೆಕಾಲಿಕ ಉಪನ್ಯಾಸಕರಾಗಿದ್ದಾರೆ ಅವರನ್ನು ಸರ್ಕಾರ ತೆಗೆದುಹಾಕಿದ್ದ ಪರಿಣಾಮ ಕಾಲೇಜುಗಳಲ್ಲಿ ಉಪನ್ಯಾಸಕರಿಲ್ಲದೆ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೀವ್ರ ತೊಂದರೆಯಾಗಿದೆ. ಇದನ್ನು ವಿರೋದಿಸಿ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ಎಸ್.ಎಫ್.ಐ ಮೆರವಣಿಗೆಯನ್ನು ಸಂಘಟಿಸಿತ್ತು. ನಂತರ ಮನವಿಪತ್ರವನ್ನು ತಾಲೂಕು ಜನತಾದಳದ ಅಧ್ಯಕ್ಷರಾದ ನೀಲಕಂಠರಾಯ ಪಾಟೀಲರಿಗೆ. ಹುಂಡೆಕರ್ ಮತ್ತು ಶಂಕರ್ ಜಾವಿದ್ ಮನವಿ ಪತ್ರ ಸಲ್ಲಿಸಿದರು. ಮಾನ್ಯ ದಂಡಾಧಿಕಾರಿಗಳಿಗೆ ಹಾಗು ತಹಸಿಲ್ದಾರರಿಗೂ ಈ ಸಂದರ್ಭದಲ್ಲಿ ಮನವಿ ಪತ್ರ ಸಲ್ಲಿಸಲಾಯಿತು.

ನೂತನ ಘಟಕ

ಕಲ್ಬುರ್ಗಿ: ಕಲ್ಬುರ್ಗಿ ತಾಲೂಕಿನ ಕಾಳಮಂದರಗಿ ಗ್ರಾಮದಲ್ಲಿ ಕಾಂ. ಮಾರುತಿ ಮಾನ್ಪಡೆಯವರ ನೇತೃತ್ವದಲ್ಲಿ ಇತ್ತೀಚೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕವನ್ನು ಪ್ರಾರಂಭಿಸಲಾಯಿತು. ಗ್ರಾಮದ ಹಿರಿಯರಾದ ಬಸವರಾಜ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾದ ಬೃಹತ್ ಸಭೆಯಲ್ಲಿ ಮಾರುತಿ ಮಾನ್ಪಡೆಯವರು ಮಾತನಾಡಿ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯು ರೈತರನ್ನು ದಿವಾಳಿ ಎಬ್ಬಿಸುತ್ತಿದೆ. ಗೊಬ್ಬರದ ಬೆಲೆ ಗಗನಕ್ಕೆರುತ್ತಿದೆ. ವಿದ್ಯುತ್ ಆಭಾವ ತೀವ್ರವಾಗಿದೆ. ಇದರಿಂದ ದಿನನಿತ್ಯದ ಜೀವನ ಸಾಗಿಸುವುದು ರೈತರಿಗೆ ದುಸ್ತರವಾಗಿದೆ. ಇದಕ್ಕಾಗಿ ರೈತ ಸಂಘವನ್ನು ಕಟ್ಟಿ ಬೆಳಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಅಮೇರಿಕಾಕ್ಕೆ ಈಗ ಗ್ಯಾಟ್ ಕೂಡಾ ಅಡ್ಡಿ?

ಲೋಕ ಸಂಚಾರ

"ನಮ್ಮ ಮೂಲ ಗುರಿ ವಿಶ್ವ ವ್ಯಾಪಾರ ಸಂಘಟನೆಯಲ್ಲ, ನಮ್ಮ ಗುರಿ ಮಾರುಕಟ್ಟೆಗಳನ್ನು ತೆರೆಸುವುದು. ಈ ಸಂಘಟನೆ ಅದಕ್ಕೊಂದು ಉಪಕರಣ ಅಷ್ಟೇ" ಇದು ಅಮೇರಿಕಾದ ವಾಣಿಜ್ಯ ಉಪ ಕಾರ್ಯದರ್ಶಿ ಜೆಫ್ರೆಗಾರ್ಡನ್ ಎಂಬಾತನ ಧಿಮಾಕಿನ ಮಾತು. ಗ್ಯಾಟ್ ಒಪ್ಪಂದಕ್ಕೆ ಮುಂದುವರಿದ ಬಂಡವಾಳಶಾಹಿ ದೇಶಗಳು ಮತ್ತು ನಮ್ಮಂತಹ ಅಭಿವೃದ್ಧಿ ಶೀಲ ದೇಶಗಳು ಸಹಿ ಮಾಡಿ ಆ ಮೂಲಕ ವಿಶ್ವ ವ್ಯಾಪಾರ ಸಂಘಟನೆ(WTO) ರಚನೆಗೊಳ್ಳುವಂತೆ ಒತ್ತಾಯ ಹೇರಿದ ದೇಶದ ಧಿಮಾಕನ್ನೂ ತೋರುವ ಮಾತಿದು. WTO ರಚನೆಯೊಂದಿಗೆ ಅಂತರ್ರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳಲ್ಲಿ ದ್ವಿಪಕ್ಷೀಯ ಚರ್ಚೆಗಳ ಕಷ್ಟಗಳು ಕಳೆದು ಬಹುಪಕ್ಷೀಯ ಮಾತುಕತೆಗಳ ಪ್ರಯೋಜನ ಸಿಗುತ್ತದೆ ಎಂದೆಲ್ಲಾ ನಂಬಿದ್ದವರಿಗೆ ಭ್ರಮ ನಿರಸನ ತರಿಸುವ ಮಾತು ಇದು. ಜುಲೈ 14 ರಂದು "ಇಂಟರ್ ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್" ನಲ್ಲಿ ಸಂದರ್ಶನವೊಂದರಲ್ಲಿ ಈ ಅಮೇರಿಕನ್ ವಕ್ತಾರ ಹೇಳಿದ ಮಾತುಗಳು ಉದಾರೀಕರಣ,ಜಾಗತೀಕರಣದ ಪ್ರತಿಪಾದಕರ, ಚಿಂತಕರ ಕಣ್ಣು ತೆರೆಯುವಂತದ್ದು.

ತನ್ನ ಮುಗ್ಗರಿಸುತ್ತಿರುವ ಆರ್ಥಿಕವನ್ನು ಉಳಿಸಿಕೊಳ್ಳಲು ಅಮೇರಿಕಾ ಹೊರಗೆ ಮಾರುಕಟ್ಟೆಯ ಹುಡುಕಾಟದಲ್ಲಿದೆ. ಈ ಹುಡುಕಾಟದಲ್ಲಿ ತಾನೇ ಪ್ರತಿಪಾದಿಸುವ ಬಹು ಪಕ್ಷೀಯ ವ್ಯಾಪಾರದ ವಿಚಾರವನ್ನು ತಿಪ್ಪೆಗೆಸೆದು ನೇರ ಬೆದರಿಕೆಗಳು, ಕೈತಿರುಚುವುದರ ಮೂಲಕ ಮಾರುಕಟ್ಟೆ ಗಿಟ್ಟಿಸುವ ಪ್ರಯತ್ನದಲ್ಲಿದೆ.

ಮಾರುಕಟ್ಟೆ ಗಿಟ್ಟಿಸುವ ಸ್ಪರ್ಧೆಯಲ್ಲಿ ಅಮೇರಿಕಾ ಜಪಾನ್ ಇತರ ಏಶ್ಯಾದ ದೇಶಗಳು, ಜರ್ಮನಿ ಮೊದಲಾದ ಯೂರೋಪಿಯನ್ ದೇಶಗಳಿಂದ ತೀವ್ರ ಸ್ಪರ್ಧೆ ಎದುರಿಸುತ್ತಿದೆ. ಅಮೇರಿಕಾ ಸರ್ಕಾರ ಮತ್ತು ಅದನ್ನು ಅನುಸರಿಸಿ ನಮ್ಮ ದೇಶದ ಉದಾರೀಕರಣವಾದಿಗಳು ಆರ್ಥಿಕದಲ್ಲಿ ಸರ್ಕಾರದ ಪಾತ್ರ ಕಮ್ಮಿಯಾಗಬೇಕು, ಹೆಚ್ಚಿನ ಪಾತ್ರ ಖಾಸಗಿ ಉದ್ಯಮಗಳಿಗಿರಬೇಕೆಂದು ಹೇಳಿದರೂ ವಿದೇಶಿ ಮಾರುಕಟ್ಟೆ ಗಿಟ್ಟಿಸಲು ಅಮೇರಿಕನ್ ಸರಕಾರವೇ ಖಾಸಗಿ ಉದ್ಯಮಗಳ ಪರವಾಗಿ ಸರಕಾರೀ ಖಡ್ಗ ಝಳಪಿಸುತ್ತಿದೆ.

ಇತರ ಪ್ರಮುಖ ಬಂಡವಾಳಶಾಹಿ ದೇಶಗಳಾದ ಬ್ರಿಟನ್, ಫ್ರಾನ್ಸ್ ಇತ್ಯಾದಿಗಳ ಅಧಿಕಾರಿಗಳು ಅಮೇರಿಕಾಕ್ಕೆ ತಾಳ್ಮೆಯಿಂದ ವ್ಯವಹರಿಸಿ ಡಬ್ಲ್ಯು.ಟಿ.ಒ ಮೂಲಕವೇ ವ್ಯವಹರಿಸಿ ಎಂದು ಹೇಳುತ್ತಿದ್ದಾರೆ. ಅಂದರೆ ಡಬ್ಲ್ಯು.ಟಿ.ಒ ಮೂಲಕ ವ್ಯವಹರಿಸಲು ಬಹಳ ಸಮಯ ಹಿಡಿಯುತ್ತದೆ. ಅದುವರೆಗೆ ಕಾಯಲು ಅಮೇರಿಕನ್ನರಿಗೆ ಸಾಧ್ಯವಿಲ್ಲ ಎಂದು ಜೆಫ್ರೆ ಗಾರ್ಟನ್ ಅಷ್ಟೇ ಧಿಮಾಕಿನಿಂದ ಮುಂದುವರಿದು ಹೇಳಿದ್ದಾರೆ ಎಂದು ವರದಿಯಾಗಿದೆ.

ಸಾಮ್ರಾಜ್ಯಶಾಹಿಗಳ ಆಂತಃಕಲಹ

ಅಮೆರಿಕಾದ ವಕ್ತಾರರ ಈ ಮಾತಿಗೆ ಪ್ರತಿಕ್ರಿಯಿಸುತ್ತಾ WTO ಅಸ್ತಿತ್ವಕ್ಕೆ ಬಂದು ಕೇವಲ ಆರು ತಿಂಗಳುಗಳಾಗಿದೆ. ಆದ್ದರಿಂದ ಇದರ ಮೂಲಕ ವ್ಯವಹರಿಸಲು ವರ್ಷಗಳೇ ಹಿಡಿಯುತ್ತದೆಂಬ ಹೇಳಿಕೆ ತೀರಾ ಆತುರದ್ದು" ಎಂದು WTO ವಕ್ತಾರರು ಹೇಳಿದ್ದಾರೆ. ಜಪಾನಿನ ವಕ್ತಾರರು ಅಮೆರಿಕಾದ ನಿರ್ಣಯ ಸೇವೆಗಳಲ್ಲಿ ಮುಖ್ಯವಾಗಿ ಹಣಕಾಸು ಸೇವೆಗಳಲ್ಲಿ ಬಹುಪಕ್ಷೀಯ ಮಾತುಕತೆಗಳ ಚೌಕಟ್ಟನ್ನು ಬುಡಮೇಲು ಮಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಇನ್ನೂ ಮುಂದುವರೆದು ಅಮೇರಿಕಾದ ವಕ್ತಾರರು ಮುಂದಿನ ದಶಕಗಳಲ್ಲಿ ವ್ಯಾಪಾರ ನೀತಿಯ ಮಾರ್ಗ ಭಾರೀ ಬಂಡೆಗಲ್ಲುಗಳಿಂದ ತುಂಬಿರುತ್ತದೆ. 7 ಅತೀ ಶ್ರೀಮಂತ ದೇಶಗಳ ಗುಂಪಾದ ಜಿ-7 ಆಂತರಿಕ ಭಿನ್ನಾಭಿಪ್ರಾಯಗಳು ಹೆಚ್ಚಲಿವೆ ಎಂದು ಭವಿಷ್ಯ ನುಡಿದಿದ್ದಾರೆ. ಅವರ ಪ್ರಕಾರ "ಜಿ-7 ಅತ್ಯಂತ ವಿಭಾಜಕವಾಗಬಹುದಾದ ಶಕ್ತಿಯೆಂದರೆ ಅಭಿವೃದ್ಧಿ ಶೀಲ ದೇಶಗಳಲ್ಲಿನ ವಿವಿಧ ಯೋಜನೆಗಳನ್ನು ಗಿಟ್ಟಿಸಲು ನಡೆಯುವ ಸ್ಪರ್ಧೆ. ಅದು ಸುಲಭವಾಗಿ ಹತೋಟಿ ಮೀರಿ ಹೋಗಬಹುದು" ಎಂದು ಈ ಅಮೇರಿಕನ್ ವಕ್ತಾರ ಭಾವಿಸುತ್ತಾರೆ!

ಆಂತರಿಕ ವ್ಯವಹಾರಗಳಲ್ಲಿ ಮೂಗುತೂರಿಸಬೇಡಿ

ಅಮೇರಿಕಾಕ್ಕೆ ವಿಯೆಟ್ನಾಂ ಕಿವಿ ಮಾತು

ಅಮೇರಿಕಾ ವಿಯೆಟ್ನಾಂನೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಸಾಮಾನ್ಯಗೊಳಿಸಲು ನಿರ್ಧರಿಸಿದರೂ ತನ್ನ ರಾಜಕೀಯ ವ್ಯವಸ್ಥೆಯನ್ನು ಬದಲಿಸುವ ಪ್ರಯತ್ನಗಳನ್ನು ಅಥವಾ ತನ್ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ಹಸ್ತಕ್ಷೇಪವನ್ನು ಸಹಿಸುವುದಿಲ್ಲ ಎಂದು ವಿಯೆಟ್ನಾಂ ಸ್ಪಷ್ಟಪಡಿಸಿದೆ.

ಅಮೇರಿಕಾದ ನಿರ್ಣಯವನ್ನು ಸ್ವಾಗತಿಸುತ್ತಾ ಇದರಿಂದ ದಕ್ಷಿಣ-ಪೂರ್ವ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಗೆ ನೆರವಾಗುತ್ತದೆ ಎಂದು ವಿಯೆಟ್ನಾಂ ಮುಖಂಡರು ಹೇಳಿದ್ದಾರೆ. ಆದರೆ "ಮಾನವ ಹಕ್ಕುಗಳ" ಹೆಸರಲ್ಲಿ ವಿಯೆಟ್ನಾಂ ನಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡುವ ಅಮೇರಿಕಾ ಪ್ರಯತ್ನಗಳು ತಮಗೆ ಒಪ್ಪಿಗೆಯಿಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷ ಕ್ಲಿಂಟನ್‌ರ ಕ್ರಮಕ್ಕೆ ಸ್ಪಂದಿಸುತ್ತಾ ತನ್ನ ರಾಜಕೀಯ ವ್ಯವಸ್ಥೆಯನ್ನು ಬದಲಿಸುವ ಯೋಚನೆಯೇನೂ ತನ್ನ ದೇಶಕ್ಕಿಲ್ಲ ಎಂದು ವಿಯೆಟ್ನಾಂನ ಉಪವಿದೇಶಾಂಗ ಮಂತ್ರಿ ಲೆಮಾಯಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ಹೇಳಿದರು. "ಯಾವುದೇ ರಾಜಕೀಯ ವ್ಯವಸ್ಥೆಯನ್ನು ಆರಿಸಿಕೊಳ್ಳುವುದು ಪ್ರತಿಯೊಂದು ದೇಶದ ಹಕ್ಕು ಎಂದು ನಾನು ನಂಬಿದ್ದೇನೆ. ಎಲ್ಲಾ ದೇಶಗಳು ಗೌರವಿಸಬೇಕಾದ ನೀತಿಯದು" ಎಂದು ಅವರು ಸ್ಪಷ್ಟವಾಗಿ ಹೇಳಿದರು.

ಪಾಶ್ಚಿಮಾತ್ಯ ಮಾನವ ಹಕ್ಕು ಸಂಘಟನೆಗಳು ವಿಯೆಟ್ನಾಂ "ಅಂತಸ್ಸಾಕ್ಷಿಯ ಬಂಧಿ"ಗಳನ್ನು ಜೈಲಿನಲ್ಲಿಟ್ಟಿದೆ ಎಂದು ಪ್ರಚಾರ ನಡೆಸುತ್ತಿದ್ದಾರೆ. ಸಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡುವವರನ್ನು ಅವರು ಈ ರೀತಿ "ಅಂತಸ್ಸಾಕ್ಷಿಯ ಬಂಧಿಗಳು" ಎಂದು ಕರೆಯುತ್ತಾರೆ. ವಿಯೆಟ್ನಾಂ ಇಂತಹ ವ್ಯಕ್ತಿಗಳೊಂದಿಗೆ ಕಟ್ಟುನಿಟ್ಟಾಗಿ ವರ್ತಿಸುತ್ತದೆ ಎಂದು ಲೆಮಾಯಿ ಸ್ಪಷ್ಟಪಡಿಸಿದರು. "ಎಲ್ಲಾ ಬಂಧಿಗಳು ಹಾಗೂ ವಿಚಾರಣೆಗೊಳಪಟ್ಟಿದ್ದು ತಾತ್ಕಾಲಿಕ ಬಂಧನದಲ್ಲಿರುವವರು ವಿಯೆಟ್ನಾಮೀ ಕಾನೂನನ್ನು ಉಲ್ಲಂಘಿಸಿದ ವಿಯೆಟ್ನಾಮೀ ನಾಗರಿಕರು" ಎಂದು ಅವರು ಹೇಳಿದರು.

"ಸಮುದ್ರಗಳ್ಳರಂತೆ ವರ್ತಿಸುವವರೇ ಎಚ್ಚರಿಕೆ"

ಅಮೇರಿಕಾಕ್ಕೆ ಕ್ಯೂಬಾ ಎಚ್ಚರಿಕೆ

ಜುಲೈ 13ರಂದು ಮಧ್ಯಾಹ್ನದ ಮೇಲೆ ಅಮೇರಿಕಾದ ಹನ್ನೊಂದು ದೋಣಿಗಳು, ಏಳು ವಿಮಾನಗಳು ಹಾಗೂ ಎರಡು ಹೆಲಿಕಾಪ್ಟರುಗಳು ಕ್ಯೂಬಾ ಜಲಪ್ರದೇಶ ಮತ್ತು ವಾಯುಪ್ರದೇಶದೊಳಗೆ ತೂರಿ ಬಂದವು. ಇದು ಅಂತರರಾಷ್ಟ್ರೀಯ ಕಾನೂನಿನ ನಗ್ನ ಉಲ್ಲಂಘನೆ. ಕೆಲವು ದೋಣಿಗಳು ಕ್ಯೂಬಾದ ಉತ್ತರ ಕರಾವಳಿಯ ಹತ್ತು ಕಿಲೋಮೀಟರಿನೊಳಗಿನವರೆಗೆ ಬಂದವು. ಎಲ್ಲಾ ವಿಮಾನಗಳು ಕ್ಯೂಬಾದ ವಾಯು ಪ್ರದೇಶವನ್ನೂ ಉಲ್ಲಂಘಿಸಿದವು. ಒಂದು ವಿಮಾನವಂತೂ ರಾಜಧಾನಿ ಹವಾನಾದ ಕರಾವಳಿ ಪ್ರದೇಶದ ಮೇಲೆ ಹಾರಾಟ ನಡೆಸಿತು. "ಅವು ಕ್ಯೂಬಾದ ಕರಾವಳಿ ಕಾವಲು ಪಡೆಯ ದೋಣಿಗಳ ಮೇಲೆ ಸ್ವಲ್ಪವೇ ಎತ್ತರದಲ್ಲಿ ಉದ್ರೇಕಕಾರಿ ಅಪಾಯಕಾರಿ ರೀತಿಯಲ್ಲಿ ಹಾರಾಡಿದರೂ ಕರಾವಳಿ ಕಾವಲು ಪಡೆಗಳು ಅತ್ಯಂತ ಸಮಚಿತ್ತತೆಯಿಂದ ಇದ್ದವು" ಎಂದಿರುವ ಕ್ಯೂಬಾ ಸರ್ಕಾರ ಇಂತಹ ಉಲ್ಲಂಘನೆಗಳ ಪುನರಾವರ್ತನೆಯಾದರೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅಮೇರಿಕಾವನ್ನು ಎಚ್ಚರಿಸಿದೆ.

"ತನ್ನ ಗಡಿಗಳ ಉಲ್ಲಂಘನೆಯನ್ನು, ತನ್ನ ವಿರುದ್ಧ ಯಾವುದೇ ಉದ್ರೇಕಕಾರಿ ಚಟುವಟಿಕೆಗಳನ್ನು ಯಾವುದೇ ದೇಶ ಸಹಿಸಲಾರದು. ಕ್ಯೂಬಾ ಕೂಡಾ ಸಹಿಸುವುದಿಲ್ಲ, ಹಿಂದೆ ಹಲವು ಸಂದರ್ಭಗಳಲ್ಲಿ ಅಮೇರಿಕಾದಿಂದ ಬರುವ ದೋಣಿಗಳು ನಮ್ಮ ಜಲಪ್ರದೇಶದೊಳಗೆ ಬಂದು ರಕ್ಷಣೆಯಿಲ್ಲದಿರುವ ಆರ್ಥಿಕ ಮತ್ತು ನಾಗರಿಕ ಗುರಿಗಳ ಮೇಲೆ ಭಯೋತ್ಪಾದಕ ಕೃತ್ಯಗಳನ್ನು ನಡೆಸಿದೆ. ಇಂತಹ ಕೃತ್ಯಗಳಲ್ಲಿ ಹಲವು ಜನರ ಕಗ್ಗೊಲೆ ನಡೆಸಿವೆ. ಇಂತಹ ಕೃತ್ಯಗಳು ಇನ್ನು ಮುಂದೆ ನಡೆಯದಂತೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕ್ಯೂಬಾ ಸರಕಾರದ ದೃಢ ನಿರ್ಧಾರವನ್ನು ಪುನರುಚ್ಚರಿಸುತ್ತೇವೆ" ಎಂದಿರುವ ಕ್ಯೂಬಾ ಸರಕಾರದ ಹೇಳಿಕೆ "ನಮ್ಮ ಸಾರ್ವಭೌಮ ಜಲಪ್ರದೇಶವನ್ನು ಉಲ್ಲಂಘಿಸಿ ಬರುವ ಯಾವುದೇ ವಿದೇಶೀ ದೋಣಿಯನ್ನು ಮುಳುಗಿಸಿಬಿಡಲಾಗುವುದು. ತಾಳ್ಮೆಗೂ ಮಿತಿಯಿದೆ ಹೀಗೇನಾದರೂ ಆದರೆ ಅದರ ಸಂಪೂರ್ಣ ಜವಾಬ್ದಾರಿ ಇಂತಹ ಸಮುದ್ರಗಳ್ಳತನದಂತಾದ ಕೃತ್ಯಗಳನ್ನು ಯೋಜಿಸಿ, ಪ್ರೋತ್ಸಾಹಿಸಿ, ಕಾರ್ಯಗತಮಾಡಿಸುವ ಅಥವಾ ಅವನ್ನು ಸಹಿಸಿಕೊಳ್ಳುವವರ ಮೇಲೆ ಬೀಳುತ್ತದೆ" ಎಂದು ಕಟ್ಟುನಿಟ್ಟಾದ ಎಚ್ಚರಿಕೆ ನೀಡಿದೆ.

ಗಾರ್ಮೆಂಟ್ ಕಾರ್ಮಿಕರ ಹೋರಾಟ

ಪುಟ 3ರಿಂದ

ಒಂದು ಕಡೆ ಸಿಐಟಿಯು ಮುಖಂಡರ ಒತ್ತಡ, ಇನ್ನೊಂದೆಡೆ ಬೇರೆ ಬೇರೆ ಪ್ರದೇಶದ ಗಾರ್ಮೆಂಟ್ಸ್ ಕಾರ್ಮಿಕರ ಬೆಂಬಲದಿಂದ ಕಾರ್ಮಿಕ ಆಯುಕ್ತರು ಒಂದು ಸಭೆಯನ್ನು ಗೊತ್ತುಪಡಿಸಿದರು. ಜೂನ್ 7 ರಂದು ನಡೆದ ಈ ಸಭೆಯಲ್ಲಿ ಕಾರ್ಮಿಕ ಆಯುಕ್ತರು ಮೌರ್ಯ ಮಾಲಿಕರಿಗೆ 8 ರಿಂದ ಬೀಗ ಮುದ್ರೆ ವಾಪಸ್ ಪಡೆಯಲು ಆದೇಶ ನೀಡಿದರು.

ಮಾಲೀಕ ವರ್ಗದವರು ಇದಕ್ಕೆ ಒಪ್ಪದೇ ತಮ್ಮ ಅಧಿಕಪ್ರಸಂಗತನವನ್ನು ತೋರಿಸಿದರು. ಈ ಹೋರಾಟವನ್ನು ಇನ್ನಷ್ಟು ಮುಂದಕ್ಕೆ ಹಾಕಿದರೆ ಕಾರ್ಮಿಕರು ಸಿಐಟಿಯುವನ್ನು ಬಿಟ್ಟು ಬಿಡುತ್ತಾರೆ ಎಂಬ ಅವರ ದುರಾಸೆಯನ್ನು ಕಾರ್ಮಿಕರು ನುಚ್ಚುನೂರು ಮಾಡಿದರು.

ಕಾರ್ಮಿಕ ಆಯುಕ್ತರಿಗೆ ಒತ್ತಡ ಹಾಕಲು ಸಿಐಟಿಯು ತನ್ನ ಒಂದೊಂದೇ ಅಸ್ತ್ರವನ್ನು ಬಿಡಲಾರಂಭಿಸಿತು. ಬನ್ನೇರುಘಟ್ಟದಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರು (ಸುಮಾರು 2000) ಜೂನ್ 12ರಂದು ಸುಡು ಬಿಸಿಲನ್ನು ಲೆಕ್ಕಿಸದೆ ಮೆರವಣಿಗೆಯಲ್ಲಿ ಕಾರ್ಮಿಕ ಆಯುಕ್ತರ ಕಛೇರಿಗೆ ಬಂದು ಮೌರ್ಯ ಎಕ್ಸ್ ಪೋರ್ಟ್ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಪಡಿಸಿದರು.

ಕಾರ್ಮಿಕರ, ಕಾರ್ಮಿಕ ಮುಖಂಡರ ಒತ್ತಡಕ್ಕೆ ಎರಡನೇ ಸಭೆಯನ್ನು ಕರೆದರೂ ಅದು ಯಾವುದೇ ರೀತಿಯ ಫಲಿತಾಂಶವನ್ನು ಕಾಣಲಿಲ್ಲ. ಇದರಿಂದ ಕೆರಳಿದ ಕಾರ್ಮಿಕ ಮುಖಂಡರು ಜೂನ್ 16 ರಂದು ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲು ತೀರ್ಮಾನಿಸಿದರು.

ಈ ಮಧ್ಯೆ ಹೊಸೂರು ರಸ್ತೆಯಲ್ಲಿರುವ ಜಿಯಾಧರ್ ಮತ್ತು ನೀಲಂ ಎಕ್ಸ್‌ಪೋರ್ಟ್ ಕಾರ್ಮಿಕರು ಈ ಹೋರಾಟದ ಕಣಕ್ಕೆ ಇಳಿದರು. ಕನಿಷ್ಠ ಕೂಲಿ ಕಾಯಿದೆ ಪ್ರಕಾರ ಸಿಗಬೇಕಾದ ಸೌಲಭ್ಯಗಳನ್ನು ಪಡೆಯಬೇಕೆಂಬ ಯೂನಿಯನ್‌ನ ಕರೆಗೆ ಕಾರ್ಮಿಕರು ಓಗೊಟ್ಟರು.

ಮುಖ್ಯಮಂತ್ರಿ ಮನೆ ಮುಂದೆ ನಡೆಸಿದ ಧರಣಿ ಯಾವ ಫಲವನ್ನು ನೀಡದಿದ್ದರೂ, ಕಾರ್ಮಿಕ ಸಚಿವರು ಕಾರ್ಮಿಕ ಆಯುಕ್ತರು, ಕಾರ್ಮಿಕ ಮುಖಂಡರು, ಮಾಲಿಕರ ಸಭೆ ನಡೆಯಿತು. ಈ ಸಭೆಯಲ್ಲಿ ಕಾರ್ಖಾನೆಯ ಬೀಗ ಮುದ್ರೆ ತೆರೆಯಲು ಆದೇಶ ನೀಡಿದರೂ ಸಹ ಬೀಗ ಮುದ್ರೆ ತೆರೆಯಲಿಲ್ಲ.

ಇಷ್ಟೆಲ್ಲಾ ಸಮರಧೀರ ಹೋರಾಟ ನಡೆಸಿದರೂ ಕಿವುಡ, ಕುರುಡ ಸರಕಾರಕ್ಕೆ ಯಾವುದೇ ಚಿಂತೆ ಇರಲಿಲ್ಲ. ಹಸಿದ ಹೊಟ್ಟೆಯ ಚುರುಗುಟ್ಟುವಿಕೆ ಅರ್ಥವಾಗಿಲ್ಲ. ಇದನ್ನು ಕಾರ್ಮಿಕರಿಗೆ ತಿಳಿಸಲು ಸಿಐಟಿಯು ದಿನ ದಿನವೂ ಸಭೆಯನ್ನು ಏರ್ಪಡಿಸಿತ್ತು. ಅನೇಕ ಸಂಘಟನೆಗಳ ಬೆಂಬಲವನ್ನು ಕೋರಿದ ಸಿಐಟಿಯು ತುಳಿತಕ್ಕೊಳಗಾದ ಕಾರ್ಮಿಕರನ್ನು ಮೇಲೆತ್ತಲು ಬೇಕಾದ ಯಾವ ತ್ಯಾಗವನ್ನಾದರೂ ಮಾಡಲು ಸಿದ್ಧವೆನ್ನುವುದನ್ನು ಘೋಷಿಸಿತು. ಇದರ ಫಲವಾಗಿ ಮತ್ತೊಂದು ಸಭೆಯನ್ನು ಕಾರ್ಮಿಕರು ಏರ್ಪಡಿಸಿದರು. ಆದರೆ ಮಾಲಿಕರು ಗೈರು ಹಾಜರಾದುದರ ಫಲವಾಗಿ ಸಭೆಯು ನಡೆಯಲಿಲ್ಲ.

ಬಾಣಲೆಯಿಂದ ಬೆಂಕಿಗೆ

ಗೂಂಡಾಗಳನ್ನು ಬಳಸಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮಾಲಿಕರ ತಂತ್ರಕ್ಕೆ ಸುಮಾರು 50 ಕಾರ್ಮಿಕರು ಬಲಿ ಬಿದ್ದರು. ಬೀಗ ಮುದ್ರೆಯನ್ನು ತೆರವು ಮಾಡದೆ ಅವರನ್ನು ಬೇರೆ ಕಡೆ ಕೆಲಸ ನೀಡಿ ಅವರಿಂದ ಖಾಲಿ ಪತ್ರಕ್ಕೆ ಸಹಿ ತೆಗೆದುಕೊಂಡಿದ್ದಾರೆ. ಆದರೆ ಒಳಹೋದ ಕಾರ್ಮಿಕರ ಪರಿಸ್ಥಿತಿ ಈಗ ಹೇಗಿದೆಯೆಂದರೆ ಬಾಣಲೆಯಿಂದ ಬೆಂಕಿಗೆ ಬಿದ್ದ ಪತಂಗದಂತಾಗಿದೆ. ಈಗ ಅವರೂ ಕೂಡಾ ಹೋರಾಟಕ್ಕೆ ಹಿಂತಿರುಗಲು ಸಮಯ ಕಾಯುತ್ತಿರುವುದು ಕಾರ್ಮಿಕರ ಒಗ್ಗಟ್ಟಿಗೆ ಸಂದ ಜಯವೆಂದೇ ಕಾರ್ಮಿಕ ಮುಖಂಡರುಹೇಳುತ್ತಾರೆ.

ತಾ. 20ರಂದು ಕಾರ್ಮಿಕ ಆಯುಕ್ತರ ಕಛೇರಿಯಿಂದ ಪೋಲೀಸ್ ಕಮೀಷನರ್ ಕಛೇರಿಗೆ ಸುಮಾರು 1000 ಕಾರ್ಮಿಕರು ಮೆರವಣಿಗೆ ನಡೆಸಿದರು. ಪೋಲೀಸ್ ಕಮೀಷನರ್, ಕಾರ್ಮಿಕ ಆಯುಕ್ತರ ಬಿಗಿ ಪಟ್ಟಿನಿಂದ ಜೂನ್ 21 ರಂದು ನಡೆದ ಇನ್ನೊಂದು ಸಂಧಾನ ಸಭೆಯಲ್ಲಿ ಕೊನೆಗೂ ಒಂದು ಒಪ್ಪಂದ ಏರ್ಪಟ್ಟಿತು.

ಈಗಿರುವ ಕಾರ್ಮಿಕರ ಸಿಟ್ಟನ್ನು ಕಂಡಿದ್ದ ಮಾಲಿಕರು ಅಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಕಾರ್ಮಿಕರಿಗೆ ಪುನಃ ಕೆಲಸ ಕೊಡುತ್ತೇವೆ ಆದರೆ ಸದ್ಯಕ್ಕೆ ಸಂಬಳ ಸಹಿತ ರಜೆ ನೀಡುತ್ತೇವೆ ಏಕೆಂದರೆ ರಫ್ತು ಮಾಡುವ ಹೆಚ್ಚು ಬೆಲೆಬಾಳುವ ಸಲಕರಣೆಗಳು ಅಲ್ಲಿರುವುದರಿಂದ ಅಲ್ಲಿ ಈಗ ಕೆಲಸ ಮಾಡಲು ನಾವು ಒಪ್ಪುವುದಿಲ್ಲ. ಜೂನ್ 22ರವರೆಗೆ ಬೇರೆ ಕಡೆ ಕೆಲಸವನ್ನು ನೀಡುವವರೆಗೂ ಅವರಿಗೆ ಕೆಲಸ ರಹಿತ ಸಂಬಳ ನೀಡುತ್ತೇವೆಂದು ಘೋಷಿಸಿದರು.

ಆನಂತರವೂ ಅನೇಕ ಸಬೂಬುಗಳನ್ನು ನೀಡಿದ ಮಾಲಿಕರು ಜುಲೈ 1 ರವರೆಗೆ ಕೆಲಸ ರಹಿತ ಸಂಬಳ ಘೋಷಿಸಿದರು. ಮಾಲಿಕರ ಒಳಸಂಚನ್ನು ಮನಗಂಡ ಕಾರ್ಮಿಕ ಸಂಘವು ಜುಲೈ 8 ರವರೆಗೆ ಕಾರ್ಮಿಕರಿಗೆ ಕೆಲಸ ನಿರಾಕರಿಸಿದರೆ ಜುಲೈ 8 ರಿಂದ ಮುಖ್ಯಮಂತ್ರಿ ಮನೆ ಮುಂದೆ ಆಮರಣಾಂತ ಉಪವಾಸ ನಡೆಸಲು ತೀರ್ಮಾನಿಸಿತು. ಇದನ್ನು ಅರಿತ ಕಾರ್ಮಿಕ ಇಲಾಖೆ ಇನ್ನೊಂದು ಸುತ್ತಿನ ಮಾತುಕತೆಯನ್ನು ಜುಲೈ 11 ರಂದು ಏರ್ಪಡಿಸಿತು. ಈ ಸಭೆಯೂ ಎಂದಿನಂತೆ ವಿಫಲವಾಯಿತು.

ಭಾಗಶಃ ಯಶಸ್ಸು

ಇನ್ನೂ ಮುಂದುವರೆದಿದೆ ಹೀಗೆಯೇ ಕಾರ್ಮಿಕರ ಬವಣೆಯ ಬದುಕು. ಈ ಬವಣೆಯನ್ನು ನಿಲ್ಲಿಸಲು ಸಿಐಟಿಯು ನಡೆಸುತ್ತಿರುವ ಹೋರಾಟಕ್ಕೆ ಭಾಗಶಃ ಯಶಸ್ಸು ಸಿಕ್ಕಿದೆ.

ಈಗ ನಡೆಯುತ್ತಿರುವ ಈ ಹೋರಾಟದ ಕಿಡಿಯು ಬೇರೆ ಕಡೆಗಳಿಗೆ ಪಸರಿಸಲು ಆರಂಭವಾಗಿದೆ. ಇದನ್ನು ತಡೆಗಟ್ಟಲು ಮಾಲೀಕರು ಅನೇಕ ತಂತ್ರಗಳನ್ನು ಬಳಸುತ್ತಿದ್ದರೂ ಕೂಡಾ ಸಿಐಟಿಯುನ ಬಲವನ್ನು ಕಡೆಗಣಿಸಲು ಸಾಧ್ಯವಾಗುತ್ತಿಲ್ಲ. ಬೇರೆ ಕಾರ್ಖಾನೆಗಳ ಮಾಲೀಕರು ಈ ಹೋರಾಟವನ್ನು ಕಂಡು ಮಾಲಿಕರು ಸಿಐಟಿಯು ಈ ಹೋರಾಟವನ್ನು ವಿಸ್ತರಿಸಬಾರದು ಎಂಬ ಏಕೈಕ ಉದ್ದೇಶದಿಂದ 150 ರಿಂದ 250ರೂ.ಗಳವರೆಗೆ ಸಂಬಳ ಹೆಚ್ಚಿಸಿದ್ದಾರೆ. ಇದು ನಿಜಕ್ಕೂ ಸಿಐಟಿಯುನ ಜಯ.

ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿ ದೀರ್ಘ ಹೋರಾಟದಿಂದ ಮೌರ್ಯ ಕಾರ್ಮಿಕರ ಉತ್ಸಾಹವೇನೂ ಕುಂದಿಲ್ಲ. ಪುಟಕ್ಕಿಟ್ಟ ಚಿನ್ನದಂತೆ ದಿನದಿನಕ್ಕೂ ಗಟ್ಟಿಗೊಳ್ಳುತ್ತಿರುವ ಈ ಕಾರ್ಮಿಕರು ಗೆಲುವನ್ನು ಕಂಡೆ ನಾವು ಕಾರ್ಖಾನೆಯ ಮೆಟ್ಟಿಲನ್ನು ಹತ್ತುತ್ತೇವೆಂಬ ಪ್ರತಿಜ್ಞೆ ಮಾಡಿದ್ದಾರೆ.ಈ ಹೋರಾಟದಿಂದ ಗಾರ್ಮೆಂಟ್ಸ್ ಸಂಘಟನೆಗೆ ಅನೇಕ ಕಡೆ ಉತ್ತಮವಾದ ಬೆಂಬಲ ಕಂಡು ಬಂದಿದ್ದು ಕೆಲವೇ ದಿನಗಳಲ್ಲಿ ಎಲ್ಲಾ ಕಾರ್ಖಾನೆಗಳಲ್ಲಿ ನಮ್ಮ ಸಂಘಟನೆಯನ್ನು ಬಲಪಡಿಸಿ ಕಾರ್ಮಿಕರಿಗೆ ದೊರಕಬೇಕಾದ ನ್ಯಾಯಯುತ ಬೇಡಿಕೆಗಳನ್ನು ಕೊಡಿಸುತ್ತೇವೆ ಎಂಬ ಕಾರ್ಮಿಕರ ಮುಖಂಡರ ಆಶ್ವಾಸನೆ ನಿಜಕ್ಕೂ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರ ಮುಂದಿನ ಭವಿಷ್ಯದ ಉತ್ತಮ ವಾಗುತ್ತದೆ ಎಂಬ ವಿಶ್ವಾಸವನ್ನುಂಟು ಉಂಟು ಮಾಡುತ್ತದೆ.

ವರದಿ: ಆರ್. ರಾಜಶೇಖರ್

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಸುಪ್ರೀಂ ಕೋರ್ಟು ಚುನಾವಣಾ ಆಯೋಗವನ್ನು ಕಾಪಾಡಿದೆ -ಪ್ರಕಾಶ್ ಕಾರಟ್

ಇತ್ತೀಚೆಗೆ ಬಹುಸದಸ್ಯ ಚುನಾವಣಾ ಆಯೋಗ ಕುರಿತಂತೆ ಸುಪ್ರೀಂ ಕೋರ್ಟು ನೀಡಿರುವ ತೀರ್ಪು ಮುಖ್ಯ ಚುನಾವಣಾ ಆಯುಕ್ತರ ಸರ್ವಾಧಿಕಾರ ಶಾಹೀ, ಮೊಂಡುತನದ ಹಾಗೂ ಸ್ವೇಚ್ಛಾಚಾರಿ ಹುಚ್ಚಾಟಗಳಿಂದ ಭಾರತ ಚುನಾವಣಾ ಆಯೋಗವನ್ನು ರಕ್ಷಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್ ಹೇಳಿದ್ದಾರೆ.

ಈ ತೀರ್ಪು ಸರಿಯಾದ ಸಮಯಕ್ಕೆ ಬಂದಿದೆ. ಏಕೆಂದರೆ ಮುಂಬರುವ ಸಂಸದೀಯ ಚುನಾವಣೆಗಳಲ್ಲಿ ಶೇಷನ್ ಬಹಳಷ್ಟು ಕಿಡಿಗೇಡಿತನ ತೋರಿಸುವ ಸಂಭವವಿತ್ತು. ಬಿಹಾರದ ವಿಧಾನಸಭಾ ಚುನಾವಣೆಗಳನ್ನು ಸತತವಾಗಿ ಮೂರು ಬಾರಿ ಮುಂದೂಡಿದಾಗಲೇ ಇದರ ಮುನ್ಸೂಚನೆ ಸಿಕ್ಕಿತ್ತು ಎಂದು ಈ ಸುಪ್ರೀಂ ಕೋರ್ಟು ತೀರ್ಪು ಕುರಿತಂತೆ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ಕಾಂ. ಕಾರಟ್ ಹೇಳಿದ್ದಾರೆ.

ಒಂದು ಬಹುಸದಸ್ಯ ಚುನಾವಣಾ ಆಯೋಗದ ಪ್ರಶ್ನೆ ಕೇವಲ ಒಬ್ಬ ಶೇಷನ್‌ರ ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕುವ ಪ್ರಶ್ನೆ ಮಾತ್ರ ಅಲ್ಲ, ಇದು ಚುನಾವಣಾ ಸುಧಾರಣೆಯ ವ್ಯಾಪಕ ಪ್ರಶ್ನೆಯೊಂದರ ಭಾಗ. ಸಂಸದೀಯ ಪ್ರಜಾಪ್ರಭುತ್ವದ ಒಂದು ಪ್ರಮುಖ ಸಂಸ್ಥೆಯನ್ನು ಒಬ್ಬ ವ್ಯಕ್ತಿಯ ಕೈಯಲ್ಲಿ ಬಿಡಲು ಆಗುವುದಿಲ್ಲ ಎಂಬುದೇ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಬಹುಸದಸ್ಯ ಆಯೋಗದ ಬೇಡಿಕೆ ಇಡಲು ಕಾರಣ ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ. ರಾಜೀವ್ ಗಾಂಧಿಯವರೆದುರು ಗೋಣು ಹಾಕುತ್ತಿದ್ದ ಒಬ್ಬ ಅಧಿಕಾರಿ ತಾನೇ ಇಡೀ ದೇಶವನ್ನು ರಕ್ಷಿಸಲು ಬಂದ ಪ್ರವಾದಿಯೆಂಬಂತೆ ಸೋಗು ಹಾಕಲಾರಂಭಿಸಿದ ವ್ಯಕ್ತಿಯ ಕೈಯಲ್ಲಿ ಚುನಾವಣಾ ಆಯೋಗದ ಇಂತಹ ಅಪಾರ ಅಧಿಕಾರ ಕೇಂದ್ರೀಕೃತವಾಗಿದ್ದು ಅಪಾಯಕಾರಿಯಾಗಿತ್ತು. ಆದ್ದರಿಂದ ಸುಪ್ರೀಂ ಕೋರ್ಟ್ ತೀರ್ಪು ಒಂದು ಅನಿಷ್ಟಕಾರೀ ಸನ್ನಿವೇಶದಲ್ಲಿ ಒಂದು ನಿರ್ಣಾಯಕ ತಡೆಯಾಗಿ ಬಂದಿದೆ ಎಂದು ಕಾಂ. ಕಾರಟ್ ತಮ್ಮ ಲೇಖನದಲ್ಲಿ ವರ್ಣಿಸಿದ್ದಾರೆ.

ಒಬ್ಬರಲ್ಲ ಮೂವರು ಶೇಷನ್

ಸಿಪಿಐ(ಎಂ) ಮತ್ತು ಎಡಪಕ್ಷಗಳ ಒತ್ತಾಯದ ಮೇರೆಗೆ 1993ರಲ್ಲಿ ಚುನಾವಣಾ ಕಮೀಷನರುಗಳ ವ್ಯಾಪ್ತಿ ಹಾಗೂ ಅಧಿಕಾರಗಳನ್ನು ನಿರ್ದಿಷ್ಟಪಡಿಸಿ ಹಾಗೂ ಇನ್ನಿಬ್ಬರು ಚುನಾವಣಾ ಆಯುಕ್ತರನ್ನು (ಎಂ.ಎಸ್. ಗಿಲ್ ಮತ್ತು ಜಿ.ವಿ. ಕೃಷ್ಣಮೂರ್ತಿ) ನೇಮಿಸಿ ಸರಕಾರ ಸುಗ್ರೀವಾಜ್ಞೆ ಹೊರಡಿಸಿತು. ನಂತರ ಇದು ಶಾಸನವಾಯಿತು. ಇದನ್ನೇ ಪ್ರಶ್ನಿಸಿ ಶೇಷನ್ ಸುಪ್ರೀಂ ಕೋರ್ಟಿಗೆ ಹೋಗಿದ್ದರು ಹಾಗೂ ಇನ್ನಿಬ್ಬರು ಕಮಿಷನರ್ ಗಳ ಕೆಲಸದಲ್ಲಿ ಅಡ್ಡಿಯುಂಟುಮಾಡುವ ಅಲ್ಪತನ ತೋರಿದ್ದರು. ಶೇಷನ್‌ರ ವರ್ತನೆ ಕಂಡು ಸಿಪಿಐ(ಎಂ) ಒಂದು ಹೊಸ ಶಾಸನ ತಂದು ಬಹುಸದಸ್ಯ ಚುನಾವಣಾ ಆಯೋಗ ಸುಸೂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕೆಂದು ಒತ್ತಾಯಿಸಿತು. ಸರಕಾರ ಒಂದು ಸಂವಿಧಾನ ತಿದ್ದುಪಡಿ ತಂದಿತು. ಆದರೆ ಅದರಲ್ಲಿ ಚುನಾವಣಾ ಕಮಿಷನರುಗಳನ್ನು ಸರಕಾರವೇ ನೇಮಿಸುವ ಅಂಶವಿದ್ದದ್ದನ್ನು ಬದಲಿಸಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಹಾಗೂ ಇತರ ಸಂವಿಧಾನಿಕ ಅಧಿಕಾರಿಗಳೊಡನೆ ಸಮಾಲೋಚಿಸಿ ಕಮಿಷನರ್ ಗಳನ್ನು ನೇಮಿಸುವ ವ್ಯವಸ್ಥೆಯಿರಬೇಕೆಂದು ಸಿಪಿಐ(ಎಂ) ಒತ್ತಾಯಿಸಿತು. ಸರಕಾರ ಆಗ 83ನೇ ಸಂವಿಧಾನ ತಿದ್ದುಪಡಿ ತಂದಿತು. ಇದರಲ್ಲಿ ಎರಡು ಅಂಶಗಳಿದ್ದವು- 1) ಚುನಾವಣಾ ಆಯುಕ್ತರುಗಳ ನೇಮಕ ಕೇವಲ ಸರಕಾರದ ಕೈಯಲ್ಲಿ ಮಾತ್ರ ಇರುವಂತಹ ಸ್ಥಿತಿ ಮೊಟ್ಟ ಮೊದಲ ಬಾರಿಗೆ ಬದಲಾಗಿ ಚುನಾವಣಾ ಆಯೋಗದ ಸ್ವತಂತ್ರ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತಿತ್ತು, 2) ಚುನಾವಣಾ ಆಯೋಗದ ಸದಸ್ಯರನ್ನು ತೆಗೆದುಹಾಕಬೇಕೆಂದಿದ್ದರೆ ಸುಪ್ರೀಂ ಕೋರ್ಟು ನ್ಯಾಯಾಧೀಶರಂತೆ ಅವರ ಮೇಲೆ ಸಂಸತ್ತಿನ 'ಮಹಾಭಿಯೋಗ' ನಡೆಸಬೇಕು ಎಂಬುದೂ ಈ ತಿದ್ದುಪಡಿಯಲ್ಲಿತ್ತು. ಎಡ ಮತ್ತು ಜಾತ್ಯಾತೀತ ಪಕ್ಷಗಳೊಂದಿಗೆ ಸಮಾಲೋಚಿಸಿ ಸರಕಾರ ಚುನಾವಣಾ ಆಯುಕ್ತರುಗಳ ನೇಮಕಕ್ಕೆ ಮೂವರು ನ್ಯಾಯಾಧೀಶರ ಸಮಿತಿ ರಚಿಸಲೂ ಒಪ್ಪಿತು. ಆದರೆ ಈ ಮಹತ್ವಪೂರ್ಣ ಮಸೂದೆ ಕೆಲವು ಪಕ್ಷಗಳ ಮುಖ್ಯವಾಗಿ ಸಿಪಿಐನ ಭಿನ್ನ ನಿಲುವಿನಿಂದಾಗಿ ಶಾಸನವಾಗಲಿಲ್ಲ, ಭಿನ್ನ ನಿಲುವು ತಳೆದವರ ವಾದವೆಂದರೆ ಇದರಿಂದ ಮುಖ್ಯ ಚುನಾವಣಾ ಆಯುಕ್ತರ ಅಧಿಕಾರಗಳಿಗೆ ಕುಂದು ಬರುತ್ತದೆ ಎಂದು ಮಧ್ಯಮ ವರ್ಗದ ಒಂದು ವಿಭಾಗ ಹಾಗೂ ಮೇಲ್ವರ್ಗದಲ್ಲಿ ಶೇಷನ್ ರ ಜನಪ್ರಿಯತೆ ಹೆಚ್ಚುತ್ತಿರುವುದನ್ನು ಕಂಡ ಅವರು ಈ ನಿಲುವು ತಳೆದರು. ಆದರೆ ಇದರಿಂದ ತಾವು ಹೇಳಿದಂತೆ ಕುಣಿಯುವವರನ್ನು, ಬೂಟಾಟಿಗರನ್ನು ಚುನಾವಣಾ ಕಮಿಷನರುಗಳಾಗಿ ನೇಮಿಸುವ ಅಧಿಕಾರ ಈಗಿನ ಕಾಂಗ್ರೆಸ್ ಸರಕಾರ ಅಥವಾ ಮುಂಬರುವ ಸರಕಾರಗಳ ಕೈಯಲ್ಲೇ ಉಳಿಯುವಂತಾಯಿತು. ಈಗ ಕಾಂಗ್ರೆಸ್ ಸರಕಾರಕ್ಕೆ ಒಂದಲ್ಲ ಮೂರು ಶೇಷನ್ ಗಳನ್ನು ನೇಮಿಸುವ ಅಧಿಕಾರ ಇದೆ ಎಂಬುದರತ್ತ ಕಾಂ. ಪ್ರಕಾಶ್ ಕಾರಟ್ ತಮ್ಮ ಲೇಖನದಲ್ಲಿ ಗಮನ ಸೆಳೆದಿದ್ದಾರೆ.

ಸುಪ್ರೀಂ ಕೋರ್ಟು ತನ್ನ ತೀರ್ಪಿನ ಮೂಲಕ ಈಗ ಸಂವಿಧಾನದ ನಿಲುವನ್ನು ಸ್ಪಷ್ಟಪಡಿಸಿದೆ. ಇದರಿಂದ ಚುನಾವಣಾ ಆಯೋಗಕ್ಕಿದ್ದ ಸದ್ಯದ ಅಪಾಯವಂತೂ ದೂರವಾಗಿದೆ. ಆದರೆ ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ಬಲಪಡಿಸುವ ಸುಧಾರಣೆಯ ಪ್ರಶ್ನೆ ಮಾತ್ರ ಹಾಗೆಯೇ ಉಳಿದಿದೆ. ದಿನೇಶ್ ಗೋಸ್ವಾಮಿಯ ವರದಿಯ ಶಿಫಾರಸುಗಳ ಪ್ರಕಾರ ಇದನ್ನು ಕೈಗೆತ್ತಿಕೊಳ್ಳಬೇಕು ಎಂದು ಪ್ರಕಾಶ್ ಕಾರಟ್ ಆಶಿಸಿದ್ದಾರೆ.

ಈಗ ಒಂದು ಮಾತಂತೂ ಸ್ಪಷ್ಟ, ಶೇಷನ್ ಇರಲಿ, ಇಲ್ಲದಿರಲಿ ಚುನಾವಣಾ ಆಯೋಗ ಒಂದು ಸಮೂಹವಾಗಿ, ಸಮಾನ ಅಧಿಕಾರದ ಸಹೋದ್ಯೋಗಿಗಳ ಒಂದು ಸಂಸ್ಥೆಯಾಗಿ ಕೆಲಸ ಮಾಡಬೇಕಾಗಿದೆ. ಶೇಷನ್ ಈ ವಾಸ್ತವತೆಗೆ ಹೊಂದಿಕೊಳ್ಳುತ್ತಾರೋ ಇಲ್ಲವೋ ಕಾದು ನೋಡಬೇಕು. ಹೊಂದಿಕೊಳ್ಳಲಾಗದಿದ್ದರೆ ಯಾವುದೇ ಬೊಬ್ಬೆ ಎಬ್ಬಿಸದೆ ಹೊರಟು ಹೋಗುವುದು ಅವರಿಗಿರುವ ಏಕೈಕ ದಾರಿ ಎಂದು ಕಾಂ. ಪ್ರಕಾಶ್ ಕಾರಟ್ ತಮ್ಮ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್(ಐ), ಬಿಜೆಪಿಗಳನ್ನು ಸೋಲಿಸಲು....

ಪುಟ 1 ರಿಂದ

ಎಂದು ಸುರ್ಜಿತ್ ಹೇಳಿದರು.

ಆಗಸ್ಟ್ -ಬೆಲೆಯೇರಿಕೆಯ ವಿರೋಧ ದಿನ

ಚುನಾವಣೆ ಮತ್ತು ಚುನಾವಣಾ ಪರ್ಯಾಯವಲ್ಲದೆ ಸುರ್ಜಿತ್ ಕೇಂದ್ರ ಸಮಿತಿ ಆರ್ಥಿಕ ನೀತಿಗಳ ವಿರುದ್ಧ ಸಮರವನ್ನು ಇನ್ನಷ್ಟು ಹೆಚ್ಚಿಸಲು ನಿರ್ಧರಿಸಿದ ಬಗ್ಗೆ ವಿವರವಾಗಿ ಮಾತನಾಡಿದರು. ಸೆಪ್ಟೆಂಬರ್‌ನಿಂದ ನವೆಂಬರ್ ವರೆಗೆ ಒಂದು ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂಬ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಗೆ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾಕೇಂದ್ರ ಸಮಿತಿ ಆಗಸ್ಟ್ 8 ರಂದು ಬೆಲೆಯೇರಿಕೆ ವಿರೋಧಿ ದಿನವಾಗಿ ಆಚರಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಒತ್ತಾಯಿಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಪೇಟೆಂಟ್ ಮಸೂದೆ ಪಾಸಾಗಿಲ್ಲವೇಕೆ?

ಕೇಂದ್ರ ಸರಕಾರದ ಹಾಗೂ ಪಶ್ಚಿಮ ಬಂಗಾಳದ ಸರ್ಕಾರದ ಆರ್ಥಿಕ ನೀತಿಗಳ ನಡುವೆ ಏನೂ ವ್ಯತ್ಯಾಸವಿಲ್ಲ ಎಂಬ ಕಿಡಿಗೇಡಿ ಪ್ರಚಾರವನ್ನು ನಿರಂತರವಾಗಿ ನಡೆಸಿರುವ ಕೇಂದ್ರ ಸರ್ಕಾರ ಹಾಗೂ ಅದರ ಬೆಂಬಲಿಗರನ್ನು ಸುರ್ಜಿತ್ ತರಾಟೆಗೆ ತಗೊಂಡರು. ಪಶ್ಚಿಮ ಬಂಗಾಳ ಸರಕಾರ ಸಾರ್ವಜನಿಕ ವಲಯದ ಘಟಕಗಳನ್ನು ಮುಚ್ಚುತ್ತಿಲ್ಲ, ವಿದ್ಯುತ್ ವಲಯದಲ್ಲಿ ಜನಗಳ ಆಸಕ್ತಿಗಳನ್ನು ಸಂಪೂರ್ಣ ಮಾರಾಟ ಮಾಡುತ್ತಿರುವ ಎನ್ರೋನ್ ಮಾದರಿಯ ಒಪ್ಪಂದಗಳನ್ನು ನಡೆಸುತ್ತಿಲ್ಲ ಎಂದು ಅವರು ನೆನಪಿಸಿದರು. ಪ್ರಧಾನಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಆರ್ಥಿಕ ಸುಧಾರಣೆಗಳನ್ನು ಕುರಿತಂತೆ ಎಲ್ಲಾ ರಾಜಕೀಯ ಪಕ್ಷಗಳದ್ದು ಸಂಪೂರ್ಣ "ಸಮ್ಮತಿ" ಇದೆ ಎಂದು ಸದಾ ಹೇಳಿಕೊಳ್ಳುತ್ತಿದ್ದಾರೆ. ಆದರೆ ರಾಜ್ಯಸಭೆಯಲ್ಲಿ ಬಹುಮತವಿಲ್ಲದ್ದರಿಂದ ಪೇಟೆಂಟ್ ಮಸೂದೆಯನ್ನು ಪಾಸು ಮಾಡಿಸಿಕೊಳ್ಳಲು ಇನ್ನು ಅವರಿಗೆ ಆಗಿಲ್ಲ ಎಂದು ಸುರ್ಜಿತ್ ನೆನಪಿಸಿದರು.

ಸರ್ಕಾರದ ಪ್ರತಿಗ್ಯಾರಂಟಿಯಿರುವ ಏಳು ವಿದೇಶೀ ಹಣಕಾಸಿನ ವಿದ್ಯುತ್ ಯೋಜನೆಗಳ ವಿರುದ್ಧ ಹೋರಾಟದಲ್ಲಿ ಸಿಪಿಐ(ಎಂ) ಪಕ್ಷ ಬಿಜೆಪಿಯೊಡನೆ ಸಂಯೋಜಿತವಾಗಿ ಕೆಲಸ ನಡೆಸುವುದೇ ಎಂದು ಕೇಳಿದಾಗ ಇನ್ನು ಈ ಪ್ರಶ್ನೆಯ ಮೇಲೆ ಬಿಜೆಪಿಯೊಂದಿಗೆ ಸಂಯೋಜನೆಯಿಲ್ಲ ಆದರೆ "ನಾವು ತಳೆದ ನಿಲುವನ್ನು ಅವರು ಬೆಂಬಲಿಸಿದರೆ ನಮ್ಮ ಆಕ್ಷೇಪಣೆಯೇನೂ ಇಲ್ಲ" ಎಂದು ಸುರ್ಜಿತ್ ಉತ್ತರಿಸಿದರು. ಪೇಟೆಂಟ್ ಮಸೂದೆಯ ಪ್ರಶ್ನೆಯಲ್ಲೂ ಬಿಜೆಪಿ ಪಕ್ಷ ಎಡಪಕ್ಷಗಳು ತಳೆದಂತಹ ನಿಲುವನ್ನು ತಳೆದಿದೆ ಎಂಬ ಸಂಗತಿಯತ್ತ ಸುರ್ಜಿತ್ ಗಮನ ಸೆಳೆದರು.

ವಾಜಪೇಯಿಯವರೂ ಒಪ್ಪಿಕೊಳ್ಳಬೇಕಾಗಿ ಬಂತು

. ಉತ್ತರ ಪ್ರದೇಶದಲ್ಲಿ ಮಾಯಾವತಿ ಸರಕಾರವನ್ನು ಸ್ಥಾಪಿಸುವ ಬಿಜೆಪಿಯ ಸಂಪೂರ್ಣ ಅನೀತಿಯುತ ಕಸರತ್ತನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಹಾಗೂ ವಿ.ಹೆಚ್.ಪಿ. ಮತ್ತೊಮ್ಮೆ ಏಕಾತ್ಮತಾ ಯಾತ್ರೆಗಳು, ವಾರಣಾಸಿ, ಮಥುರಾಗಳಲ್ಲಿ ಚಳುವಳಿಗಳ ಮೂಲಕ ಕೋಮು ಭಾವೋದ್ವೇಗವನ್ನು ಬಡಿದೆಬ್ಬಿಸುತ್ತಿದೆ ಎಂದು ಖಂಡಿಸಿತು.

ಒಂದು ಸಮಾನ ನಾಗರಿಕ ಸಂಹಿತೆಯ ಪ್ರಶ್ನೆಯ ಬಗ್ಗೆ ಹೇಳುತ್ತಾ ಇದೊಂದು ಅಪೇಕ್ಷಣೀಯ ಗುರಿ, ಇದರ ಸಾಧನೆಗೆ "ಒಂದು ವಾತಾವರಣವನ್ನು ನಿರ್ಮಿಸಬೇಕು" ಎಂದರು. ಬಿಜೆಪಿ ಮತ್ತು ಇತರ ಸಂಕುಚಿತವಾದೀ ಶಕ್ತಿಗಳು ಹಿಂದೂ ಕಾನೂನುಗಳು ಉತ್ತಮವಾದವುಗಳು, ಅವು ಮಹಿಳೆಯರಿಗೆ ಸಮಾನತೆ ನೀಡಿವೆ ಎಂಬ ತಪ್ಪು ಭಾವನೆಯನ್ನು ಉದ್ದೇಶಪೂರ್ವಕವಾಗಿ ಹರಡುತ್ತಿವೆ ಎನ್ನುತ್ತಾ ಅವರು ಇತ್ತೀಚೆಗೆ ಅಟಲ್ ಬಿಹಾರಿ ವಾಜಪೇಯಿಯವರು ಕೂಡಾ ಹಿಂದೂ ಮಹಿಳೆಯರಿಗೆ ವಾಸದ ಹಕ್ಕು ಇದೆ, ಆದರೆ ಹಲವು ಸಂದರ್ಭಗಳಲ್ಲಿ ಆಸ್ತಿಯ ಪಾಲಿನ ಹಕ್ಕು ಇಲ್ಲ ಎಂದು ಒಪ್ಪಿಕೊಳ್ಳಬೇಕಾಗಿ ಬಂತು ಎಂದು ತಿಳಿಸಿದರು. ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವ ಹೋರಾಟವನ್ನು ಎಲ್ಲಾ ಕೋಮುಗಳು ಕೈಗೆತ್ತಿಕೊಳ್ಳಬೇಕು ಹಾಗೂ ಇದಕ್ಕಾಗಿ ಕಾನೂನುಗಳನ್ನು ತಿದ್ದುಪಡಿಗೊಳಿಸಬೇಕು ಎಂದು ಸುರ್ಜಿತ್ ಹೇಳಿದರು. ಹೀಗೆ ಸಮಾನ ಕಾನೂನುಗಳಿಗಾಗಿ ಹೋರಾಟದ ಮೂಲಕ ಅಂತಿಮವಾಗಿ ಒಂದು ಸಮಾನ ನಾಗರಿಕ ಸಂಹಿತೆಗೆ ಅಗತ್ಯವಾದ ವಾತಾವರಣ ನಿರ್ಮಿಸಬಹುದು ಎಂದು ಅವರು ಹೇಳಿದರು.

ಕೊಜೆಂಟ್ರಿಕ್ಸ್‌ನ ಮರುವಿಮರ್ಶೆ ಅತ್ಯಗತ್ಯ

ಪುಟ 1 ರಿಂದ

ಆರ್ಥಿಕ ನೀತಿಯ ಭಾಗವಾದ ಎನ್ರೋನ್ ಮಾದರಿಯನ್ನು ವಿರೋಧಿಸುತ್ತೇನೆನ್ನುವುದು ಕೂಡಾ ಉತ್ತರ ಪ್ರದೇಶ ಮಾದರಿಯ ಅದುರ ಗೋಸುಂಬೆತನಕ್ಕೆ, ರಾಜಕೀಯ ಸಮಯಸಾಧಕತನಕ್ಕೆ ಮತ್ತೊಂದು ಉದಾಹರಣೆಯಷ್ಟೆ.

ಜನತಾದಳದ ರಾಷ್ಟ್ರ ಮುಖಂಡರು ಕೂಡಾ ಎನ್ರೋನ್ ಯೋಜನೆಯ ರದ್ದು ಸಾರ್ವಜನಿಕ ಅಭಿಪ್ರಾಯಕ್ಕೆ ದೊರೆತ ವಿಜಯ ಎನ್ನುತ್ತಾ ಇಂತಹ ಎಲ್ಲಾ ಯೋಜನೆಗಳ ಮರುವಿಮರ್ಶೆ ನಡೆಸಬೇಕೆಂದೂ, ಪ್ರತಿ ಗ್ಯಾರಂಟಿ ಇರುವ ಎಲ್ಲಾ ವಿದ್ಯುತ್ ಯೋಜನೆಗಳನ್ನು ಜನತಾದಳ ವಿರೋಧಿಸುವುದಾಗಿ ಹೇಳಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಅದೇ ಪಕ್ಷದ ಮುಖಂಡರು ಇದು ಅನಗತ್ಯವಾಗಿ ರಾಜಕೀಯ ಶಕ್ತಿಯೊಂದಿಗೆ ವಿದ್ಯುತ್ ಶಕ್ತಿಯನ್ನು ಬೆರೆಸಿದ ಕ್ರಮವೆಂದು ಜರೆದಿದ್ದಾರೆ. ಕೊಜೆಂಟ್ರಿಕ್ಸ್ ಯೋಜನೆಯನ್ನು ಮತ್ತೆ ಸಮರ್ಥಿಸಿಕೊಂಡಿದ್ದಾರೆ.

1991ರಿಂದ 1995ರ ನರಸಿಂಹರಾಯರ ಹೊಸ ಆರ್ಥಿಕ ನೀತಿಗಳ ನಾಲ್ಕು ವರ್ಷ "ನಾಲ್ಕು ಹೆಜ್ಜೆ ಸೂರ್ಯನೆಡೆಗೆ" ಎಂದು ಅವರ ಇಲೆಕ್ಟ್ರಾನಿಕ್ಸ್, ತುತ್ತೂರಿಗಳಾದ ದೂರದರ್ಶನ-ಆಕಾಶವಾಣಿಗಳು ಈಗ ಪ್ರತಿದಿನ ಬಾರಿ ಬಾರಿಗೆ ಬೊಬ್ಬಿಡುತ್ತಿರುವಾಗ ಎನ್ರೋನ್ ತಮ್ಮನ್ನು ಸೂರ್ಯನೆಡೆಗಲ್ಲ ಕತ್ತಲೆಯೆಡೆಗೆ ತಳ್ಳುವ ಒಂದು ಹೆಜ್ಜೆ, ಅದನ್ನು ಖಂಡಿತ ಒಪ್ಪಲಾರೆವು ಎಂದು ಹೋರಾಡಿ ಗೆದ್ದಿದ್ದಾರೆ ಮಹಾರಾಷ್ಟ್ರದ ಜನತೆ. ಕರ್ನಾಟಕದ ದುಡಿಯುವ ಜನರೂ ತಾವು ನರಸಿಂಹರಾಯರ ನೀತಿಗಳೊಂದಿಗೆ ಕೊಜೆಂಟ್ರಿಕ್ಸ್‌ನ ಕೈ ಹಿಡಿದು ಕತ್ತಲೆಯತ್ತ ಹೆಜ್ಜೆ ಹಾಕಲು ಸಿದ್ಧರಿಲ್ಲ ಎಂದು ತೋರಿಸಿಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆಯನ್ನು ರದ್ದು ಮಾಡಬೇಕೆಂದು ಒತ್ತಾಯಿಸಿ ಈ ಪಿಕೆಟಿಂಗ್ ಗೆ ಕರೆ ನೀಡಿದೆ.

ಚುನಾವಣೆಗೆ ಕರ್ನಾಟಕದಲ್ಲಿ ತಯಾರಿ ಹೇಗೆ?

-ಪಿ.ರಾಮಚಂದ್ರರಾವ್

ಲೋಕಸಭಾ ಚುನಾವಣೆಯನ್ನು ನವಂಬರ್ ಡಿಸೆಂಬರ್ ನಲ್ಲಿ ದಿಢೀರನೇ ನಡೆಸಲಾಗುವುದೆಂದು ಪಿ.ವಿ. ನರಸಿಂಹರಾಯರು ಸಾರಬಹುದು, ಅಥವಾ ಅದು ಫೆಬ್ರವರಿ ಮಾರ್ಚ್ 1996 ಜರಗಬಹುದು. ಅದೇನೇ ಇರಲಿ, ಚುನಾವಣೆಗೆ ತಯಾರಿಯಂತೂ ಎಲ್ಲಾ ಪಕ್ಷಗಳಿಂದಲೂ ಆರಂಭವಾಗಿದೆ. ಕೆಲವು ಪಕ್ಷಗಳು ಸ್ವಲ್ಪ ಮುಂದೆ, ಇನ್ನೂ ಕೆಲವು ಪಕ್ಷಗಳೂ ಸ್ವಲ್ಪ ಹಿಂದೆ. ಇತ್ತೀಚೆಗೆ ದಿಲ್ಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯು ಈ ಕುರಿತು ತನ್ನ ಗಮನವನ್ನು ಹರಿಸಿದೆ. ಅದು ತನ್ನ 15ನೇ ಅಧಿವೇಶನದಲ್ಲಿ ಕೈಗೊಂಡ ತೀರ್ಮಾನವನ್ನು ಕಾಂಗ್ರೆಸ್ (ಐ) ಮತ್ತು ಬಿಜೆಪಿಗಳನ್ನು ಸೋಲಿಸುವ ತೀರ್ಮಾನವನ್ನು ಪುನರುಚ್ಚರಿಸಿದೆ.

ಕರ್ನಾಟಕದಲ್ಲಿ ಕೆಲಸ ಮಾಡಲು ಮುಂದಾಗುವ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನೂ ಅಂದಾಜು ಮಾಡುವುದು ಅವಶ್ಯಕವಾಗಿದೆ. ಮುಖ್ಯವಾಗಿ, ರಾಜ್ಯದ ಜನತೆ ಯಾವ ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ವಿವಿಧ ರಾಜಕೀಯ ಪಕ್ಷಗಳು ಯಾವ ರೀತಿ ವರ್ತಿಸುತ್ತಿವೆ, ಅವುಗಳ ನಡವಳಿಕೆಗೂ ಜನತೆಯ ಎದುರಿಸುತ್ತಿರುವ ಸಮಸ್ಯೆಗಳಿಗೂ ಏನೇನೂ ಸಂಬಂಧವಿದೆಯೇ ಎಂಬುದನ್ನು ಪರಿಶೀಲಿಸುವುದು ಉಚಿತ. ಈ ಅಂದಾಜಿನ ಆಧಾರದಲ್ಲಿ ಸಿಪಿಐ(ಎಂ) ಕಾರ್ಯೋನ್ಮುಖವಾದರೆ ಖಂಡಿತವಾಗಿ ನಾವು ಮುನ್ನಡೆ ಸಾಧಿಸಬಹುದು ಹಾಗೂ ಜನತೆಯ ಒಲವನ್ನು ಗಳಿಸಬಹುದು.

ರಾಜ್ಯದ ಜನರ ಸಮಸ್ಯೆಗಳು

ಜನತೆ ಎದುರಿಸುತ್ತಿರುವ ಸಮಸ್ಯೆಗಳು ಪ್ರಮುಖವಾಗಿ

1. ವಿಪರೀತವಾಗಿ ಬೆಲೆಯೇರಿಕೆ, ರಾಜ್ಯದಲ್ಲಿ ಗ್ರಾಮಾಂತರದಲ್ಲಾಗಲೀ, ನಗರಗಳನ್ನಾಗಲೀ ಯಾವುದೇ ಸಾಮಾನ್ಯ ಪ್ರಜೆಯನ್ನು ಕೇಳಿದರೆ ಈ ಸಮಸ್ಯೆ ಅವರ ಜೀವನವನ್ನು ಎಷ್ಟು ಗಂಭೀರವಾಗಿ ಬಾಧಿಸುತ್ತಿದೆ ಎಂಬುದರ ಅರಿವಾಗುವುದು.
2. ನಿರುದ್ಯೋಗ ವಿಪರೀತವಾಗಿ ಹೆಚ್ಚುತ್ತಿದೆ. ಕೃಷಿಯಲ್ಲಿ ಬಂಡವಾಳದ ಹೂಡಿಕೆ ಮಾಡಲು ಅಧಿಕಾಂಶ ರೈತರಿಗೆ ಸಾಧ್ಯವಾಗುತ್ತಿಲ್ಲ, ಸರಕಾರ ಈ ಕುರಿತು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದೆ. ಕೈಗಾರಿಕೆಯಲ್ಲಿ ವಿದೇಶಿ ಬಂಡವಾಳವು ಲಕ್ಷ ಲಕ್ಷಕೋಟಿಗಳಲ್ಲಿ ಸುರಿಯುವುದು ಎಂದು ಸರಕಾರೀ ವಕ್ತಾರರು ಹೇಳುತ್ತಾ ಬಂದುದೆಲ್ಲಾ 'ಬೊಗಳೆ ಮಾತು' ಎಂಬುದು ದಿನೇ ದಿನೇ ಸ್ಪಷ್ಟವಾಗುತ್ತಿದೆ. ಹೊಸ ಕೆಲವು ಕೈಗಾರಿಕೆಗಳು ಸ್ಥಾಪಿಸಿದ್ದರೂ ಅದರಿಂದ 'ನಿರುದ್ಯೋಗ ಪ್ರಮಾಣ'ವನ್ನು ಕಡಿಮೆ ಮಾಡುವುದರಲ್ಲಿ ಏನೂ ಸಹಾಯವಾಗುವುದಿಲ್ಲ, ಉದಾಹರಣೆಗೆ ವಿಜಯನಗರದ ಉಕ್ಕಿನ ಕಾರ್ಖಾನೆಯಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗ ಸಿಗುವುದೆಂಬ ಆಶೆ ಈಗ ಮರಿಚಿಕೆಯಾಗಿದೆ.
3. ವಿದ್ಯುಚ್ಛಕ್ತಿ ಉತ್ಪಾದನೆಗೂ, ವಿದ್ಯುಚ್ಛಕ್ತಿ ಆವಶ್ಯಕತೆಗೂ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಸರಕಾರವು ಈ ಕೊರತೆಯನ್ನು ಭರ್ತಿ ಮಾಡಲು ಈಗಾಗಲೇ ಕೈಗೆತ್ತಿಕೊಂಡು, ಅರ್ಧದಲ್ಲಿ ನಿಲ್ಲಿಸಿದ ಜಲವಿದ್ಯುತ್ ಯೋಜನೆಗಳನ್ನು ತ್ವರಿತಗತಿಯಿಂದ ಪೂರ್ಣಗೊಳಿಸುವುದಕ್ಕೆ ಗಮನ ಕೊಡುವ ಬದಲು, 'ಹೊಸ ತಂತ್ರಜ್ಞಾನವನ್ನು ಬಳಸಿ ವಿದ್ಯುಚ್ಛಕ್ತಿ ರವಾನೆಯಲ್ಲಿ ಸೋರಿಕೆ, ಆಗುವ ವಿದ್ಯುಚ್ಛಕ್ತಿಯನ್ನು ಉಳಿಸಲು ಪ್ರಯತ್ನಿಸುವುದಕ್ಕೆ ಗಮನ ಕೊಡುವುದರ ಬದಲು, ವಿದ್ಯುಚ್ಛಕ್ತಿಯ 'ಕಳ್ಳತನ'ವನ್ನು ನಿಲ್ಲಿಸಲು ದೃಢಕ್ರಮಗಳನ್ನು ಅನುಸರಿಸುವ ಬದಲು, ಕೊಜೆಂಟ್ರಿಕ್ಸ್ ನಂತಹ ವಿದೇಶೀ ಕಂಪೆನಿಗಳ ಜತೆ ಒಪ್ಪಂದ ಮಾಡಿ ವಿಪರೀತ ಬಂಡವಾಳ ಹಾಕಿ ವಿಪರೀತ ದರದಲ್ಲಿ ಮಾರಾಟ ಮಾಡಬಹುದಾದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದು ಇದಕ್ಕೆಲ್ಲಾ ಏಕಮೇವ ದಾರಿ ಎಂಬ ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ.
4. ಈಗಾಗಲೇ ಕೈಗೆತ್ತಿಗೊಂಡಿರುವ ನೀರಾವರಿ ಯೋಜನೆಗಳು ಹಾಗೆಯೇ ನಡುನೀರಿನಲ್ಲಿ ನಿಂತಿವೆ. ಕೇಂದ್ರ ಸರಕಾರವು 'ಹೊಸ ಆರ್ಥಿಕ ನೀತಿ'ಯ ನೆಪದಲ್ಲಿ ಒಂದು ದಮ್ಮಡಿ ಕಾಸನ್ನೂ ನೀರಾವರಿ ಯೋಜನೆಗಳಿಗೆ ಕೊಡುತ್ತಿಲ್ಲ, ರಾಜ್ಯ ಸರಕಾರವು 'ಇದೊಂದು ಜೀವನ್ಮರಣ ಪ್ರಶ್ನೆ, ಯುದ್ಧೋಪಾಧಿಯಲ್ಲಿ ಎಲ್ಲರ ವಿಶ್ವಾಸ ತೆಗೆದುಕೊಂಡು ನೀರಾವರಿ ಯೋಜನೆಗಳನ್ನು ಪೂರ್ತಿಗೊಳ್ಳಬೇಕೆಂಬ ನಿಲುವನ್ನು ತೆಗೆದುಕೊಂಡು ಕೆಲಸ ಮಾಡುತ್ತಿಲ್ಲ.
5. ರಾಜ್ಯವು 124 ತಾಲೂಕುಗಳಲ್ಲಿ ಬರಗಾಲವನ್ನು ಎದುರಿಸುತ್ತಿದೆ. ಹೆಚ್ಚಿನೆಡೆಗಳಲ್ಲಿ ಬೀಜ ಬಿತ್ತುವ ಕೆಲಸ ನಡೆಯಲಿಲ್ಲ, ಜಾನುವಾರುಗಳು ಹುಲ್ಲು ಕಾಣದೆ ಬಳಲುತ್ತಿವೆ. ಗ್ರಾಮಾಂತರದ ಜನ ಕೆಲಸ ಹುಡುಕಿಕೊಂಡು ದೂರದೂರದ ಪ್ರದೇಶಗಳಿಗೆ ವಲಸೆ ಹೋಗುವ ಸ್ಥಿತಿ ಉಂಟಾಗಿದೆ. ಸಾವಿರಾರು ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ಕುಡಿಯುವ ನೀರಿನ ಬರವುಂಟಾಗಿದೆ. ಪರಿಣಾಮ ಎಲ್ಲಾ ಕಾಮಗಾರಿಗಳು ಹಣವಿಲ್ಲದೆ ಸ್ಥಗಿತವಾಗುತ್ತಿವೆ ಮತ್ತು ಬಡತನ ವಿರೋಧಿ ಕಲ್ಯಾಣ ಕಾರ್ಯಕ್ರಮಗಳು ಈಗಾಗಲೇ ಸ್ಥಗಿತಗೊಂಡಿವೆ.

ಆಳುವ ಜನತಾದಳವು ಈ ಸಮಸ್ಯೆಗಳನ್ನು ಖಡಾಖಂಡಿತವಾಗಿ ಎದುರಿಸುವ ಬದಲು-ಕಂಡೂ ಕಾಣದಿರುವಂತೆ ವರ್ತಿಸುತ್ತಿದೆ. ತನ್ನದೇ ಭ್ರಮಾ ಲೋಕದಲ್ಲಿ ತಿರುಗಾಡುತ್ತಿದೆ.. ಹಿಂದಿನ ಕಾಂಗ್ರೆಸ್ (ಐ) ಸರಕಾರ ಹಾಕಿದ ದಾರಿಯನ್ನೇ ತುಳಿಯುತ್ತಿದೆ. ವಿಶಾಲ ಜನ ವಿಭಾಗಗಳ ವಿಶ್ವಾಸಕ್ಕೆ ತೆಗೆದುಕೊಂಡು ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಹರಿಸಲು ಧೋರಣೆಗಳನ್ನು ರೂಪಿಸಲು ಮುಂದಾಗುತ್ತಿಲ್ಲ.

ಇನ್ನು ಕಾಂಗ್ರೆಸ್(ಐ) ಚುನಾವಣೆಗಳ ನಂತರ ಕುಸಿದು ಬಿದ್ದದ್ದು ಇನ್ನೂ ಎಚ್ಚರಿಕೆಯಾಗಲಿಲ್ಲ, ಅವರ ಎಲ್ಲಾ ದೃಷ್ಟಿ ಹೊಸ ಕಾಂಗ್ರೆಸ್ (ಐ) ಅಧ್ಯಕ್ಷರನ್ನು ಕೆ.ಪಿ.ಸಿ.ಸಿ.ಗೆ ದಿಲ್ಲಿಯಿಂದ ನೇಮಕ ಮಾಡಿಕೊಳ್ಳುವುದರಲ್ಲೇ ಕಳೆಯುತ್ತಾ ಬಂದಿದೆ. ಇದೀಗ ದಿಲ್ಲಿಯಿಂದ ಹೊಸ ಅಧ್ಯಕ್ಷರ ಡಿ.ಕೆ. ನಾಯ್ಕರು ಎಂದೂ ಜತೆಗೆ ಎಂಟು ಮಂದಿ ಉಪಾಧ್ಯಕ್ಷರು, ಹನ್ನೆರಡು ಮಂದಿ ಪ್ರಧಾನ ಕಾರ್ಯದರ್ಶಿಗಳು, ಇಪ್ಪತ್ತು ಮಂದಿ ಜಂಟಿ ಕಾರ್ಯದರ್ಶಿಗಳು ಯಾರ್‍ಯಾರು, ಖಜಾಂಚಿ, ಕಾರ್ಯಕಾರಿ ಸಮಿತಿ ಸದಸ್ಯರು, ಖಾಯಂ ಆಮಂತ್ರಿತರು ಯಾರ್‍ಯಾರು ಎಂದೆಲ್ಲಾ ದಿಲ್ಲಿಯಿಂದ ನೇಮಕಕೊಂಡು ಪ್ರಕಟವಾಗಿದೆ. ಪಿ.ವಿ. ನರಸಿಂಹರಾಯರು ಈ ರೀತಿ ಕಾಂಗ್ರೆಸ್ ಸಮಿತಿಯನ್ನು ಪುನರ್ರಚಿಸಿ ಕಾಂಗ್ರೆಸ್(ಐ)ಯಲ್ಲಿರುವ ಎಲ್ಲಾ ಬಣಗಳನ್ನು ಸಂತೃಪ್ತಿಗೊಳಿಸಲು ಪ್ರಯತ್ನಿಸಿದ್ದಾರೆ. ಈ ಕಸರತ್ತು ಮುಂದಿನ ಚುನಾವಣೆಗಳನ್ನು ಎದುರಿಸಲು ಕಾಂಗ್ರೆಸ್ (ಐ)ಗೆ ಎಷ್ಟು ಸಹಾಯಕವಾಗಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಅದೇ ವೇಳೆ ಬಿಜೆಪಿಯು ದೇಶದಲ್ಲಿ ಮಾತ್ರವಲ್ಲ ರಾಜ್ಯದಲ್ಲಿ ಇನೇನು ಈ ಸರ್ತಿ ಪಾರ್ಲಿಮೆಂಟು ಚುನಾವಣೆಗಳಲ್ಲಿ ಜನತೆ ತಮ್ಮ ಕೊರಳಿಗೆ ಹೂಮಾಲೆ ಹಾಕಲು ಈಗಾಗಲೇ ಸಿದ್ಧವಾಗಿ ನಿಂತಿದೆ ಎಂಬ ಧಾಟಿಯಲ್ಲಿ ವರ್ತಿಸಲು ಆರಂಭಿಸಿದೆ. ಈವರೆಗೆ ಕೊಜೆಂಟ್ರಿಕ್ಸ್ ಬಗ್ಗೆ ಚಕಾರ ಶಬ್ದ ಎತ್ತದವರು ಈಗ ಬೆಳಿಗ್ಗಿನಿಂದ ಸಂಜೆಯವರೆಗೆ ಅದೇ ಮಂತ್ರವನ್ನು ಜಪಿಸುತ್ತಿದ್ದಾರೆ. ಬರಗಾಲ ರಾಜ್ಯದಲ್ಲಿ ಬಂದಿರುವಾಗ ಅದರ ಪರಿಹಾರಕ್ಕೆ ಅವರ ಬಳಿಯಿರುವ ಕೋಟ್ಯಂತರ ಹಣವನ್ನು ವೆಚ್ಚಮಾಡುವ ಬದಲು, ದಿಲ್ಲಿಗೆ ಹೋಗಿ ಪ್ರಧಾನಿಗಳನ್ನು ಕಂಡು ರಾಜ್ಯಕ್ಕೆ 200-300 ಕೋಟಿ ಹಣ ಕೊಡಬೇಕೆಂದು -ತಾವೇ ಆಡಳಿತೆಯಲ್ಲಿ ಇರುವವರ ಹಾಗೆ -ವಿನಂತಿಸಿಕೊಂಡಿದ್ದಾರೆ. ದಿನನಿತ್ಯ ಅವರ ಎಲ್ಲಾ ವಕ್ತಾರರು ಹೇಳಿಕೆಗಳನ್ನು ಕೊಟ್ಟು ಪತ್ರಿಕೆಗಳು ಅವರಿಗೆ ಬಹಳಷ್ಟು ಅವಕಾಶ ಒದಗಿಸುವ ನೀತಿ ಜನತೆಯನ್ನು ಗಲಿಬಿಲಿಗೊಳಿಸಲು ಹಾಗೂ ಈ ರಾಜ್ಯದಲ್ಲಿ ತಮ್ಮದೇ ನಿಜವಾದ ಪಕ್ಷ ಎಂಬ ಭ್ರಮೆಯನ್ನು ಹುಟ್ಟಿಸಲು ಪ್ರಯತ್ನಿಸುತ್ತಿದೆ.

ಎಲ್ಲಾ ಹಿನ್ನೆಲೆಯಲ್ಲಿ ಸಿಪಿಐ(ಎಂ) ಸಾಧ್ಯವಾದರೆ ಇತರರು ಎಡಪಕ್ಷಗಳ ಜತೆ-ಎಲ್ಲಾ ಸಾಮೂಹಿಕ ಸಂಘಟನೆಗಳು ಜನತೆಯ ಸಮಸ್ಯೆಗಳನ್ನು ಕೈ ಗೆತ್ತಿ ಅವುಗಳಿಗಿರುವ ನಿಜವಾದ ಪರಿಹಾರ ಮಾರ್ಗವನ್ನು ಪರ್ಯಾಯ ಧೋರಣೆಗಳನ್ನು ಸೂಚಿಸುತ್ತಾ ಚಳವಳಿ ಹೋರಾಟಗಳನ್ನು ಮಾಡಲು ಮುನ್ನಗ್ಗಬೇಕಾಗಿದೆ.

ಇದೇ ಚುನಾವಣೆಗಳಿಗೆ ನಮ್ಮ ತಯಾರಿಯಾಗಬೇಕಾಗಿದೆ